ರೈಲು ಮೂಲಸೌಕರ್ಯ ಅಭಿವೃದ್ಧಿ ಕಂಪನಿ (ಕರ್ನಾಟಕ) ಲಿಮಿಟೆಡ್

ಎಸ್ಐಎ & ಆರ್ ಪಿಎಫ್ ವರದಿ(ಅಂತಿಮ ಕರಡು)

# ಬೆಂಗಳೂರು ಉಪನಗರ ರೈಲ್ವೆ ಯೋಜನೆಗಾಗಿ ಸಾಮಾಜಿಕ ಪರಿಣಾಮ ಮೌಲ್ಯಮಾಪನ & ಮರುಸ್ಥಾಪನೆ ನೀತಿಯ ಚೌಕಟ್ಟು

ಮಾರ್ಚ್ 2024



ಸಲ್ಲಿಸಿರುವವರು:

**ಮೂಲಸೌಕರ್ಯ ಅಭಿವೃದ್ಧಿ ನಿಗಮ (ಕರ್ನಾಟಕ) ಲಿಮಿಟೆಡ್**

9/7, ಕೆ.ಸಿ.ಎನ್. ಭವನ
ಯಮುನಾಬಾಯಿ ರಸ್ತೆ, ಮಾಧವನಗರ
ಎಕ್ಸ್ ಟನ್ಶನ್, ರೇಸ್ ಕೋರ್ಸ್ ರಸ್ತೆ
ಎದುರು, ಬೆಂಗಳೂರು - 560001
ದೂರವಾಣಿ: +9180 –43448000.
ಫ್ಯಾಕ್ಸ್: +9180 –43448001

**ಅಧ್ಯಾಯ 1.**

## <u>ಕಾರ್ಯನಿರ್ವಾಹಣಾ ಸಾರಾಂಶ</u>

### 1.1. ಯೋಜನೆಯ ಹಿನ್ನೆಲೆ

ಭಾರತದಲ್ಲಿ ಕರ್ನಾಟಕ ರಾಜ್ಯದ ರಾಜಧಾನಿಯಾಗಿರುವ ಬೆಂಗಳೂರು, ಕಳೆದ ಕೆಲವು ವರ್ಷಗಳಲ್ಲಿ ಗಮನಾರ್ಹವಾಗಿ ಜನಸಂಖ್ಯೆಯ ಏರಿಕೆ ಕಾಣುತ್ತಿರುವ ಅತಿದೊಡ್ಡ ನಗರವಾಗಿದೆ: 2022 ರ ಅಂಕಿ-ಅಂಶಗಳ ಅನುಸಾರ ಬೆಂಗಳೂರು ಮಹಾನಗರದ ಪ್ರಸ್ತುತ ಜನಸಂಖ್ಯೆ 13,193,000 ಆಗಿದೆ. ಈ ಪ್ರಮಾಣ 2021ಕ್ಕೆ ಹೋಲಿಸಿದರೆ ಶೇ.3.35ರಷ್ಟು ಹೆಚ್ಚಳವಾಗಿದೆ. 2021 ರಲ್ಲಿ ಬೆಂಗಳೂರು ಮಹಾನಗರದ ಜನಸಂಖ್ಯೆಯು 12,765,000 ಆಗಿತ್ತು. ಅದು 2020ಕ್ಕೆ ಹೋಲಿಸಿದರೆ ಶೇ. 3.55ರಷ್ಟು ಹೆಚ್ಚಳ. ಹಾಗೆಯೇ 2020 ರಲ್ಲಿ ಬೆಂಗಳೂರು ನಗರದ ಜನಸಂಖ್ಯೆಯು 12,327,000 ಆಗಿತ್ತು. ಅದು 2019ಕ್ಕೆ ಹೋಲಿಸಿದರೆ ಶೇ. 3.74ರಷ್ಟು ಹೆಚ್ಚಳ. ದೇಶದಲ್ಲಿ ಬೆಂಗಳೂರು ಅತಿ ಹೆಚ್ಚು ಜನಸಂಖ್ಯೆ ಹೊಂದಿರುವ ಮೂರನೇ ನಗರವಾಗಿದೆ. ಇದು ದಕ್ಷಿಣ ಭಾರತದಲ್ಲಿನ 'ಡೆಕ್ಕನ್ ಪ್ರಸ್ಥಭೂಮಿ'ಯಲ್ಲಿದೆ. ಸಮುದ್ರ ಮಟ್ಟದಿಂದ ಸುಮಾರು 3,113 ಅಡಿ (948.48 ಮೀಟರ್) ಎತ್ತರದಲ್ಲಿರುವ ಬೆಂಗಳೂರು ವರ್ಷವಿಡೀ ತನ್ನ ಆಹ್ಲಾದಕರ ವಾತಾವರಣಕ್ಕೆ ಹೆಸರುವಾಸಿಯಾಗಿದೆ. ಭಾರತದ ಪ್ರಮುಖ ನಗರಗಳ ಪೈಕಿ ಬೆಂಗಳೂರು ಅತಿ ಎತ್ತರದಲ್ಲಿದೆ.

ರಾಷ್ಟ್ರದ ಪ್ರಮುಖ ಮಾಹಿತಿ ತಂತ್ರಜ್ಞಾನ (IT) ರಫ್ತುದಾರನಾಗಿರುವ ಬೆಂಗಳೂರು, ಈ ಕಾರಣದಿಂದಾಗಿ "ಭಾರತದ ಸಿಲಿಕಾನ್ ವ್ಯಾಲಿ" (ಅಥವಾ "ಭಾರತದ IT ರಾಜಧಾನಿ") ಎಂದು ವ್ಯಾಪಕವಾಗಿ ಪರಿಗಣಿಸಲ್ಪಟ್ಟಿದೆ. ದೇಶದ ಪ್ರತಿಷ್ಠಿತ ತಾಂತ್ರಿಕ ಸಂಸ್ಥೆಗಳು ಬೆಂಗಳೂರಿನಲ್ಲಿ ಪ್ರಧಾನ ಕಚೇರಿಯನ್ನು ಹೊಂದಿವೆ. ವೈವಿಧ್ಯಮಯ ಜನಸಂಖ್ಯೆಯನ್ನು ಹೊಂದಿರುವ ನಗರವಾಗಿರುವ ಬೆಂಗಳೂರು, ಭಾರತದಲ್ಲಿ ವೇಗವಾಗಿ ಬೆಳೆಯುತ್ತಿರುವ ಎರಡನೇ ಪ್ರಮುಖ ಮಹಾನಗರವಾಗಿದೆ. ನಗರ ಪ್ರದೇಶದ ಮೆಟ್ರೋ ಆರ್ಥಿಕತೆಯ ಅನುಸಾರ ಇತ್ತೀಚಿನ ಅಂದಾಜುಗಳಂತೆ, ಭಾರತದ ಅತಿಹೆಚ್ಚು ಉತ್ಪಾದಕ ಮಹಾನಗರಗಳಲ್ಲಿ ಬೆಂಗಳೂರನ್ನು ನಾಲ್ಕನೇ ಅಥವಾ ಐದನೇ ಸ್ಥಾನದಲ್ಲಿ ಪರಿಗಣಿಸಲಾಗಿದೆ. ಇದು ಅನೇಕ ಶೈಕ್ಷಣಿಕ ಮತ್ತು ಸಂಶೋಧನಾ ಸಂಸ್ಥೆಗಳಿಗೆ ನೆಲೆಯಾಗಿದೆ. ಹಲವಾರು ಸರ್ಕಾರಿ ಸ್ವಾಮ್ಯದ ವೈಮಾನಿಕ ಮತ್ತು ರಕ್ಷಣಾ ವಲಯದ ಸಂಸ್ಥೆಗಳು ಬೆಂಗಳೂರಿನಲ್ಲಿವೆ. ಅಲ್ಲದೆ ನಗರವು, ಕನ್ನಡ ಚಲನಚಿತ್ರೋದ್ಯಮ ಹಾಗೂ ಕ್ರೀಡಾಕೂಟಗಳ ಕೇಂದ್ರವಾಗಿದೆ. ಸುಗಮ ಜೀವನ (ಈಸ್ ಆಫ್ ಲಿವಿಂಗ್) ಸೂಚ್ಯಂಕ-2020

ರ ಅಡಿಯಲ್ಲಿ  ಹತ್ತು ಲಕ್ಷಕ್ಕಿಂತಲೂ ಅಧಿಕ ಜನಸಂಖ್ಯೆಯನ್ನು ಹೊಂದಿರುವ ನಗರಗಳ ಪೈಕಿ ಬೆಂಗಳೂರು, ಅತ್ಯಂತ ವಾಸಯೋಗ್ಯ ಭಾರತೀಯ ನಗರ ಎಂದು ಶ್ರೇಯಾಂಕ ಪಡೆದಿದೆ.

ಬೆಂಗಳೂರಿನ ಸಾರಿಗೆ ವ್ಯವಸ್ಥೆಯು, ಬೆಂಗಳೂರು ಮೆಟ್ರೋಪಾಲಿಟನ್ ಟ್ರಾನ್ಸ್‌ಪೋರ್ಟ್ ಕಾರ್ಪೊರೇಶನ್ (BMTC) ಬಸ್‌ಗಳು, 'ನಮ್ಮ ಮೆಟ್ರೋ' ರೈಲು ಸೇವೆಗಳು, ಟ್ಯಾಕ್ಸಿಗಳು ಮತ್ತು ಆಟೋ ರಿಕ್ಷಾಗಳಂತಹ ಹಲವಾರು ಪ್ರಯಾಣದ ವಿಧಾನಗಳನ್ನು ಒಳಗೊಂಡಿದೆ. 2018–19 ರ ಆರ್ಥಿಕ ವರ್ಷದ ಕೊನೆಯಲ್ಲಿ, ಬೆಂಗಳೂರು ನಗರದಲ್ಲಿ 80 ಲಕ್ಷಕ್ಕೂ ಹೆಚ್ಚು (ಅಂದರೆ 8 ಮಿಲಿಯನ್) ವಾಹನಗಳನ್ನು ನೋಂದಾಯಿಸಲಾಗಿದೆ.  ಇದು ದೆಹಲಿ(1)ಯನ್ನು ಹೊರತುಪಡಿಸಿದರೆ ದೇಶದಲ್ಲೇ ಅತಿ ಹೆಚ್ಚು. ಇನ್ನು ಬೆಂಗಳೂರು, 55 ಲಕ್ಷಕ್ಕೂ ಹೆಚ್ಚು ದ್ವಿಚಕ್ರ ವಾಹನಗಳು (ಮೋಟಾರ್ ಸೈಕಲ್‌ಗಳು) ಮತ್ತು 15 ಲಕ್ಷ ಕಾರುಗಳು ಹೊಂದಿದ್ದು ಒಟ್ಟು ವಾಹನಗಳ ಪೈಕಿ ಈ ಎರಡರ ಪ್ರಮಾಣ ಶೇ. 85ರಷ್ಟಿದೆ(2). 2018 ರ ವರದಿಯಂತೆ, ಬೆಂಗಳೂರು ದೇಶದಲ್ಲಿ ಎರಡನೇ ಅತಿ ಹೆಚ್ಚು ದ್ವಿಚಕ್ರ ವಾಹನಗಳನ್ನು ಹೊಂದಿದೆ(3). ಆದಾಗ್ಯೂ, ಬೆಂಗಳೂರಿನ ಕಾರುಗಳ ಪ್ರಮಾಣ (ಪ್ರತಿ ಕಿಲೋಮೀಟರ್ ರಸ್ತೆಗೆ ಕಾರುಗಳ ಸಂಖ್ಯೆ), 149 ಆಗಿದೆ . ಈ ಸಂಖ್ಯೆ ಇತರ ಪ್ರಮುಖ ಭಾರತೀಯ ನಗರಗಳಿಗಿಂತ ಕಡಿಮೆ. ಅಪ್ಲಿಕೇಶನ್ ಆಧಾರಿತ ಬಾಡಿಗೆ ಮೋಟಾರು ಸೈಕಲ್‌ಗಳು, ಬೈಸಿಕಲ್‌ಗಳು ಮತ್ತು ಕಾರುಗಳು ಸಹ ನಗರದಲ್ಲಿ ಪ್ರಯಾಣಕ್ಕಾಗಿ ಲಭ್ಯವಿದೆ.

ಬೆಂಗಳೂರಿನ ಜನಸಂಖ್ಯೆ ವೇಗವಾಗಿ ಬೆಳೆಯುತ್ತಿದೆ. ಕಳೆದ ಎರಡು ದಶಕಗಳಲ್ಲಿ ವಾಹನಗಳ ಸಂಖ್ಯೆಯಲ್ಲಿ ವಿಶೇಷವಾಗಿ ದ್ವಿಚಕ್ರ ಮತ್ತು ನಾಲ್ಕು ಚಕ್ರದ ವಾಹನಗಳ ಸಂಖ್ಯೆಯಲ್ಲಿ ಅಸಾಧಾರಣ ಬೆಳವಣಿಗೆ ಕಂಡುಬಂದಿದೆ. ಸಾರ್ವಜನಿಕ ಸಾರಿಗೆ ವ್ಯವಸ್ಥೆ ಅಗತ್ಯಕ್ಕೆ ತಕ್ಕಂತೆ ಇಲ್ಲದಿರುವುದರ ಕಾರಣ, ಜನರು ವೈಯಕ್ತಿಕ ಸಾರಿಗೆ ವಿಧಾನಗಳನ್ನು ಬಳಸುತ್ತಿದ್ದಾರೆ.  ಇದು ನಗರದ ಸೀಮಿತ ರಸ್ತೆ ಜಾಲದಲ್ಲಿ ವಾಹನ ದಟ್ಟಣೆಗೆ ಕಾರಣವಾಗಿದೆ; ಅಷ್ಟೇ ಅಲ್ಲ ಪರಿಸರ ಮಾಲಿನ್ಯವನ್ನು ಹೆಚ್ಚಿಸುತ್ತಿದೆ. ಬೆಂಗಳೂರಿನ ನಾಗರಿಕರು ಪ್ರತಿ ವರ್ಷ ಸರಾಸರಿ 240 ಗಂಟೆಗಳಿಗಿಂತ ಹೆಚ್ಚು ಕಾಲ ಸಂಚಾರ ದಟ್ಟಣೆಯಲ್ಲಿ (ಟ್ರಾಫಿಕ್) ಸಿಲುಕಿಕೊಳ್ಳುತ್ತಾರೆ. ಇದರಿಂದಾಗುವ ಸಮಯ ವ್ಯರ್ಥದಿಂದಾಗಿ, ಉತ್ಪಾದಕತೆಯ ನಷ್ಟ, ವಾಯು ಗುಣಮಟ್ಟ ಕಳಪೆ, ಜೀವನದ ಗುಣಮಟ್ಟ ಇಳಿಕೆ ಹಾಗೂ ಸರಕು ಮತ್ತು ಸೇವೆಗಳ ವೆಚ್ಚ ಹೆಚ್ಚಳವಾಗಿದೆ.

ಆದ್ದರಿಂದ, ಮೇಲಿನ ಸಮಸ್ಯೆಯನ್ನು ನಿವಾರಿಸಲು, ರೈಲ್ವೆ ಮೂಲಸೌಕರ್ಯ ಅಭಿವೃದ್ಧಿ ಸಂಸ್ಥೆ (ಕರ್ನಾಟಕ) ನಿಗಮ- (ರೈಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಕಂಪನಿ (ಕರ್ನಾಟಕ) ಲಿಮಿಟೆಡ್ (ಕೆ ರೈಡ್) ಸ್ಥಾಪಿಸಲಾಗಿದ್ದು, ಇದರ – ಮುಖ್ಯ ಕಚೇರಿ ನಂ. 8, 1 ನೇ ಮಹಡಿ, ಸಂಪರ್ಕ ಸೌಧ, ಡಾ. ರಾಜ್‌ಕುಮಾರ್ ರಸ್ತೆ, ಓರಿಯನ್ ಮಾಲ್ ಎದುರು, ರಾಜಾಜಿನಗರ 1 ನೇ ಬ್ಲಾಕ್, ಬೆಂಗಳೂರು– 560010 –ಇಲ್ಲಿದೆ. ಈ ಸಂಸ್ಥೆ ಕರ್ನಾಟಕ ಸರ್ಕಾರ ಮತ್ತು ರೈಲ್ವೆ ಸಚಿವಾಲಯದ ನಡುವಿನ ಜಂಟಿ ಉದ್ಯಮವಾಗಿ ಸಂಯೋಜಿಸಲ್ಪಟ್ಟಿದೆ. ಈ ಸಂಸ್ಥೆಗೆ ಬೆಂಗಳೂರು ಉಪನಗರ ರೈಲ್ವೆ ಯೋಜನೆಯನ್ನು (BSRP) ಕಾರ್ಯಗತಗೊಳಿಸುವ ಜವಾಬ್ದಾರಿ ವಹಿಸಲಾಗಿದೆ. ಇದು 6 ವರ್ಷಗಳ ಅವಧಿಯಲ್ಲಿ, 4 ಮೀಸಲಾದ ರೈಲ್ವೆ ಕಾರಿಡಾರ್‌ಗಳ ನಿರ್ಮಾಣವನ್ನು ಕಲ್ಪಿಸುವ ಹೊಸ ಉಪನಗರ ರೈಲ್ವೆ ಯೋಜನೆಯಾಗಿದೆ. ಇದು ಬೆಂಗಳೂರನ್ನು ಅದರ ಸ್ಯಾಟಲೈಟ್ ಟೌನ್‌ಶಿಪ್‌ಗಳು, ಉಪನಗರ ಹಾಗೂ ಸುತ್ತಮುತ್ತಲಿನ ಪ್ರದೇಶಗಳಿಗೆ ಸಂಪರ್ಕಿಸುತ್ತದೆ. ಅಲ್ಲದೆ ಸಾಮೂಹಿಕ ರೈಲು ಆಧಾರಿತ ಕ್ಷಿಪ್ರ ಸಾರಿಗೆ ವ್ಯವಸ್ಥೆಯನ್ನು ಒದಗಿಸುತ್ತದೆ. ಈ ಯೋಜನೆಯಲ್ಲಿ ಪ್ರತಿ ದಿನಕ್ಕೆ ಅಂದಾಜು 1.4 ದಶಲಕ್ಷ ಪ್ರಯಾಣಿಕರು ಸಂಚಾರ ಮಾಡುವ ನಿರೀಕ್ಷೆ ಇದೆ.

[1] *The Hindu*. 1 April 2019. Retrieved 15 October2019.

[2] *Deccan Herald*. Retrieved 15 October 2019.

[3] *The Times of India*. Retrieved 17 October2019.

[4] *Business Today*. 25 March 2019. Retrieved 17 October 2019.

## 1.2. ಸಾಮಾಜಿಕ ಪರಿಣಾಮ ಅಂದಾಜು (SIA) ಅಧ್ಯಯನದ ವ್ಯಾಪ್ತಿ

ಸಾಮಾಜಿಕ ಪರಿಣಾಮ ಅಂದಾಜು-SIA ಮತ್ತು ಪ್ರಾಥಮಿಕ ಪುನರ್ ವಸತಿ ನೀತಿ ಸಂರಚನೆ-RPF ಅನ್ನು ಭಾರತ ಸರ್ಕಾರ, ಕರ್ನಾಟಕ ಸರ್ಕಾರ, ಯುರೋಪಿಯನ್ ಇನ್ವೆಸ್ಟ್ ಮೆಂಟ್ ಬ್ಯಾಂಕ್ (EIB) ಹಂತ -6 ರ ಮಾರ್ಗಸೂಚಿಗಳಿಗೆ ಅನುಗುಣವಾಗಿ ಸಿದ್ಧಪಡಿಸಲಾಗಿದೆ. ಅನೈಚ್ಛಿಕ ಪುನರ್ವಸತಿ ಮತ್ತು KfW (ಕೆ ಎಫ್ ಡಬ್ಲ್ಯೂ) ವಿಶ್ವ ಬ್ಯಾಂಕ್ (WB) ಪರಿಸರ ಮತ್ತು ಸಾಮಾಜಿಕ ಮಾನದಂಡ (ESS) ಹಂತ- 5 ಅನುಸಾರ, "ಭೂಮಿ ಸ್ವಾಧೀನ, ಭೂ ಬಳಕೆಯ ಮೇಲಿನ ನಿರ್ಬಂಧಗಳು ಮತ್ತು ಅನೈಚ್ಛಿಕ ಪುನರ್ವಸತಿ" ಸೂಚನೆಗಳನ್ನು ಅಳವಡಿಸಿಕೊಳ್ಳಲಾಗಿದೆ. ಯೋಜನೆಯ ಒಟ್ಟಾರೆ ಸಾಮಾಜಿಕ, ಆರ್ಥಿಕ,

ಸಾಂಸ್ಕೃತಿಕ ಮತ್ತು ಧಾರ್ಮಿಕ ಅಂಶಗಳನ್ನು ತಿಳಿಯಲು ಪ್ರಾಥಮಿಕ ಮತ್ತು ಮಾಧ್ಯಮಿಕ ಸಮೀಕ್ಷೆ; ಮತ್ತು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆಗಳನ್ನು ನಡೆಸುವ ಮೂಲಕ SIA ಕೈಗೊಳ್ಳಲಾಗುತ್ತದೆ. ಸಂತ್ರಸ್ತರ ಪುನರ್ವಸತಿಗೆ ಸ್ಥಳೀಯವಾಗಿ ಸಂಬಂಧಿತ ವಿಧಾನದ ಅಭಿವೃದ್ಧಿಯನ್ನು ಅಳವಡಿಸಲು, ಆ ಪ್ರದೇಶದ ಜನರಿಗೆ ಪ್ರಯೋಜನಗಳನ್ನು ಒದಗಿಸುವ ಸಲುವಾಗಿ, ಪ್ರದೇಶದ ನಿರ್ದಿಷ್ಟ ಸಾಮಾಜಿಕ ಮೌಲ್ಯಮಾಪನವನ್ನು ನಡೆಸಲು, ಇದು ನೆರವಾಗುತ್ತದೆ. ಸಾಮಾಜಿಕ-ಆರ್ಥಿಕ ಸಮೀಕ್ಷೆಯನ್ನು ಯೋಜನೆಯ ಮಾರ್ಗದುದ್ದ (RoW), ನಿಲ್ದಾಣಗಳು ಮತ್ತು ಡಿಪೋ /ಸೌಲಭ್ಯ ಪ್ರದೇಶದೊಳಗೆ ನೆಲೆಗೊಂಡಿರುವ ಎಲ್ಲಾ ಬಾಧಿತ ಕುಟುಂಬಗಳಿಗಾಗಿ ನಡೆಸಲಾಗುತ್ತದೆ.

ಸಾಮಾಜಿಕ ಮೌಲ್ಯಮಾಪನವು ಲಿಂಗ ಮತ್ತು ಬಡತನ ಸಮಸ್ಯೆಗಳು ಮತ್ತು ಸ್ಥಳೀಯ ಅಂಶಗಳನ್ನು ಒಳಗೊಂಡಿದೆ. "ಸ್ಥಳೀಯ ಅಂಶಗಳು" ಎಂಬ ಪದವು ಭೂಸ್ವಾಧೀನ, ಜೀವನೋಪಾಯದ ಪುನರ್ ಸ್ಥಾಪನಾ ಯೋಜನೆ ಇತ್ಯಾದಿಗಳನ್ನು ಒಳಗೊಂಡಿರುತ್ತದೆ. ಹೀಗಾಗಿ PAH ಗಳು, ಪುನರ್ವಸತಿ ಜಮೀನು ಮತ್ತು ಭೂಸ್ವಾಧೀನ/ ಯೋಜನೆಯ ಪರಿಣಾಮಗಳ ವ್ಯಾಪ್ತಿ ಮತ್ತು ಪ್ರಮಾಣವನ್ನು ನಿರ್ಧರಿಸುತ್ತದೆ. ಅಲ್ಲದೆ ಮನೆಗಳು, ಜಮೀನುಗಳು, ವ್ಯವಹಾರಗಳ ಸಂಭವನೀಯ ನಷ್ಟಗಳನ್ನು ಪಟ್ಟಿ ಮಾಡುತ್ತದೆ. ಆದಾಯದ ಅವಕಾಶಗಳು ಹಾಗೂ ಬಾಧಿತ ಸಮುದಾಯದ ಆಸ್ತಿಗಳು ಮತ್ತು ಸಾರ್ವಜನಿಕ ಕಟ್ಟಡಗಳು, ಇತ್ಯಾದಿ ವಿವರಗಳನ್ನು ಒಳಗೊಂಡಿರುತ್ತದೆ. ಇದು ಸುರಕ್ಷತೆಯ ಕಾಳಜಿಗಳು, ಬಾಲ ಕಾರ್ಮಿಕರ ಬಳಕೆ ಮಾಡದಿರುವುದು, ಭಾರತದ ಕಾರ್ಮಿಕ ಕಾನೂನುಗಳ ಪಾಲನೆ, ನಿರ್ಮಾಣ ಚಟುವಟಿಕೆಗಳಲ್ಲಿ ಮಹಿಳೆಯರು, ನುರಿತ/ಕೌಶಲ್ಯರಹಿತ ಕಾರ್ಮಿಕರ ಮೂಲ ವೇತನಗಳಂತಹ ವಿವಿಧ ಕಾನೂನು ಅನುಸರಣೆಗಳನ್ನು ಒಳಗೊಂಡಿರುತ್ತದೆ. ವೇತನ ಸಮಾನತೆ, ಸೈಟ್‌ಗಳ ಸುತ್ತಲಿನ ಕಾರ್ಮಿಕರ ಶಿಶುಪಾಲನಾ ಸೌಲಭ್ಯಗಳು ಇತ್ಯಾದಿಗಳನ್ನು ಖಾತ್ರಿಪಡಿಸುತ್ತದೆ. SIA ತಯಾರಿಕೆಯು ಯೋಜನಾ ಹಂತದಲ್ಲಿ ಜನರ ಭಾಗವಹಿಸುವಿಕೆಯನ್ನು ಖಚಿತಪಡಿಸುತ್ತದೆ. PAP ಗಳ ವಿವಿಧ ವಿಭಾಗಗಳ ಮತ್ತು ಇತರ ಮಧ್ಯಸ್ಥಗಾರರನ್ನು ಕಾರ್ಯಾಗಾರಗಳು, ಕೇಂದ್ರೀಕೃತ ಗುಂಪು ಚರ್ಚೆಗಳು ಮತ್ತು ವೈಯಕ್ತಿಕ ಸಂದರ್ಶನಗಳ ಮೂಲಕ ಸಮಾಲೋಚಿಸಲಾಗುತ್ತದೆ. ಪ್ರತಿ ಕಾರಿಡಾರ್‌ಗೆ ಒಂದರಂತೆ ಪುನರ್ವಸತಿ ಕ್ರಿಯಾ ಯೋಜನೆಗಳನ್ನು (RAP), ಪ್ರಸ್ತಾವಿತ ಯೋಜನೆಯಿಂದ ಉಂಟಾದ ಪ್ರತಿಕೂಲ ಸಾಮಾಜಿಕ ಪರಿಣಾಮಗಳನ್ನು ತಗ್ಗಿಸಲು, ಸರಿದೂಗಿಸಲು, ಪುನರ್ವಸತಿ ಮಾಡಲು ಯೋಜನೆಗೆ ಭಾಗವಹಿಸುವ ವಿಧಾನವನ್ನು ಬಳಸಿಕೊಂಡು ಸಿದ್ಧಪಡಿಸಲಾಗುತ್ತದೆ. SIA ಮತ್ತು ಪೂರ್ವಭಾವಿ RPF ಯೋಜನೆಯ ವಿವರಣೆ, ಜನಗಣತಿ ಸಮೀಕ್ಷೆಯ ಸಾರಾಂಶ ಮತ್ತು ಸಾಮಾಜಿಕ-ಆರ್ಥಿಕ ಸಮೀಕ್ಷೆ, ಕಾನೂನು ಚೌಕಟ್ಟು, ಅರ್ಹತೆ, ಸಾಂಸ್ಥಿಕ ಚೌಕಟ್ಟು, ಕುಂದುಕೊರತೆ ಕಾರ್ಯವಿಧಾನಗಳು, ಅನುಷ್ಠಾನ

ವೇಳಾಪಟ್ಟಿ, R&R ವೆಚ್ಚದ ಅಂದಾಜು ಮತ್ತು ಮೇಲ್ವಿಚಾರಣೆ; ಮೌಲ್ಯಮಾಪನ ಕಾರ್ಯವಿಧಾನಗಳನ್ನು ಇದು ಒಳಗೊಂಡಿದೆ. RPF ಪರಿಹಾರ ಮತ್ತು ಅರ್ಹತೆಗಳ ಪ್ರಾಥಮಿಕ ಅವಲೋಕನವನ್ನು ಅಂತಾರಾಷ್ಟ್ರೀಯ ಮಾನದಂಡಗಳ ಅಗತ್ಯತೆಗಳೊಂದಿಗೆ ವಿಶಾಲವಾಗಿ ಜೋಡಿಸಲಾಗುದೆ. ಸಂತ್ರಸ್ತ ಜನಸಂಖ್ಯೆಯ ಪರಿಣಾಮಗಳು ಮತ್ತು ಜೀವನೋಪಾಯದ ಪುನರ್ ಸ್ಥಾಪನೆ ಅಗತ್ಯಗಳ ಕುರಿತು ವಿವರವಾದ ಮಾಹಿತಿಯ ಆಧಾರದ ಮೇಲೆ RAP ಅಭಿವೃದ್ಧಿ ಹಂತದಲ್ಲಿ, RPF ಅನ್ನು ಪರಿಷ್ಕರಿಸಲಾಗುತ್ತದೆ ಮತ್ತು ನವೀಕರಿಸಲಾಗುತ್ತದೆ.

## 1.3. ಯೋಜನೆ ಪ್ರದೇಶ

ಯೋಜನೆಯು ಕರ್ನಾಟಕ ರಾಜ್ಯದ ಬೆಂಗಳೂರು ನಗರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ ನೆಲೆಗೊಂಡಿದೆ. ಯೋಜನಾ ಕಾರಿಡಾರ್‌ಗಳ 5 ಕಿಮೀ ವ್ಯಾಪ್ತಿಯೊಳಗೆ ಬರುವ ಗ್ರಾಮಗಳನ್ನು (ಮುಂಬರುವ ನಿಲ್ದಾಣಗಳಿಗೆ ಸಂಪರ್ಕದ ಆಧಾರದ ಮೇಲೆ) ಯೋಜನೆಯ ಪ್ರಭಾವದ ಗ್ರಾಮಗಳೆಂದು ಪರಿಗಣಿಸಲಾಗುತ್ತದೆ. ಸುಮಾರು 186 ಗ್ರಾಮಗಳು ಯೋಜನೆಯ ಕಾರಿಡಾರ್‌ಗಳ 5 ಕಿಮೀ ವ್ಯಾಪ್ತಿಯಲ್ಲಿವೆ.

## 1.4 ಯೋಜನೆಯ ಪ್ರಮುಖ ಲಕ್ಷಣಗಳು

ಯೋಜನೆಯು ಒಟ್ಟು 149 ಕಿ.ಮೀ. ಉದ್ದದ 4 ಕಾರಿಡಾರ್‌ಗಳು ಮತ್ತು 69 ನಿಲ್ದಾಣಗಳನ್ನು ಒಳಗೊಂಡಿದೆ (3ನೇ ಕಾರಿಡಾರ್‌ನ ಚತುಷ್ಪಥ ಯೋಜನೆಗಳಲ್ಲಿ 5 ನಿಲ್ದಾಣಗಳು ಮತ್ತು ಏರ್‌ಪೋರ್ಟ್ ಲಿಂಕ್‌ನಲ್ಲಿ 2 ನಿಲ್ದಾಣಗಳು) ಹಾಗೂ 2 ಡಿಪೋಗಳು (ಸಿ-1 ರ ಉತ್ತರ ತುದಿಯಲ್ಲಿರುವ ದೇವನಹಳ್ಳಿ ಡಿಪೋ ಮತ್ತು C2 ನ ಪಶ್ಚಿಮ ತುದಿಯಲ್ಲಿರುವ ಸೋಲದೇವನಹಳ್ಳಿ ಡಿಪೋ). ಕಾರಿಡಾರ್‌ಗಳು ಮುಖ್ಯವಾಗಿ ಭಾರತೀಯ ರೈಲ್ವೆ ಮಾರ್ಗಗಳಿಗೆ ಸಮಾನಾಂತರವಾಗಿರುತ್ತವೆ ಮತ್ತು ವಿವಿಧ ಹಂತಗಳಲ್ಲಿ (ಗ್ರೇಡ್‌ನಲ್ಲಿ, ಎತ್ತರದಲ್ಲಿ) ಮತ್ತು ದೂರದ ಪ್ರಮುಖ ರೈಲು ನಿಲ್ದಾಣಗಳೊಂದಿಗೆ ಸಂಪರ್ಕ ಹೊಂದಿವೆ ಯಶವಂತಪುರ (C1/C2), ಬೆನ್ನಿಗಾನಹಳ್ಳಿ (C2/C4), ಯಲಹಂಕ (C1/C4), KSR ಬೆಂಗಳೂರು ನಗರ (C1/C3) - ಇವು ಕಾರಿಡಾರ್‌ಗಳ ನಡುವಿನ ಇಂಟರ್‌ಚೇಂಜ್ ನಿಲ್ದಾಣಗಳಾಗಿವೆ.

ಕಾರಿಡಾರ್ 2 ಅನ್ನು ಹೊರತುಪಡಿಸಿ (ಮೊದಲನೆಯದನ್ನು ನಿರ್ಮಿಸಲಾಗಿದೆ, Q4/2023 ರಲ್ಲಿ ಕೆಲಸಗಳು ಪ್ರಾರಂಭವಾದವು), ಕಾರಿಡಾರ್‌ಗಳ ವಿವರವಾದ ಜೋಡಣೆ ಇನ್ನೂ

ಅಭಿವೃದ್ಧಿ ಹಂತದಲ್ಲಿದೆ. ಅವಳಿ ಮಾರ್ಗದ (ಡಬಲ್ ಟ್ರ್ಯಾಕ್) ಕಾರಿಡಾರ್‌ನ ಕನಿಷ್ಠ ಅಗಲವು 16.5 ಮೀಟರ್ ಆಗಿದೆ. ಆದಾಗ್ಯೂ ಇದು ಜೋಡಣೆ ಗ್ರೇಡಿಯಂಟ್ (ಅಟ್-ಗ್ರೇಡ್/ಎಲಿವೇಟೆಡ್ ಮತ್ತು ಕಟಿಂಗ್/ಫಿಲ್ಲಿಂಗ್) ಮತ್ತು ತಿರುವು (ಕರ್ವ್) ಅವಲಂಬಿಸಿ ಬದಲಾಗುತ್ತದೆ.

ವಿನ್ಯಾಸಗಳನ್ನು ಅಂತಿಮಗೊಳಿಸಿದ ನಂತರ ಮತ್ತು ನಿಖರವಾದ ಶಾಶ್ವತ ಮತ್ತು ತಾತ್ಕಾಲಿಕ ಹೆಜ್ಜೆಗುರುತುಗಳನ್ನು ವಿವರಿಸಿದ ನಂತರ, ಯೋಜನೆಗಾಗಿ ಇಲ್ಲಿಯವರೆಗೆ ಕೈಗೊಂಡ ಜನಗಣತಿ ಮತ್ತು ಸಾಮಾಜಿಕ ಆರ್ಥಿಕ ಸಮೀಕ್ಷೆಗಳನ್ನು ನವೀಕರಿಸಲಾಗುತ್ತದೆ;

ಅಲ್ಲದೆ ಪ್ರತಿ ಕಾರಿಡಾರ್‌ಗೆ RAP ಅನ್ನು SIA ಮತ್ತು RPF ನ ಕಾರ್ಯವಿಧಾನಗಳಿಗೆ ಅನುಗುಣವಾಗಿ ಸಿದ್ಧಪಡಿಸಲಾಗುತ್ತದೆ. ಇದು ಬೆಂಗಳೂರು ಉಪನಗರ ರೈಲ್ವೆ ಯೋಜನೆಯ ಪರಿಹಾರ ಮತ್ತು ಪುನರ್ವಸತಿ ಪ್ಯಾಕೇಜ್ ಅನ್ನು ಆಧರಿಸಿದೆ. ಇದು ಯೋಜನೆ-ಬಾಧಿತ ಜನರ ಪರಿಹಾರ, ಪುನರ್ವಸತಿ ಮತ್ತು ಪುನರ್ವಸತಿಯ ಸಂರಚನೆಯಾಗಿ ಕಾರ್ಯನಿರ್ವಹಿಸುತ್ತದೆ. ಕಾರಿಡಾರ್-ವಾರು RAP ಗಳನ್ನು ಪೂರ್ಣಗೊಳಿಸುವ ಮತ್ತು ಒಡೆತನದ / ಆಕ್ರಮಿಸಿಕೊಂಡಿರುವ ಭೂಮಿಯನ್ನು ಗುತ್ತಿಗೆದಾರರಿಗೆ ಹಸ್ತಾಂತರಿಸುವ ಮೊದಲು PAP ಗಳಿಗೆ ವಿತರಿಸಲಾದ ಹಕ್ಕುಗಳನ್ನು ನೀಡಬೇಕಿರುತ್ತದೆ.

### 1.4.1. ಕಾರಿಡಾರ್ - 1: ಕೆಎಸ್‌ಆರ್ ಬೆಂಗಳೂರು ನಗರದಿಂದ ದೇವನಹಳ್ಳಿ ವರೆಗೆ

ಕಾರಿಡಾರ್ 1 ರ ಒಟ್ಟು ಉದ್ದವು 41.43 ಕಿ.ಮೀ.ಗಳಾಗಿದ್ದು, ಇದರಲ್ಲಿ ಎತ್ತರದ ವಿಭಾಗವು (ವಯಾಡಕ್ಟ್ ) 18.98 ಕಿ.ಮೀ. ಮತ್ತು ಗ್ರೇಡ್ ನಲ್ಲಿ 22.45 ಕಿ.ಮೀ. ಆಗಿದೆ. ಕಾರಿಡಾರ್-1 ರಲ್ಲಿನ ನಿಲ್ದಾಣಗಳ ಸಂಖ್ಯೆ 15 ಆಗಿದ್ದು, ಅದರಲ್ಲಿ ಒಂದು ಭವಿಷ್ಯದ ಮಾದರಿ ನಿಲ್ದಾಣವನ್ನು ಒಳಗೊಂಡಂತೆ ಒಟ್ಟು 8 ನಿಲ್ದಾಣಗಳನ್ನು ಎತ್ತರಿಸಲಾಗಿದೆ; ಹಾಗೂ 7 ನಿಲ್ದಾಣಗಳು ಗ್ರೇಡ್- ದರ್ಜೆಯಲ್ಲಿವೆ. ಪ್ರಸ್ತುತ, ಜೋಡಣೆ ಅಂತಿಮ ಹಂತದಲ್ಲಿದೆ. ಇಂಜಿನಿಯರಿಂಗ್ ಖರೀದಿ ನಿರ್ಮಾಣ- ಇಂಜಿನಿಯರಿಂಗ್ ಪ್ರೊಕ್ಯೂರ್‌ಮೆಂಟ್ ಕನ್‌ಸ್ಟ್ರಕ್ಷನ್ (ಇಪಿಸಿ) ಗುತ್ತಿಗೆದಾರರು ಜೋಡಣೆಯ ಕಾರ್ಯಸಾಧ್ಯತೆಯನ್ನು ಪರಿಶೀಲಿಸಿದ ನಂತರ, ವಿನ್ಯಾಸಗಳನ್ನು ಅಂತಿಮಗೊಳಿಸಲಾಗುತ್ತದೆ ಮತ್ತು ಅನುಮೋದಿಸಲಾಗುತ್ತದೆ. ನವೆಂಬರ್ 2022 ರಲ್ಲಿ ಈ ಕಾರಿಡಾರ್‌ಗಾಗಿ ಪ್ರಾಥಮಿಕ ಜನಗಣತಿ ಮತ್ತು ಸಾಮಾಜಿಕ-ಆರ್ಥಿಕ ಸಮೀಕ್ಷೆಗಳನ್ನು ನಡೆಸಲಾಯಿತು. ವಿನ್ಯಾಸಗಳನ್ನು ಅನುಮೋದಿಸಿದ ನಂತರ

ಸಮೀಕ್ಷೆಗಳನ್ನು ನವೀಕರಿಸಲಾಗುತ್ತದೆ ಮತ್ತು SIA ಮತ್ತು ಪೂರ್ವಭಾವಿ RPF ನಲ್ಲಿ ನೀಡಲಾದ ಕಾರ್ಯವಿಧಾನಗಳಿಗೆ ಅನುಗುಣವಾಗಿ RAP ಅನ್ನು ಅಭಿವೃದ್ಧಿಪಡಿಸಲಾಗುತ್ತದೆ.

ಕಾರಿಡಾರ್ 1A: ಏರ್‌ಪೋರ್ಟ್ ಲೈನ್: C1 ನಿಂದ ವಿಮಾನ ನಿಲ್ದಾಣಕ್ಕೆ ಒಟ್ಟು 5.95 ಕಿ.ಮೀ. ಉದ್ದವನ್ನು ಹೊಂದಿದ್ದು, ಅದರಲ್ಲಿ 3.55 ಕಿ.ಮೀ. ದೂರ ಎತ್ತರದಲ್ಲಿದೆ; 2.4 ಕಿ.ಮೀ. ದೂರ ಗ್ರೇಡ್‌ನಲ್ಲಿದೆ. ವಿಮಾನ ನಿಲ್ದಾಣ ಮಾರ್ಗದಲ್ಲಿ ಎರಡು ನಿಲ್ದಾಣಗಳಿವೆ.

### 1.4.2. ಕಾರಿಡಾರ್ - 2: ಬೈಯ್ಯಪ್ಪನಹಳ್ಳಿ ಟರ್ಮಿನಲ್ ನಿಂದ ಚಿಕ್ಕಬಾಣಾವರದವರೆಗೆ

ಕಾರಿಡಾರ್ 2 ರ ಒಟ್ಟು ಉದ್ದವು 28.72 ಕಿ.ಮೀ. ಆಗಿದ್ದು, ಎತ್ತರಿಸಿದ ವಿಭಾಗವು 9.25 ಕಿ.ಮೀ. ಮತ್ತು ಗ್ರೇಡ್ ವಿಭಾಗವು 19.47 ಕಿ.ಮೀ. ಆಗಿದೆ. ಕಾರಿಡಾರ್-2 ನಲ್ಲಿನ ಒಟ್ಟು ನಿಲ್ದಾಣಗಳ ಸಂಖ್ಯೆ 15. ಅದರಲ್ಲಿ 3 ಎಲಿವೇಟೆಡ್ ಮತ್ತು 2 ಭವಿಷ್ಯದ ನಿಲ್ದಾಣಗಳನ್ನು ಒಳಗೊಂಡಂತೆ 10 ನಿಲ್ದಾಣಗಳು ಗ್ರೇಡ್ ನಲ್ಲಿವೆ. ಈ ಕಾರಿಡಾರ್‌ಗೆ ಜೋಡಣೆಯನ್ನು ಅಂತಿಮಗೊಳಿಸಲಾಗಿದೆ. ವಿನ್ಯಾಸಗಳನ್ನು EPC ಗುತ್ತಿಗೆದಾರರು ವಿಭಾಗವಾರು ಸಲ್ಲಿಕೆ ಮಾಡುತ್ತಿದ್ದಾರೆ; ಅಂತಿಮಗೊಳಿಸುವಿಕೆ ಮತ್ತು ಅನುಮೋದನೆಗೆ ಸಮೀಪಿಸುತ್ತಿದ್ದಾರೆ. ವಿನ್ಯಾಸಗಳನ್ನು ಅನುಮೋದಿಸಿದ ನಂತರ ಪ್ರಾಥಮಿಕ ಜನಗಣತಿ ಮತ್ತು ಸಾಮಾಜಿಕ-ಆರ್ಥಿಕ ಸಮೀಕ್ಷೆಗಳನ್ನು ನವೀಕರಿಸಲಾಗುತ್ತದೆ ಮತ್ತು SIA ಮತ್ತು ಪೂರ್ವಭಾವಿ RPF ನಲ್ಲಿ ನೀಡಲಾದ ಕಾರ್ಯವಿಧಾನಗಳಿಗೆ ಅನುಗುಣವಾಗಿ C2 ಗಾಗಿ RAP ಅನ್ನು ಅಭಿವೃದ್ಧಿಪಡಿಸಲಾಗುತ್ತದೆ.

### 1.4.3. ಕಾರಿಡಾರ್ - 3: ಕೆಂಗೇರಿಯಿಂದ ವೈಟ್‌ಫೀಲ್ಡ್ ವರೆಗೆ

ಈ ಕಾರಿಡಾರ್‌ನ ಒಟ್ಟು ಉದ್ದವು 35.52 ಕಿ.ಮೀ., ಇದು ಕೆಂಗೇರಿಯಿಂದ ಬೆಂಗಳೂರು ಕಂಟೋನ್ಮೆಂಟ್ ಮತ್ತು ಕಂಟೋನ್ಮೆಂಟ್‌ನಿಂದ ವೈಟ್‌ಫೀಲ್ಡ್ ನಡುವೆ ಇದೆ. ಪ್ರಸ್ತುತ ಅಧ್ಯಯನವು ಕೆಂಗೇರಿ ಮತ್ತು ಬೆಂಗಳೂರು ಕಂಟೋನ್ಮೆಂಟ್ ನಡುವಿನ ಈ ವಿಭಾಗದ ಉದ್ದವನ್ನು ಪರಿಗಣಿಸಿದೆ. ಇದು 18.47 ಕಿ.ಮೀ.ಗಳಷ್ಟು ವಿಸ್ತಾರವಾಗಿದೆ. ಇನ್ನು, ಬೆಂಗಳೂರು ಕಂಟೋನ್ಮೆಂಟ್ ಮತ್ತು ವೈಟ್‌ಫೀಲ್ಡ್ ನಡುವೆ 17.05 ಕಿ.ಮೀ. ಉದ್ದವಿದ್ದು

ನೈಋತ್ಯ ರೈಲ್ವೆಯು (ಎಸ್‌ಡಬ್ಲ್ಯೂಆರ್) ಇದನ್ನು ಕ್ವಾಡ್ರುಪ್ಲಿಂಗ್ (ನಾಲ್ಕು ದ್ವಿಗುಣ) ಗಾಗಿ ತೆಗೆದುಕೊಳ್ಳುತ್ತಿದೆ. ಒಮ್ಮೆ ಇದು ಪೂರ್ಣಗೊಂಡು ಕಾರ್ಯಾರಂಭಗೊಂಡರೆ, ಉಪನಗರ ಸೇವೆಗಳಿಗೆ ಒಂದೇ ರೀತಿಯ ಎರಡು ಸಾಲುಗಳನ್ನು ಬಳಸಿಕೊಳ್ಳಲಾಗುತ್ತದೆ. C-3 ಕಾರಿಡಾರ್ ನಲ್ಲಿನ ಒಟ್ಟು ನಿಲ್ದಾಣಗಳು 14. ಅವುಗಳಲ್ಲಿ 3 ನಿಲ್ದಾಣಗಳನ್ನು ಎತ್ತರಿಸಲಾಗಿದೆ; ಒಂದು ಭವಿಷ್ಯದ ಮಾದರಿ ನಿಲ್ದಾಣವನ್ನು ಒಳಗೊಂಡಂತೆ 10 ನಿಲ್ದಾಣಗಳು ಗ್ರೇಡ್ ನಲ್ಲಿವೆ. 5 ನಿಲ್ದಾಣಗಳು ಕ್ವಾಡ್ರುಪ್ಲಿಂಗ್ ವಿಭಾಗದಲ್ಲಿವೆ.

---------

[5] This quadrupling work is already under execution by the Indian Railways/ South-Western branch). Upon its completion two lines out of the four (one per direction) shall be also utilised for the suburban railway services. The specific scheme was approved before (and independently from) the Bangalore Sub-urban Railway Project and is expected to be completed before project-related works on Corridor-3 commence. The construction of Quadrupling is not a part of K-RIDE Capex. Quadrupling is not included in K-RIDE's SIA-RPF and RAP, because it is a project planned, sanctioned, constructed, owned and managed by another entity South Western Railway. Details collected from SWR indicates that there would be no dismantling of private buildings and no person is required to be resettled. Only about 1320 Sq,m of ITI (Government vacant land) is required for construction of quadrupling.


ಈ ಕಾರಿಡಾರ್‌ಗೆ ವಿವರವಾದ ಜೋಡಣೆಯನ್ನು ಇನ್ನೂ ಅಂತಿಮಗೊಳಿಸಬೇಕಾಗಿದೆ. ನವೆಂಬರ್ 2022 ರಲ್ಲಿ ಈ ಕಾರಿಡಾರ್‌ಗಾಗಿ ಪ್ರಾಥಮಿಕ ಜನಗಣತಿ ಮತ್ತು ಸಾಮಾಜಿಕ-ಆರ್ಥಿಕ ಸಮೀಕ್ಷೆಗಳನ್ನು ನಡೆಸಲಾಯಿತು. ವಿನ್ಯಾಸಗಳನ್ನು ಅನುಮೋದಿಸಿದ ನಂತರ ಸಮೀಕ್ಷೆಗಳನ್ನು ನವೀಕರಿಸಲಾಗುತ್ತದೆ ಮತ್ತು C3 ಗಾಗಿ RAP ಅನ್ನು SIA ಮತ್ತು ಪೂರ್ವಭಾವಿ RPF ನಲ್ಲಿ ನೀಡಲಾದ ಕಾರ್ಯವಿಧಾನಗಳಿಗೆ ಅನುಗುಣವಾಗಿ ಅಭಿವೃದ್ಧಿಪಡಿಸಲಾಗುತ್ತದೆ.

### 1.4.4. ಕಾರಿಡಾರ್ – 4: ಹೀಲಲಿಗೆಯಿಂದ ರಾಜಾನುಕುಂಟೆವರೆಗೆ

ಕಾರಿಡಾರ್-4 ರ ಒಟ್ಟು ಉದ್ದವು 47.74 ಕಿ.ಮೀ. ಆಗಿದ್ದು, ಇದರಲ್ಲಿ 9.48 ಕಿ.ಮೀ ಎತ್ತರಿಸಿದ ವಿಭಾಗ ಮತ್ತು 38.27 ಕಿ.ಮೀ. ಗ್ರೇಡ್ ವಿಭಾಗವಿದೆ. C-4 ನಲ್ಲಿನ ಒಟ್ಟು ನಿಲ್ದಾಣಗಳು 23. ಅವುಗಳಲ್ಲಿ 3 ನಿಲ್ದಾಣಗಳನ್ನು ಎತ್ತರಿಸಲಾಗಿದೆ. ನಾಲ್ಕು ಭವಿಷ್ಯದ ನಿಲ್ದಾಣಗಳನ್ನು ಒಳಗೊಂಡಂತೆ 16 ನಿಲ್ದಾಣಗಳು ಗ್ರೇಡ್ ನಲ್ಲಿವೆ. ಈ ಕಾರಿಡಾರ್‌ಗೆ ಜೋಡಣೆಯನ್ನು ಅಂತಿಮಗೊಳಿಸಲಾಗಿದೆ. ವಿನ್ಯಾಸಗಳು ಇನ್ನೂ ಅಂತಿಮಗೊಳ್ಳಬೇಕಿದೆ. ಈ ಕಾರಿಡಾರ್‌ಗಾಗಿ ಪೂರ್ವಭಾವಿ ಜನಗಣತಿ ಮತ್ತು ಸಾಮಾಜಿಕ-ಆರ್ಥಿಕ ಸಮೀಕ್ಷೆಗಳನ್ನು

ನವೆಂಬರ್ 2022 ರಲ್ಲಿ ನಡೆಸಲಾಯಿತು. ವಿನ್ಯಾಸಗಳನ್ನು ಅನುಮೋದಿಸಿದ ನಂತರ ಸಮೀಕ್ಷೆಗಳನ್ನು ನವೀಕರಿಸಲಾಗುತ್ತದೆ ಮತ್ತು SIA ಮತ್ತು CR ನೀತಿಯಲ್ಲಿ ನೀಡಲಾದ ಕಾರ್ಯವಿಧಾನಗಳಿಗೆ ಅನುಗುಣವಾಗಿ RAP ಅನ್ನು ಅಭಿವೃದ್ಧಿಪಡಿಸಲಾಗುತ್ತದೆ.

ನಾಲ್ಕು ಕಾರಿಡಾರ್ ಗಳ ವಿವರಗಳನ್ನು ಈ ಕೆಳಗೆ ನೀಡಲಾಗಿದೆ. ಬೆಂಗಳೂರು ಉಪನಗರ ರೈಲ್ವೆ ಯೋಜನೆ ಕಾರಿಡಾರ್‌ಗಳ ಪ್ರತಿಯೊಂದು ವ್ಯವಸ್ಥೆಯ **ನಕ್ಷೆಗಳನ್ನು** ಈ ಕೆಳಗೆ ನೀಡಲಾಗಿದೆ.




| S.No | BSRP CORRIDOR DETAILS | STATUS OF NUMBER OF BSRP STATIONS | | | | |
|---|---|---|---|---|---|---|
| | | PRESENT | | FUTURE | | TOTAL |
| | | ELEVATED | AT GRADE | ELEVATED | AT GRADE | |
| 1 | CORRIDOR-1 (C-1)(KSR Bengaluru City-Devanahalli) | 8 | 7 | 0 | 0 | 15 |
| 2 | CORRIDOR-1 (C-1A)(Airport Link) | 2* (Cut & Cover) | | 0 | 0 | 2* |
| 3 | CORRIDOR-2(C-2)(Baiyyappanahalli-Chikkabanavara) | 3 | 10 | 0 | 2 | 15 |
| 4 | CORRIDOR-3 (C-3)(Kengeri-Whitefield ) | 3 + 5* | 5 | 0 | 1 | 14 |
| 5 | CORRIDOR-4 (C-4)(Heelalige-Rajankute) | 3 | 16 | | 4 | 23 |
| | Total Number of Stations | 17 + 5* | 37 | 0 | 8 | 62+2*+5* |

- (*) Includes 2 Nos. of stations (Cut & cover) in Airport Link
- (*) Includes 5 Nos. of stations between (Bangalore Cantt.- Whitefield) section : (Quadrupling Project)
- Note: Proposed no. of future BSRP stations (as indicated in BSRP network map) are not considered in the total no. of BSRP stations.

| S.No | BSRP INTEGRATED STATIONS | CORRIDOR |
|---|---|---|
| 1 | KSR Bengaluru city | 1 & 3 |
| 2 | Yesvantapur | 1 & 2 |
| 3 | Yelahanka | 1 & 4 |
| 4 | Benniganahalli | 2 & 4 |
| 5 | Airport Trumpet | 1 & 1A |
| | Total No. of Integrated stations : | 5 |

| S.No | NAME OF THE CORRIDOR | ELEVATED (In Km) | AT GRADE (In Km) | TOTAL (In Km) |
|---|---|---|---|---|
| 1 | CORRIDOR-1 (C-1) | 18.98 | 22.420 | 41.4 |
| 2 | AIRPORT LINK(C-1A) | 3.55 | 2.40 | 5.95 |
| 3 | CORRIDOR-2 (C-2) | 9.25 | 19.472 | 28.722 |
| 4 | CORRIDOR-3 (C-3) | 10.400 | 8.070 +17.050(QDR) | 18.47 +17.050(QDR) |
| 5 | CORRIDOR-4 (C-4) | 9.475 | 38.268 | 47.743 |
| | TOTAL | 51.555 | 90.63 | 142.285+17.05 |

(Mathikere Slum location shown on Corridor 2 between Stations Mathikere and Yeshwantpur )

*Figure 1: System Map of the Bengaluru Suburban Railway Project Corridors*

Saliant features of the alignment and project corridors are summarized in below table:

**ಪಟ್ಟಿ 1. ಕಾರಿಡಾರ್‌ಗಳ ಪ್ರಮುಖ ಲಕ್ಷಣಗಳು**

| **ಕ್ರಮ ಸಂಖ್ಯೆ** | **ವಿವರ** | **ಕಾರಿಡಾರ್ 1** | | **ಕಾರಿಡಾರ್ 2** | **ಕಾರಿಡಾರ್ 3** | | **ಕಾರಿಡಾರ್ 4** |
|---|---|---|---|---|---|---|---|
| | | **ಕೆಎಸ್‌ಆರ್ ಬೆಂಗಳೂರು ನಗರದಿಂದ ದೇವನಹಳ್ಳಿ ವರೆಗೆ** | **ಏರ್ ಪೋರ್ಟ್ ಮಾರ್ಗ** | **ಬೈಯ್ಯಪ್ಪನ ಹಳ್ಳಿ ಟರ್ಮಿನಲ್ ನಿಂದ ಚಿಕ್ಕಬಾಣಾವರ ವರೆಗೆ** | **ಕೆಂಗೇರಿ ಯಿಂದ ಬೆಂಗಳೂರು ಕಂಟೋನ್ಮೆಂಟ್** | **ಕಂಟೋನ್ಮೆಂಟ್ ನಿಂದ ವೈಟ್‌ಫೀಲ್ಡ್** | **ಹೀಲಲಿಗೆ ಯಿಂದ ರಾಜಾನುಕುಂಟೆ** |
| 1 | ಕಾರಿಡಾರ್ ನ ಉದ್ದ (ಕಿ.ಮೀ.) | 41.43 | 5.95 | 28.72 | 18.47 | 17.05 | 47.74 |
| 2 | ಎತ್ತರದ ವಿಭಾಗದ ಉದ್ದ (ಕಿ.ಮೀ.) | 18.98 | 3.55 | 9.25 | 10.40 | 0.00 | 9.48 |
| 3 | ಗ್ರೇಡ್ ವಿಭಾಗದ ಉದ್ದ (ಕಿ.ಮೀ.) | 22.42 | 2.40 | 19.47 | 8.07 | 17.05 | 38.27 |
| 4 | ನಿಲ್ದಾಣಗಳ ಸಂಖ್ಯೆ | 15 | 2 | 15 | 9 | 5 | 23 |
| 5 | ಎತ್ತರಿಸಿದ ನಿಲ್ದಾಣಗಳ ಸಂಖ್ಯೆ | 8 | 2 (ಕಟ್ ಮತ್ತು ಕವರ್) | 3 | 3 | 0 | 3 |
| 6 | ಗ್ರೇಡ್ ಮಟ್ಟದ ನಿಲ್ದಾಣಗಳ ಸಂಖ್ಯೆ | 7 | | 10 | 5 | 5 | 16 |
| 7 | ಭವಿಷ್ಯದ ನಿಲ್ದಾಣಗಳ ಸಂಖ್ಯೆ | 0 | | 2 | 1 | 0 | 4 |
| 8 | ಇಂಟರ್ ಚೇಂಜ್ ನಿಲ್ದಾಣಗಳ ಸಂಖ್ಯೆ | 3 | ಏರ್ ಪೋರ್ಟ್ ಮಾರ್ಗ | 2 | 1 | ಕ್ವಾಡ್ರುಪ್ಲಿಂಗ್ ವಿಭಾಗ (17.05 (ಕಿ.ಮೀ.) | 1 |
| 9 | ಕಾರಿಡಾರ್ ನಲ್ಲಿ ಪ್ರಸ್ತುತ ಇರುವ ROB ಗಳ ಸಂಖ್ಯೆ | 10 | | 6 | 3 | | 6 |
| 10 | ಕಾರಿಡಾರ್ ನಲ್ಲಿ ಪ್ರಸ್ತುತ ಇರುವ FOB ಗಳ ಸಂಖ್ಯೆ | 6 | | 3 | 5 | | 0 |
| 11 | ಕಾರಿಡಾರ್ ನಲ್ಲಿ ಪ್ರಸ್ತುತ ಇರುವ LC ಗಳ ಸಂಖ್ಯೆ | 10 | | 11 | 3 | | 11 |
| 12 | RUB/ROB ಗಳಿಗೆ ಬದಲಾಯಿಸಲಾದ ಲೆವೆಲ್ ಕ್ರಾಸಿಂಗ್ ಗಳ ಸಂಖ್ಯೆ | 1 | | 2 | 1 | | 2 |

| | | | | | | | |
|---|---|---|---|---|---|---|---|
| 13 | ಗ್ರೇಡ್ ಪ್ರದೇಶಗಳಲ್ಲಿ ನಿರ್ಮೂಲಗೊಳಿಸಬೇಕಾದ, ಪ್ರಸ್ತುತ ಇರುವ LC ಗಳ ಸಂಖ್ಯೆ | 6 | | 7 | 1 | | 11 |
| 14 | ಉಪನಗರ ರೈಲು ಮಾರ್ಗ ಎತ್ತರಿಸಬೇಕಾದ ಕಡೆ ಇರುವ LC ಗಳ ಸಂಖ್ಯೆ | 3 | | 3 | 1 | | 1 |
| 15 | ಅಗತ್ಯವಾದ ಖಾಸಗಿ ಜಮೀನು (ಖಾಲಿ/ ನಿರ್ಮಿತ). | 4.90 | | 2.07 | 8.39 | | 16.31 |
| 16 | ಡಿಪೋಗಳಿಗೆ ಅಗತ್ಯವಾದ ಖಾಸಗಿ ಜಮೀನು. (ದೇವನಹಳ್ಳಿ ಮತ್ತು ಸೋಲದೇವನಹಳ್ಳಿ) | 25.21 | | | | | |
| 17 | ತಾತ್ಕಾಲಿಕ ಜಮೀನು ಅಗತ್ಯತೆಗಳು | ಕಾರ್ಮಿಕರ ಶಿಬಿರಗಳು, ಅಂಗಡಿಗಳು, ಯಾರ್ಡ್ ಗಳು ಇತ್ಯಾದಿಗಳಿಗಾಗಿ EPC ಗುತ್ತಿಗೆದಾರರು ತಾತ್ಕಾಲಿಕ ಭೂ ಅವಶ್ಯಕತೆಗಳನ್ನು ಗುರುತಿಸುತ್ತಾರೆ. ಹಾಗೂ ಭೂಮಾಲೀಕರೊಂದಿಗೆ ಬಾಡಿಗೆ / ಗುತ್ತಿಗೆ ಒಪ್ಪಂದಗಳನ್ನು ಕೈಗೊಳ್ಳುತ್ತಾರೆ. ಈ ಗುತ್ತಿಗೆ ಒಪ್ಪಂದಗಳನ್ನು ಪ್ರವರ್ತಕರಿಗೆ ಸಲ್ಲಿಸಲಾಗುತ್ತದೆ. ಪ್ರಸ್ತುತ, ವಿನ್ಯಾಸಗಳು ಪ್ರಕ್ರಿಯೆಯಲ್ಲಿದ್ದು, ಇವುಗಳನ್ನು ಅನುಮೋದಿಸಿದ ನಂತರ ಕೆಲಸದ ಸ್ಥಳಕ್ಕಾಗಿ ತಾತ್ಕಾಲಿಕ ಜಮೀನಿನ ಅಗತ್ಯವನ್ನು ನಿರ್ಣಯಿಸಲಾಗುತ್ತದೆ, ಅಂತಹ ತಾತ್ಕಾಲಿಕ ಜಮೀನು ಅಗತ್ಯದಿಂದ ಉಂಟಾಗುವ ಪರಿಣಾಮಗಳನ್ನು ಸಂಬಂಧಿತ RAP ಗಳಲ್ಲಿ ಸೇರ್ಪಡೆ ಮಾಡಲಾಗುತ್ತದೆ. | | | | | |

(FOB: Foot over bridge; (ಪಾದಚಾರಿ ಮೇಲ್ಸೇತುವೆ); RUB / ROB: Road under bridge (ರಸ್ತೆ ಕೆಳ ಸೇತುವೆ) / road over bridge (ರಸ್ತೆ ಮೇಲ್ಸೇತುವೆ); LC: Level Crossing (ಲೆವೆಲ್ ಕ್ರಾಸಿಂಗ್)

ಆಧಾರ: BSRP ಯೋಜನೆಗಾಗಿ 2019ರಲ್ಲಿ RITES ಕನ್ಸಲ್ಟೆಂಟ್ ಸಂಸ್ಥೆ ಸಿದ್ಧಪಡಿಸಿದ ಅಂದಾಜು ವರದಿ; ಹಾಗೂ 25.11.2023 ರ ಅನುಸಾರ ಕೈಗೊಳ್ಳಲಾದ ವಿನ್ಯಾಸ ನವೀಕರಣ.

## 1.5 ಯೋಜನೆಯ ಪ್ರಯೋಜನಗಳ ಬಗ್ಗೆ ಜನರ ಗ್ರಹಿಕೆ

ಪ್ರಸ್ತಾವಿತ ಉಪನಗರ ರೈಲು ಯೋಜನೆಯು ಪ್ರತ್ಯಕ್ಷ ಮತ್ತು ಪರೋಕ್ಷವಾದ ಪ್ರಯೋಜನಗಳನ್ನು ಹೊಂದಿರುತ್ತದೆ. ಯೋಜನೆಯು ರಸ್ತೆ ಸಂಚಾರ ಮತ್ತು ರಸ್ತೆ ಒತ್ತಡ, ಇಂಧನ ಬಳಕೆ, ಹಸಿರುಮನೆ ಅನಿಲ- GHG ಹೊರಸೂಸುವಿಕೆ, ವಾಯು ಮಾಲಿನ್ಯ, ಪ್ರಯಾಣದ ಸಮಯ, ವಾಹನ ನಿರ್ವಹಣಾ ವೆಚ್ಚ, ಅಪಘಾತಗಳು ಮತ್ತು ರಸ್ತೆ ನಿರ್ವಹಣೆಯನ್ನು ಕಡಿಮೆ ಮಾಡಲು ಕೊಡುಗೆ ನೀಡುತ್ತದೆ. ಪ್ರಸ್ತಾವಿತ ಬೆಂಗಳೂರು ಉಪನಗರ ರೈಲ್ವೆ ಯೋಜನೆ-ಬಿಎಸ್ಆರ್‌ಪಿಯು ಚಲನಶೀಲತೆಯನ್ನು ಹೆಚ್ಚಿಸುತ್ತದ. ತನ್ನ ವ್ಯಾಪ್ತಿಯ ಪ್ರದೇಶವನ್ನು ಸುಗಮಗೊಳಿಸಲು ಸಹಕಾರಿಯಾಗಿದೆ. ಮೂಲಸೌಕರ್ಯದ ಸೂಕ್ಷ್ಮ ಪ್ರದೇಶದಲ್ಲಿ ಆರ್ಥಿಕ ಉತ್ತೇಜನವನ್ನು ಹೆಚ್ಚಿಸುತ್ತದೆ. ವ್ಯಾಪಾರ ಅವಕಾಶಗಳನ್ನು ಹೆಚ್ಚಿಸುತ್ತದೆ. ನಗರದ ಸೌಂದರ್ಯ ಮತ್ತು ಪ್ರತಿಷ್ಠೆಯನ್ನು ಸುಧಾರಿಸುತ್ತದೆ. ಒಟ್ಟಾರೆಯಾಗಿ, BSRP ಯೋಜನೆ ಬೆಂಗಳೂರು ನಗರದ ಸಾರಿಗೆ ವ್ಯವಸ್ಥೆಯನ್ನು ಬದಲಾಯಿಸುತ್ತದೆ. BSRP ಯ ಸಂಭಾವ್ಯ ಬಳಕೆದಾರರಲ್ಲಿ ಮತ್ತು ಸಮಾಜದ ವಿವಿಧ ವಿಭಾಗಗಳೊಂದಿಗೆ ಪ್ರಾಥಮಿಕ ಸಾಮಾಜಿಕ-ಆರ್ಥಿಕ ಸಮೀಕ್ಷೆ ನಡೆಸಲಾಯಿತು. ನಿರೀಕ್ಷೆಗಳು ಸಮಾಲೋಚನೆಗಳನ್ನು ಕೈಗೊಳ್ಳಲಾಯಿತು. ಹೀಗೆ ಯಾದೃಚ್ಚಿಕ ಸಮೀಕ್ಷೆಯ ಸಮಯದಲ್ಲಿ ಸಮುದಾಯದಿಂದ ಪಡೆದ ವಿವಿಧ ಸಕಾರಾತ್ಮಕ ಪ್ರತಿಕ್ರಿಯೆಗಳ ಸಾರಾಂಶವನ್ನು ಈ ಕೆಳಗೆ ನೀಡಲಾಗಿದೆ:

- ಈ ಯೋಜನೆಯು ಬೆಂಗಳೂರಿನ ಉಪನಗರ ಪ್ರದೇಶಗಳು ಹಾಗೂ ಬೆಂಗಳೂರಿನ ನಗರ ಕೇಂದ್ರಗಳ ನಡುವೆ ಉತ್ತಮ ಸಂಪರ್ಕವನ್ನು ಕಲ್ಪಿಸುತ್ತದೆ. ಇದು ನಗರ ಕೇಂದ್ರಗಳಲ್ಲಿನ ವಸತಿದಟ್ಟಣೆಯ ಸಾಂದ್ರತೆಯನ್ನು ನಿಯಂತ್ರಿಸುತ್ತದೆ.
- ಕಡಿಮೆ ಆದಾಯದ ಕುಟುಂಬಗಳು ಬೆಂಗಳೂರಿನ ಉಪನಗರ ಪ್ರದೇಶಗಳಲ್ಲಿ ಕೈಗೆಟುಕುವ ಮನೆಗಳಲ್ಲಿ ವಸತಿ ಮಾಡಬಹುದು; ಹಾಗೂ ಕೈಗೆಟುಕುವ ಪ್ರಯಾಣ ವೆಚ್ಚದಲ್ಲಿ ಜೀವನೋಪಾಯಕ್ಕಾಗಿ ನಗರಕ್ಕೆ ಪ್ರಯಾಣಿಸಬಹುದು. ಇದು ಹೊಸ ಕೊಳೆಗೇರಿ ವಸಾಹತುಗಳ ಅಭಿವೃದ್ಧಿಯ ಮೇಲೆ ನಿಯಂತ್ರಣವನ್ನು ಹೊಂದಿರುತ್ತದೆ.
- ಉಪನಗರ ರೈಲ್ವೇ ಯೋಜನೆಯು ನಗರದ ಹೊರವಲಯದ ಜನರ ಓಡಾಟಕ್ಕೆ ಟ್ರಾಫಿಕ್ ಬ್ಲಾಕ್ ಇಲ್ಲದೆ ಸಂಚಾರ ಪೂರೈಸುವುದರಿಂದ ಪ್ರಯಾಣದ ಸಮಯ ಕಡಿಮೆಯಾಗುತ್ತದೆ. ನಗರ ಕೇಂದ್ರಗಳಿಗೆ ವಲಸೆ ಕಡಿಮೆಯಾಗುವುದರಿಂದ ಉಪನಗರ ರೈಲ್ವೆ ಯೋಜನೆಯು ನಗರದ ಸೌಂದರ್ಯದ ನೋಟವನ್ನು ಹೆಚ್ಚಿಸುತ್ತದೆ ಎಂಬ ಬಗ್ಗೆ ಜನರಲ್ಲಿ ವಿಶ್ವಾಸವಿದೆ.

- ಪ್ರಸ್ತಾವಿತ ಉಪನಗರ ರೈಲ್ವೆ ಯೋಜನೆಯು ನಗರದ ಹೊರವಲಯದಲ್ಲಿ ನೆಲೆಸಿರುವ ಜನರ ದೈನಂದಿನ ಪ್ರಯಾಣಕ್ಕಾಗಿ ದಕ್ಷ ಮತ್ತು ಪರಿಣಾಮಕಾರಿ ಸಾರಿಗೆ ಸೌಲಭ್ಯವಾಗಿದೆ. ಇದು ವಾಯುಮಾಲಿನ್ಯವನ್ನು ಕಡಿಮೆ ಮಾಡುತ್ತದೆ. ಇಂಧನ ಮಿತವ್ಯಯ ಮಾಡಲಿದ್ದು, ರಸ್ತೆ ಅಪಘಾತಗಳನ್ನು ಕಡಿಮೆ ಮಾಡುತ್ತದೆ.
- ಪ್ರಸ್ತಾವಿತ ಉಪನಗರ ರೈಲ್ವೇ ಯೋಜನೆಯು ಜನರಿಗೆ ಜೀವನೋಪಾಯದ ಅವಕಾಶಗಳ ವೈವಿಧ್ಯಮಯ ಮಾರ್ಗಗಳಿಗೆ ಕಾರಣವಾಗುತ್ತದೆ. ಜನರ ದಿನನಿತ್ಯದ ಪ್ರಯಾಣ ಖರ್ಚಿನಲ್ಲಿ ಉಳಿತಾಯವಾಗುತ್ತದೆ. ಪ್ರಯಾಣದ ವೆಚ್ಚ ಮತ್ತು ಸಮಯ ವಿಳಂಬ ಕಾರಣದಿಂದಾಗಿ ಜನರು ನಗರ ಪ್ರದೇಶದ ನೈರ್ಮಲ್ಯವಿಲ್ಲದ ವಾತಾವರಣದಲ್ಲಿ ವಸತಿ ಹೂಡುವುದನ್ನು ತಪ್ಪಿಸುತ್ತದೆ ಎಂಬ ಬಗ್ಗೆ ಜನರು ಪ್ರತಿಕ್ರಿಯೆ ನೀಡಿದ್ದಾರೆ. ಬಿಎಸ್ಆರ್‌ಪಿ ಕಾರ್ಯಾರಂಭ ಮಾಡಿದ ನಂತರ ಜನರು ಹೊರವಲಯದಲ್ಲಿ ವಸತಿ ಹೂಡಿ, ತಮ್ಮ ಕೆಲಸಕ್ಕಾಗಿ ಸುಗಮವಾಗಿ ದೈನಂದಿನ ಪ್ರಯಾಣ ಮಾಡಬಹುದು.
- BSRP ಸಮಾಜದ ದುರ್ಬಲ ವರ್ಗಗಳಿಗೆ ಹೆಚ್ಚಿನ ಸುರಕ್ಷತೆಯೊಂದಿಗೆ ವಿಶ್ವಾಸಾರ್ಹ ಸಾರಿಗೆ ವಿಧಾನವಾಗಿದೆ. ಇದರಿಂದ ಮಹಿಳೆಯರ ಚಲನಶೀಲತೆ ಹೆಚ್ಚಾಗುತ್ತದೆ. ಭಾರತೀಯ ಸಂದರ್ಭದಲ್ಲಿ ಮಹಿಳೆಯರು ವಯಸ್ಸಾದ ಪೋಷಕರೊಂದಿಗೆ (ವೈದ್ಯಕೀಯ ಉದ್ದೇಶ) ಅಥವಾ ಅಪ್ರಾಪ್ತ ಮಕ್ಕಳೊಂದಿಗೆ ಪ್ರಯಾಣಿಸಬೇಕಾಗುತ್ತದೆ, ಸಾರ್ವಜನಿಕ ಬಸ್‌ನಲ್ಲಿ ಪ್ರಯಾಣಿಸುವುದು ಅವರಿಗೆ ಯಾವಾಗಲೂ ಕಷ್ಟಕರವಾಗಿರುತ್ತದೆ. ಬಿಎಸ್ಆರ್‌ಪಿ ತಮಗೆ ಹೆಚ್ಚು ಆರಾಮದಾಯಕ ಪ್ರಯಾಣದ ವಿಧಾನವಾಗಿದೆ ಎಂದು ಅವರು ಭಾವಿಸುತ್ತಾರೆ.
- ಉಪನಗರ ರೈಲ್ವೆ ಯೋಜನೆಯು ಸಣ್ಣ ಮತ್ತು ಅತಿ ಸಣ್ಣ ರೈತರಿಗೆ; ನಗರದ ಹೊರವಲಯದಲ್ಲಿ ತರಕಾರಿಗಳು, ಹಣ್ಣುಗಳು ಮತ್ತು ಹೂವುಗಳನ್ನು ಬೆಳೆಯುವವರಿಗೆ ಹೆಚ್ಚಿನ ಜೀವನೋಪಾಯದ ಅವಕಾಶಗಳನ್ನು ಒದಗಿಸುತ್ತದೆ. ಏಕೆಂದರೆ ಉಪನಗರ ರೈಲ್ವೆ ಯೋಜನೆಯು ಈ ವಲಯದ ಜನರ ಉತ್ಪನ್ನಗಳಿಗೆ ಮಾರುಕಟ್ಟೆಯ ಉತ್ತಮ ಪ್ರವೇಶವನ್ನು ಒದಗಿಸುತ್ತದೆ.

----

[6] During these preliminary surveys and consultations some persons did not fully cooperate and some persons did not participate in the survey/ consultations process. The key reason for this is the non-disclosure of Compensation and Resettlement and Rehabilitation Entitlements related information, as it was not ready and approved by then.

- ಸಣ್ಣ ರೈತರು ಮತ್ತು ಕೋಳಿ ಸಾಕಣೆದಾರರು ತಮ್ಮ ಅಭಿಪ್ರಾಯವನ್ನು ಹಂಚಿಕೊಂಡಿದ್ದಾರೆ. ಬೆಂಗಳೂರು ನಗರವು ಅವರಿಗೆ ಉತ್ತಮ ಮಾರುಕಟ್ಟೆಯಾಗಿರುವುದರಿಂದ ಬಿಎಸ್ಆರ್‌ಪಿ ಅವರಿಗೆ ಉತ್ತಮ ಅವಕಾಶಗಳನ್ನು ನೀಡುವ ನಿರೀಕ್ಷೆ ಇದೆ.
- ಸಾರ್ವಜನಿಕ ಬಸ್ಸುಗಳಲ್ಲಿ ಪ್ರಯಾಣಿಸುವಾಗ ಮಹಿಳೆಯರು ಬಹಳಷ್ಟು ತೊಂದರೆಗಳನ್ನು ಎದುರಿಸುತ್ತಾರೆ. ಹೀಗಾಗಿ, ಉಪನಗರ ರೈಲ್ವೆ ತಮಗೆ ಸುರಕ್ಷಿತ ಸಾರಿಗೆ ವಿಧಾನವಾಗಿದೆ ಎಂದು ಅವರು ಭಾವಿಸುತ್ತಾರೆ. ಸಂಚಾರ ದಟ್ಟಣೆ ಹೆಚ್ಚಿರುವ ಸಮಯದಲ್ಲಿ ರೈಲಿನಲ್ಲಿ ತಮಗಾಗಿ ಪ್ರತ್ಯೇಕ ಬೋಗಿಯನ್ನು ಕಾಯ್ದಿರಿಸಬೇಕೆಂದು ಮಹಿಳೆಯರು ಒತ್ತಾಯಿಸಿದರು. ಸಂಜೆ ಮತ್ತು ಮುಂಜಾನೆ ಸಮಯಯದಲ್ಲಿ ಭದ್ರತೆ ಸಿಬ್ಬಂದಿ ಇರುವ ಕೋಚ್ ಗಳನ್ನು ಒದಗಿಸುವಂತೆ ಕೋರಿದರು.
- ಉದ್ಯಮ ವಲಯ (ಮುಖ್ಯವಾಗಿ ಡೆವಲಪರ್‌ಗಳು) ಗುಂಪುಗಳು ಯೋಜನೆ ಬಗ್ಗೆ ಬಹಳ ಉತ್ಸಾಹ ತೋರಿದ್ದಾರೆ. ಏಕೆಂದರೆ ಉದ್ದೇಶಿತ ಯೋಜನೆಯು ತಮಗೆ ಬಹಳಷ್ಟು ವ್ಯಾಪಾರ ಅವಕಾಶಗಳನ್ನು ತರುತ್ತದೆ ಎಂದು ಅವರು ಭಾವಿಸುತ್ತಾರೆ.
- ನಗರದಲ್ಲಿ ಸರಾಸರಿಗಿಂತ ಹೆಚ್ಚಿನ ಬಸ್ ಸೇವೆಗಳು ಮತ್ತು ಭಾಗಶಃ ಕಾರ್ಯನಿರ್ವಹಿಸುತ್ತಿರುವ ಮೆಟ್ರೋ ರೈಲು ಸೇವೆಗಳು ಸಂಚಾರ ದಟ್ಟಣೆಯನ್ನು ಕಡಿಮೆ ಮಾಡಲು ಸಾಧ್ಯವಾಗಿಲ್ಲ. ಆದ್ದರಿಂದ ಬೆಂಗಳೂರಿಗೆ ಸಬ್ ಅರ್ಬನ್ ರೈಲಿನಂತಹ ಸಮೂಹ ಸಾರಿಗೆ ವ್ಯವಸ್ಥೆ ಅಗತ್ಯವಾಗಿದೆ.
- ಒಂದು ಕೋಟಿಗೂ ಹೆಚ್ಚು ಜನಸಂಖ್ಯೆ ಇರುವ ನಗರದಲ್ಲಿ ಕೇವಲ ಬಸ್ ಮತ್ತು ಮೆಟ್ರೋ ರೈಲು ಸೇವೆಗಳು ಸಂಚಾರಕ್ಕೆ ಸಾಕಾಗುವುದಿಲ್ಲ. ಆದ್ದರಿಂದ ಬೆಂಗಳೂರಿಗೆ ಸಬ್ ಅರ್ಬನ್ ರೈಲಿನಂತಹ ಸಮೂಹ ಸಾರಿಗೆ ವ್ಯವಸ್ಥೆ ಅಗತ್ಯ.

## 1.6. ಸಾಮಾಜಿಕ ಸೂಕ್ಷ್ಮ ವಿಸ್ತರಣೆಗಳ ಗುರುತಿಸುವಿಕೆ

ಸಾಮಾಜಿಕ ಪ್ರಭಾವದ ಮೌಲ್ಯಮಾಪನವು ಪ್ರಾಥಮಿಕ ಕ್ಷೇತ್ರ ಸಮೀಕ್ಷೆಯನ್ನು ಒಳಗೊಂಡಿದೆ. ಹಾಗೂ ಕೊಳಚೆ ಪ್ರದೇಶಗಳಂತಹ ಸಾಮಾಜಿಕ ಸೂಕ್ಷ್ಮ ಸ್ಥಳಗಳನ್ನು (ಅಧಿಸೂಚಿತ ಮತ್ತು ಅಧಿಸೂಚಿತವಲ್ಲದ) ಗುರುತಿಸಿದೆ. ಅಲ್ಲಿ ಸಾಮಾಜಿಕ ಸೂಕ್ಷ್ಮತೆ (ಸ್ಥಳಾಂತರ) ಮತ್ತು ಸಾಮಾನ್ಯ ಆಸ್ತಿ ಸಂಪನ್ಮೂಲಗಳಂತಹ ಇತರ ಸಾಮಾಜಿಕ ಸೂಕ್ಷ್ಮ ರಚನೆಗಳು ಹೆಚ್ಚಿರಬಹುದು. ಪ್ರಾಥಮಿಕ ಕ್ಷೇತ್ರ ಸಮೀಕ್ಷೆಯ ಸಂಶೋಧನೆಗಳನ್ನು ಈ

ಕೆಳಗಿನಂತೆ ಸಂಕ್ಷೇಪಿಸಲಾಗಿದೆ. ನಾಲ್ಕು ಕಾರಿಡಾರ್‌ಗಳ ನಕ್ಷೆಗಳನ್ನು ಸಹ ಕೆಳಗೆ ನೀಡಲಾಗಿದೆ:

**ಕಾರಿಡಾರ್ - 1:** ಕೆಎಸ್ಆರ್ ಬೆಂಗಳೂರು ನಗರದಿಂದ ದೇವನಹಳ್ಳಿಗೆ: ಸಮಗ್ರ (ವಾಕ್-ಥ್ರೂ) ಸಮೀಕ್ಷೆಯ ಪ್ರಕಾರ, ಈ ಕಾರಿಡಾರ್ ಉದ್ದದ ಸುಮಾರು ಶೇ. 54.44ರಷ್ಟು ಜಾಗ ಭಾರತೀಯ ರೈಲ್ವೆ ಒಡೆತನದ ಖಾಲಿ ಭೂಮಿಯಾಗಿದೆ (ಸಾಮಾಜಿಕ ಸಮಸ್ಯೆಗಳಿಂದ ಮುಕ್ತವಾಗಿದೆ). ಇನ್ನು ಶೇ. 42.63 ಜಾಗ ಖಾಲಿ ಖಾಸಗಿ ಭೂಮಿಯಾಗಿದೆ. ಶೇ. 1.75ರಷ್ಟು ಜಾಗ ವಸತಿ ಪ್ರದೇಶವಾಗಿದೆ. ಶೇ. 0.70 ಜಾಗದಲ್ಲಿ ವಾಣಿಜ್ಯ ಕೇಂದ್ರಗಳು; ಸುಮಾರು ಶೇ. 0.22ರಷ್ಟು ಜಾಗದಲ್ಲಿ ಸಾಮಾನ್ಯ ಆಸ್ತಿ ಸಂಪನ್ಮೂಲಗಳು (CPR) ಭೂಮಿ, ದೇವಾಲಯ, ವೃಕ್ಷ ದೇಗುಲ, ಮಸೀದಿ, ಚರ್ಚ್, ಸಮಾಧಿ ಸ್ಥಳ ಇತ್ಯಾದಿ ಇವೆ.

**ಕಾರಿಡಾರ್ - 2:** ಬೈಯ್ಯಪ್ಪನಹಳ್ಳಿ ಟರ್ಮಿನಲ್‌ನಿಂದ ಚಿಕ್ಕಬಾಣಾವರ: ಸಮಗ್ರ (ವಾಕ್-ಥ್ರೂ) ಸಮೀಕ್ಷೆಯ ಪ್ರಕಾರ ಈ ಕಾರಿಡಾರ್ ಉದ್ದದ ಸುಮಾರು ಶೇ. 63.61ರಷ್ಟು ಜಾಗ ಖಾಲಿ ರೈಲ್ವೆ ಭೂಮಿ (ಸಾಮಾಜಿಕ ಸಮಸ್ಯೆಗಳಿಂದ ಮುಕ್ತ) ಆಗಿದೆ. ಶೇ. 14.68ರಷ್ಟು ಜಾಗ ಖಾಲಿ ಖಾಸಗಿ ಭೂಮಿ, ಶೇ. 6.87ರಷ್ಟು ಉದ್ದದ ಜಾಗ ರಕ್ಷಣಾ ಸಂಸ್ಥೆಗಳ ಸ್ವಾಧೀನದಲ್ಲಿದೆ. ಶೇ. 14.68ರಷ್ಟು ಜಾಗ ವಸತಿ ಪ್ರದೇಶವಾಗಿದ್ದು, ಶೇ. 4.78ರಷ್ಟು ಜಾಗ ವಾಣಿಜ್ಯ ಕೇಂದ್ರಗಳು. ಸಾಮಾನ್ಯ ಆಸ್ತಿ ಸಂಪನ್ಮೂಲಗಳು (CPR) ದೇವಾಲಯ, ವೃಕ್ಷ ದೇಗುಲ, ಮಸೀದಿ, ಚರ್ಚ್, ಸಮಾಧಿ ಸ್ಥಳ ಇತ್ಯಾದಿಗಳನ್ನು ಒಳಗೊಂಡಿವೆ. ಮತ್ತಿಕೆರೆ ಕೊಳೆಗೇರಿ ಪ್ರದೇಶದಲ್ಲಿ ಸುಮಾರು ಶೇ. 3.75ರಷ್ಟು ಉದ್ದದ ಜಾಗವನ್ನು ಗುರುತಿಸಲಾಗಿದೆ (. ಈ ಕೊಳೆಗೇರಿಯ ಸ್ಥಳವನ್ನು ಚಿತ್ರ 1 ರಲ್ಲಿ ತೋರಿಸಲಾಗಿದೆ).

**ಕಾರಿಡಾರ್ - 3:** ಕೆಂಗೇರಿಯಿಂದ ಕಂಟೋನ್ಮೆಂಟ್ 7: ಇಲ್ಲಿ ನಡೆಸಿದ ಸಮಗ್ರ (ವಾಕ್-ಥ್ರೂ) ಸಮೀಕ್ಷೆಯ ಅನುಸಾರ ಸುಮಾರು ಶೇ. 61.45ರಷ್ಟು ಜಾಗ ಖಾಲಿ ರೈಲ್ವೆ ಭೂಮಿ (ಸಾಮಾಜಿಕ ಸಮಸ್ಯೆಗಳಿಂದ ಮುಕ್ತವಾಗಿದೆ). ಶೇ.14.65ರಷ್ಟು ಜಾಗ ಖಾಲಿ ಖಾಸಗಿ ಭೂಮಿಯಾಗಿದ್ದು, ಶೇ. 16.54ರಷ್ಟು ಜಾಗ ವಸತಿ ಪ್ರದೇಶ, ಶೇ. 0.76ರಷ್ಟು ಜಾಗ ವಾಣಿಜ್ಯ

ಕೇಂದ್ರಗಳು. CPR, ದೇವಾಲಯ, ವೃಕ್ಷ ದೇಗುಲ, ಮಸೀದಿ, ಚರ್ಚ್, ಸಮಾಧಿ ಸ್ಥಳ ಇತ್ಯಾದಿಗಳನ್ನು ಒಳಗೊಂಡಿದೆ.

**ಕಾರಿಡಾರ್ - 4:** ಹೀಲಲಿಗೆ ರಾಜಾನುಕುಂಟೆ: ಸಮಗ್ರ ವಾಕ್-ಥ್ರೂ ಸಮೀಕ್ಷೆಯ ಅನುಸಾರ ಸುಮಾರು ಶೇ. 70.26ರಷ್ಟು ಉದ್ದದ ಜಾಗ ಖಾಲಿ ಭೂಮಿ (ಸಾಮಾಜಿಕ ಸಮಸ್ಯೆಗಳಿಂದ ಮುಕ್ತ). ಶೇ. 6.01ರಷ್ಟು ಜಾಗ ಖಾಲಿ ಖಾಸಗಿ ಭೂಮಿ, ಶೇ. 16.35ರಷ್ಟು ಜಾಗವಸತಿ ಪ್ರದೇಶ, ಶೇ. 2.96ರಷ್ಟು ಜಾಗ ವಾಣಿಜ್ಯ ಕೇಂದ್ರಗಳು, CPR, ದೇವಸ್ಥಾನ, ವೃಕ್ಷ ದೇಗುಲ, ಮಸೀದಿ, ಚರ್ಚ್, ಸಮಾಧಿ ಸ್ಥಳ ಇತ್ಯಾದಿಗಳನ್ನು ಒಳಗೊಂಡಿದೆ. ಡಿಪೋಗಳು, ರನ್ನಿಂಗ್ ವಿಭಾಗಗಳು ಮತ್ತು ನಿಲ್ದಾಣಗಳಿಗೆ ಭೂಮಿ ಅಗತ್ಯತೆಗಳನ್ನು ಹೊಂದಿದೆ.

ಎಲ್ಲಾ ನಾಲ್ಕು ಕಾರಿಡಾರ್‌ಗಳ ವಿವರವಾದ ನಕ್ಷೆಗಳನ್ನು ಕೆಳಗೆ ನೀಡಲಾಗಿದೆ:

[7] Cantonment to Whitefield is done under Quadrupling, which was approved before (and independently from) the Bangalore Sub-urban Railway Project and is expected to be completed before project-related works on Cor- ridor-3 commence.

**(ನಕ್ಷೆಗಳು- ಚಿತ್ರಗಳು ಪುಟ 9ರಿಂದ 12)**





*Figure 2: System Map of Corridor - 1*






*Figure 3: System Map of Corridor - 2*




| S.No | BSRP CORRIDOR DETAILS | STATUS OF NUMBER OF BSRP STATIONS | | | | |
|---|---|---|---|---|---|---|
| | | PRESENT | | FUTURE | | TOTAL |
| | | ELEVATED | AT GRADE | ELEVATED | AT GRADE | |
| 1 | CORRIDOR-3 (C-3)(Kengeri-Whitefield ) | 3 + 5 * | 5 | 0 | 1 | 14 |

| S.No | NAME OF THE CORRIDOR | ELEVATED (in Km) | AT GRADE (in Km) | TOTAL (in Km) |
|---|---|---|---|---|
| 1 | CORRIDOR-3 (C-3) | 10.400 | 8.070 +17.050(QDR) | 18.47 +17.050(QDR) |

| S.No | BSRP INTEGRATED STATIONS | CORRIDOR |
|---|---|---|
| 1 | KSR Bengaluru city | 1 & 3 |
| | Total No. of Integrated stations : | 1 |

- Note: Proposed no. of future BSRP stations (as indicated in BSRP network map) are not considered in the total no. of BSRP stations.
- (*) Includes 5 Nos. of stations between (Bangalore Cantt.- Whitefield) section : (Quadrupling Project)

*Figure 4: System Map of Corridor - 3*





*Figure 5: System Map of Corridor – 4*

### 1.7. ಯೋಜನೆಯ ಪ್ರತಿಕೂಲ ಪರಿಣಾಮಗಳು

#### 1.7.1. ಭೂಸ್ವಾಧೀನ

BSRP ಯೋಜನೆಯ ಜೋಡಣೆಗಳು ಬಹುತೇಕವಾಗಿ ಈಗಾಗಲೆ ಅಸ್ತಿತ್ವದಲ್ಲಿರುವ ರೈಲು ಮಾರ್ಗದ ಉದ್ದಕ್ಕೂ ರೈಲ್ವೆ / ಸರ್ಕಾರಿ ಭೂಮಿಯಲ್ಲಿ ನೆಲೆಗೊಂಡಿವೆ (BSRP ಗಾಗಿ ಅಗತ್ಯವಿರುವ ಭೂ ಪ್ರಮಾಣಿತ ಅಗಲ 16.5 ಮೀಟರ್). ಇನ್ನು ಕಾರಿಡಾರ್ ಗಳ ಅನುಸಾರ ಖಾಸಗಿ ಭೂ ಸ್ವಾಧೀನ ವಿಭಾಗಗಳ ಉದ್ದವನ್ನು ಕೆಳಗಿನ ಚಿತ್ರ 5 ರಲ್ಲಿ ವಿವರಿಸಲಾಗಿದೆ. ಕೆಲವು ಸ್ಥಳಗಳಲ್ಲಿ (ಮಾರ್ಗದ ವಿನ್ಯಾಸವನ್ನು ಸರಿಹೊಂದಿಸಲು ರೈಲ್ವೆ ಭೂಮಿ ಸಾಕಾಗುವುದಿಲ್ಲ) ಖಾಸಗಿ ಭೂಸ್ವಾಧೀನ ಅಗತ್ಯವಿದೆ. 2019 ರಲ್ಲಿ KRIDE ತನ್ನ ತಾಂತ್ರಿಕ ಸಲಹೆಗಾರ ಎಂ/ಎಸ್ ರೈಟ್ಸ್ (M/s RITES) ಮೂಲಕ ಸಿದ್ಧಪಡಿಸಿದ ಕರಡು ಎಂಜಿನಿಯರಿಂಗ್ ವಿನ್ಯಾಸವನ್ನು ಆಧರಿಸಿ ಈ SIA ವರದಿಯನ್ನು ಸಿದ್ಧಪಡಿಸಲಾಗಿದೆ. ಈ ಮಧ್ಯೆ ಯೋಜನೆಯಲ್ಲಿ ಕೆಲವು ಬದಲಾವಣೆಗಳನ್ನು ಮಾಡಲಾಗಿದೆ (ಉದಾಹರಣೆಗೆ ದೇವನಹಳ್ಳಿ ಡಿಪೋ ಸ್ಥಳ); ಪ್ರಸ್ತುತ, EPC ಗುತ್ತಿಗೆದಾರರು 8 ವಿವರವಾದ ವಿನ್ಯಾಸಗಳನ್ನು ಪ್ರವರ್ತಕರಿಗೆ (ಪ್ರೊಮೋಟರ್ಸ್) ಪ್ರಸ್ತುತಪಡಿಸುತ್ತಿದ್ದಾರೆ, ಇದನ್ನು ಅನುಮೋದನೆಗಾಗಿ K-Ride ಪರಿಶೀಲಿಸುತ್ತಿದೆ. ಜೋಡಣೆ ಮತ್ತು ವಿನ್ಯಾಸಗಳನ್ನು ಆದ್ಯತೆಯ ಪ್ರಕಾರ ಅಂತಿಮಗೊಳಿಸಲಾಗುತ್ತಿದೆ, ಅಂದರೆ, ಕಾರಿಡಾರ್ 2 ಮೊದಲ ಆದ್ಯತೆ, ಕಾರಿಡಾರ್ 4 ಎರಡನೇ ಆದ್ಯತೆ, ಕಾರಿಡಾರ್ 1 ಮೂರನೇ ಆದ್ಯತೆ ಮತ್ತು ಕಾರಿಡಾರ್ 3 ನಾಲ್ಕನೇ ಆದ್ಯತೆಯಾಗಿದೆ.

ಭೂಸ್ವಾಧೀನ ಅಧಿಕಾರಿಗಳು ಮತ್ತು ಮನವಿ ಪ್ರಾಧಿಕಾರ (ರಿಕ್ವಿಸಿಶನ್ ಅಥಾರಿಟಿ)ದ -ಅಂದರೆ, KRIDE, ಜಂಟಿ ಭೂಮಾಪನದ ನಂತರ ಭೂ ಸ್ವಾಧೀನ ಯೋಜನೆಯನ್ನು ಸಾಮಾನ್ಯವಾಗಿ ಸಿದ್ಧಪಡಿಸಲಾಗುತ್ತದೆ. ಇದು ಯೋಜನೆಗಾಗಿ ಸ್ವಾಧೀನಪಡಿಸಿಕೊಳ್ಳಬೇಕಾದ ಜಮೀನಿನ ಮಾಲೀಕರ ಹೆಸರುಗಳು, ಸರ್ವೇ ನಂಬರ್ ಪ್ರಕಾರ ನಿಖರವಾದ ಸ್ಥಳಮಾಹಿತಿ, ಬಾಧಿತ ಜಮೀನಿನ ವರ್ಗೀಕರಣ... ಇತ್ಯಾದಿ. ಮಾಹಿತಿಯನ್ನು ಒದಗಿಸುತ್ತದೆ.

ನಾಲ್ಕು ಯೋಜನೆಗಳ ಕಾರಿಡಾರ್‌ಗಳ ಪೈಕಿ ಕಾರಿಡಾರ್-2ಕ್ಕೆ ಭೂಸ್ವಾಧೀನ ಯೋಜನೆ ಸಿದ್ಧಪಡಿಸಲಾಗಿದ್ದು, ಉಳಿದ ಕಾರಿಡಾರ್‌ಗಳಿಗೆ ಭೂಸ್ವಾಧೀನ ಯೋಜನೆ ಪ್ರಕ್ರಿಯೆಯಲ್ಲಿದೆ. ಈ ವರದಿಯಲ್ಲಿ ನೀಡಲಾದ ಭೂಸ್ವಾಧೀನ ಅಂದಾಜುಗಳು ಕಾರಿಡಾರ್ 1,3 ಮತ್ತು 4 ಗಳಿಗಾಗಿ ಎಂ/ಎಸ್ ರೈಟ್ಸ್ ಸಿದ್ಧಪಡಿಸಿದ ಕರಡು ವಿನ್ಯಾಸ ವರದಿ ಮತ್ತು ಕಾರಿಡಾರ್- 2 ಕ್ಕಾಗಿ KRIDE ನ

ಭೂ ಸ್ವಾಧೀನ ತಂಡದಿಂದ ಪಡೆದ ವಿವರಗಳನ್ನು ಆಧರಿಸಿವೆ. ಕಾರಿಡಾರ್ 1 ,3 ಮತ್ತು 4 ಗಳಿಗಾಗಿ KRIDE ನ ಭೂ ಸ್ವಾಧೀನ ತಂಡವು ಭೂಸ್ವಾಧೀನ ಯೋಜನೆಯನ್ನು ಸಿದ್ಧಪಡಿಸಿದ ನಂತರವೇ ನಿಖರವಾದ ಮಾಲೀಕತ್ವವನ್ನು, ಗುರುತಿಸಲಾಗುವುದು. ಪ್ರಸ್ತುತ ಮಾಹಿತಿಯ ಆಧಾರದ ಅನುಸಾರ, ಯೋಜನೆಗಾಗಿ 56.88 ಹೆಕ್ಟೇರ್ ಖಾಸಗಿ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲಾಗುವುದು. ಕಾರಿಡಾರ್ ವಾರು ಖಾಸಗಿ ಭೂಸ್ವಾಧೀನ ವಿವರಗಳನ್ನು ಕೆಳಗಿನ ಪಟ್ಟಿಯಲ್ಲಿ ಪ್ರಸ್ತುತಪಡಿಸಲಾಗಿದೆ. ಯೋಜನೆಯಿಂದ ಯಾವುದೇ ಕೃಷಿ ಭೂಮಿಗೆ ಧಕ್ಕೆಯಾಗುವುದಿಲ್ಲ.

8 The EPC Contractor for corridor 2 was awarded during August 2022; hence the alignment finalization and designs are in progress for corridor 2. The corridor 4 was awarded during December 2023. The corridors 1 and 3 are yet to be tendered

**ಪಟ್ಟಿ 2. ಖಾಸಗಿ ಭೂಸ್ವಾಧೀನ ಸೇರಿದಂತೆ ಕಾರಿಡಾರ್ ವಾರು ಜಮೀನು ಅಗತ್ಯತೆ**

| ಕ್ರಮ ಸಂಖ್ಯೆ | ಕಾರಿಡಾರ್/ ಡಿಪೊ | ಸರ್ಕಾರಿ ಜಮೀನು | | | | | ಖಾಸಗಿ ಜಮೀನು | ಒಟ್ಟು |
|---|---|---|---|---|---|---|---|---|
| | | ರೈಲ್ವೆ ಜಮೀನು | ಕರ್ನಾಟಕ ಸರ್ಕಾರದ ಜಮೀನು | ಅರಣ್ಯ ಭೂಮಿ | ಇತರೆ ಸರ್ಕಾರಿ ಜಮೀನು | ಒಟ್ಟು ಸರ್ಕಾರಿ ಜಮೀನು | | |
| 1 | ಕಾರಿಡಾರ್-1 | 46.80 | 0.83 | 0.00 | 0.00 | 47.62 | 4.90 | **52.52** |
| 2 | ಕಾರಿಡಾರ್ - 2 | 34.70 | 2.83 | 0.00 | 3.63 | 41.16 | 2.07 | **43.23** |
| 3 | ಕಾರಿಡಾರ್ - 3 | 17.05 | 1.03 | 0.00 | 0.00 | 18.09 | 8.39 | **26.47** |
| 4 | ಕಾರಿಡಾರ್ - 4 | 46.75 | 1.94 | 0.00 | 0.00 | 48.69 | 16.31 | **65.00** |
| 5 | ಡಿಪೊ- 1 (ದೇವನಹಳ್ಳಿ) | 0.00 | 2.03 | 18.62 | 0.00 | 20.65 | 4.16 | **24.81** |
| 6 | ಡಿಪೊ- 2 (ಸೋಲದೇವನಹಳ್ಳಿ) | 0.00 | 0.00 | 0.00 | 0.00 | 0.00 | 21.05 | **21.05** |
| 7 | ಒಟ್ಟು | **145.30** | **8.66** | **18.62** | **3.63** | **176.21** | **56.88** | **233.09** |
| 8 | ಶೇಕಡಾವಾರು | 62.34% | 3.71% | 7.99% | 1.56% | 75.6% | 24.4% | |


*ಆಧಾರ: ಬಿಎಸ್ ಆರ್ ಪಿ ಕಾರ್ಯಸಾಧು ವರದಿ ಮತ್ತು ಕೆ-ರೈಡ್ (ಜಮೀನು ಸ್ವಾಧೀನ ತಂಡ)*

ಪ್ರೊಮೋಟರ್ (ಪ್ರವರ್ತಕ) ಕೆ-ರೈಡ್ ಸರ್ಕಾರಿ/ರೈಲ್ವೆ ಭೂಮಿಯನ್ನು ಬಳಸಿಕೊಳ್ಳುವ ಮೂಲಕ, ಜಮೀನು ಅವಶ್ಯಕತೆಗಳನ್ನು ಸಾಧ್ಯವಾದಷ್ಟು ಕಡಿಮೆ ಮಾಡಲು ವಿನ್ಯಾಸಗಳನ್ನು

ಉತ್ತಮಗೊಳಿಸಿದೆ. ಹಾಗೂ ತಗ್ಗಿಸುವಿಕೆಯ ಶ್ರೇಣಿಯನ್ನು (ನಿರೀಕ್ಷಿಸುವುದು ಮತ್ತು ತಪ್ಪಿಸುವುದು, ಕಡಿಮೆಗೊಳಿಸುವುದು, ತಗ್ಗಿಸುವುದು) ಅಳವಡಿಸಿಕೊಂಡಿದೆ.

ಪ್ರಸ್ತಾವಿತ ಬಿಎಸ್‌ಆರ್‌ಪಿ ಯೋಜನೆಯ ನಿಲ್ದಾಣಗಳು, ಡಿಪೋಗಳು ಮತ್ತು ಚಾಲನೆಯಲ್ಲಿರುವ ಕಾರಿಡಾರ್ ವಿಭಾಗಗಳಿಗೆ ಶಾಶ್ವತವಾಗಿ ಜಮೀನು ಸ್ವಾಧೀನಪಡಿಸಿಕೊಳ್ಳುವ ಅಗತ್ಯವಿದೆ. ಯೋಜನೆಗಾಗಿ ಸರ್ಕಾರಿ ಮತ್ತು ಖಾಸಗಿ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲಾಗುವುದು. ರಾಜ್ಯ ಸರ್ಕಾರದ ಸುಮಾರು 8.66 ಹೆಕ್ಟೇರ್ ಭೂಮಿ, 145.30 ಹೆಕ್ಟೇರ್ ರೈಲ್ವೆ ಭೂಮಿ, 18.62 ಹೆಕ್ಟೇರ್ ಅರಣ್ಯ ಭೂಮಿ, 3.63 ಹೆಕ್ಟೇರ್ ಇತರೆ ವರ್ಗದ ಸರ್ಕಾರಿ ಜಮೀನು ಅಗತ್ಯವಿದೆ. ಉದ್ದೇಶಿತ ಯೋಜನೆಗೆ 56.88 ಹೆಕ್ಟೇರ್ ಖಾಸಗಿ ಭೂಮಿ ಅಗತ್ಯವಿದೆ. ರೈಲ್ವೆ ಭೂಮಿಯನ್ನು KRIDE ಗೆ ಎಕರೆಗೆ 1 ರೂಪಾಯಿಯಂತೆ ಅತ್ಯಲ್ಪ ಶುಲ್ಕಕ್ಕೆ ವರ್ಗಾಯಿಸಲಾಗುವುದು. ವಿವರವಾದ ಕಾರ್ಯಸಾಧ್ಯತಾ ವರದಿಯಲ್ಲಿ (DFR), ಸಿವಿಲ್ ಎಂಜಿನಿಯರಿಂಗ್ ವಿಭಾಗದಲ್ಲಿ ಅದರ ವಿವರಗಳನ್ನು ನೀಡಲಾಗಿದೆ. ಪ್ರಸ್ತಾವಿತ ಯೋಜನೆಯ ಕಾರಿಡಾರ್‌ಗಳು, ಡಿಪೋಗಳು ಮತ್ತು ನಿಲ್ದಾಣಗಳಿಗೆ ಸುಮಾರು 233.09 ಹೆಕ್ಟೇರ್ ಅಗತ್ಯವಿದೆ. ಭೂಮಿಯ ಅಗತ್ಯವನ್ನು ಮೇಲಿನ ಪಟ್ಟಿಯಲ್ಲಿ ವಿವರಿಸಲಾಗಿದೆ.

ಸ್ವಾಧೀನಪಡಿಸಿಕೊಳ್ಳಬೇಕಾದ ಒಟ್ಟು ಖಾಸಗಿ ಭೂಮಿಯಲ್ಲಿ, ಕಾರಿಡಾರ್ -2 ಗಾಗಿ 2.07 ಹೆಕ್ಟೇರ್ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ ಮತ್ತು ಖಾಸಗಿ ಭೂ ಮಾಲೀಕರಿಗೆ (ಯಾರ ಹೆಸರಿನಲ್ಲಿದೆಯೋ ಅವರಿಗೆ) ಪರಿಹಾರವನ್ನು ಪಾವತಿಸಲಾಗಿದೆ; ಕಾರಿಡಾರ್ 2 RAP ಗಳನ್ನು ಪೂರ್ಣಗೊಳಿಸಿದ ನಂತರ R&R ನೆರವನ್ನು ಪಾವತಿಸಲಾಗುತ್ತದೆ. ಇತರೆ ಕಾರಿಡಾರ್‌ಗಳಿಗಾಗಿ ಖಾಸಗಿ ಭೂಮಿಯನ್ನು ಇನ್ನೂ ಸ್ವಾಧೀನಪಡಿಸಿಕೊಳ್ಳಬೇಕಿದೆ. ಯೋಜನೆಯ ಕಾರಿಡಾರ್‌ಗಳ ಉದ್ದ, ಖಾಸಗಿ ಭೂಸ್ವಾಧೀನ ಮುಕ್ತ ವಿಸ್ತರಣೆಗಳ ಉದ್ದ ಮತ್ತು ಖಾಸಗಿ ಭೂ ಸ್ವಾಧೀನ ವಿಸ್ತರಣೆಗಳ ಉದ್ದವನ್ನು ಕೆಳಗಿನ ಚಿತ್ರದಲ್ಲಿ ತೋರಿಸಲಾಗಿದೆ (ಎಸ್‌ಐಎ ತಂಡವು ಮಾಡಿದ ಮೌಲ್ಯಮಾಪನದ ಆಧಾರದ ಮೇಲೆ).




ಚಿತ್ರ 6: ಕಾರಿಡಾರ್‌ಗಳು - ಭೂ ಸ್ವಾಧೀನ ಉಚಿತ ವಿಸ್ತರಣೆಗಳು ಮತ್ತು ಭೂ ಸ್ವಾಧೀನ ವಿಸ್ತರಣೆಗಳು.

ಗಮನಿಸಿ: ಕಾರಿಡಾರ್ 1 ರ ಉದ್ದವು 5.9 ಕಿಮೀ ವಿಮಾನ ನಿಲ್ದಾಣದ ಸಂಪರ್ಕದ ಉದ್ದವನ್ನು ಒಳಗೊಂಡಿದೆ.

1.7.2. ಬಾಧಿತ ನಿರ್ಮಾಣ/ ಕಟ್ಟಡಗಳು

ಮೇ 2023 ರ ಪ್ರಾಥಮಿಕ ಜನಗಣತಿ ಸಮೀಕ್ಷೆಯ ಪ್ರಕಾರ, 4 ಕಾರಿಡಾರ್‌ಗಳಲ್ಲಿ ಒಟ್ಟು 649 ಬಾಧಿತ ರಚನೆಗಳನ್ನು ಪ್ರಾಥಮಿಕವಾಗಿ ಗುರುತಿಸಲಾಗಿದೆ:

• 332 ವಸತಿ ಕಟ್ಟಡಗಳು,

• 77 ವಾಣಿಜ್ಯ,

• 48 ವಸತಿ ಮತ್ತು ವಾಣಿಜ್ಯ ಕಟ್ಟಡಗಳು ಮತ್ತು

• 27 ಸಾಮಾನ್ಯ ಆಸ್ತಿ ಸಂಪನ್ಮೂಲಗಳು (CPRs);

• ಇನ್ನು 165 ರಚನೆಗಳ ನಿವಾಸಿಗಳು/ಮಾಲೀಕರು ಸಮೀಕ್ಷೆಯಲ್ಲಿ ಸಹಕರಿಸಿಲ್ಲ. ಈ ಅಸಹಕಾರದಿಂದಾಗಿ ಮತ್ತು ಸಮೀಕ್ಷಾ ತಂಡದೊಂದಿಗೆ ತೊಡಗಿಸಿಕೊಳ್ಳಲು

ಇಷ್ಟವಿಲ್ಲದಿರುವುದರಿಂದಾಗಿ ಮತ್ತು ನಿರ್ಮಾಣ/ ರಚನೆಗಳ ನಷ್ಟಪರಿಣಾಮ ಸಮೀಕ್ಷೆಯನ್ನು ನಡೆಸಲು ಸಾಧ್ಯವಾಗಿರುವುದಿಲ್ಲ; ಹಾಗೂ ಪರಿಣಾಮಗಳನ್ನು ವರ್ಗೀಕರಿಸಲು ಸಾಧ್ಯವಾಗಿರುವುದಿಲ್ಲ.

ಕೆಳಗಿನ ಪಟ್ಟಿ ವಿವಿಧ ರೀತಿಯ ನಿರ್ಮಾಣ/ ರಚನೆಗಳ ಮೇಲೆ ಯೋಜನೆಯ ಪರಿಣಾಮವನ್ನು ಸೂಚಿಸುತ್ತದೆ. ಅಂದರೆ ವಸತಿ, ವಾಣಿಜ್ಯ, ವಸತಿಯನ್ನೂ ಹೊಂದಿರುವ ವಾಣಿಜ್ಯ; ಇತರ ಸಣ್ಣ ರಚನೆಗಳು ಉದಾಹರಣೆಗೆ ಆವರಣ/ ಕಾಂಪೌಂಡ್ ಗೋಡೆಯ ಭಾಗ, ಶೌಚಾಲಯ, ಕಾರ್ ಶೆಡ್, ಛಾವಣಿ ಇತ್ಯಾದಿ. 282 ರಚನೆಗಳು ಸಂಪೂರ್ಣವಾಗಿ ಬಾಧಿತವಾಗಲಿವೆ; ಮತ್ತು 202 ರಚನೆಗಳು ಭಾಗಶಃ ಬಾಧಿತವಾಗಲಿವೆ.

- ಕಾರಿಡಾರ್-1 ರಲ್ಲಿ ಒಟ್ಟು 85 ರಚನೆಗಳು ಬಾಧಿತ,
- ಕಾರಿಡಾರ್-2 ರಲ್ಲಿ 289 ರಚನೆಗಳು ಬಾಧಿತ,
- ಕಾರಿಡಾರ್-3 ಮತ್ತು 135 ರಚನೆಗಳು ಬಾಧಿತ
- ಕಾರಿಡಾರ್ 4 ರಲ್ಲಿ 140 ರಚನೆಗಳು ಬಾಧಿತ.

ಎಲ್ಲಾ ಕಾರಿಡಾರ್‌ಗಳಲ್ಲಿ, ಸುಮಾರು ಅರ್ಧದಷ್ಟು ಅಂದರೆ, ಶೇ. 51.16 ರಷ್ಟು ಬಾಧಿತ ರಚನೆಗಳು ವಸತಿಗೃಹಗಳಾಗಿವೆ. ಬಿಎಸ್‌ಆರ್‌ಪಿಯ ಭೂಸ್ವಾಧೀನ ತಂಡದಿಂದ ಜಂಟಿ ಮಾಪನ ನಡೆಸಿ ಜಂಟಿ ಮಾಪನ ಪ್ರಮಾಣ ಪತ್ರ (ಜೆಎಂಸಿ) ನೀಡಿದ ನಂತರವೇ ನಿಜವಾದ ಮಾಲೀಕತ್ವದ ಸ್ಥಿತಿ ತಿಳಿಯಲಿದೆ.

ಪ್ರಮುಖ ರಚನೆಗಳ ಛಾಯಾಚಿತ್ರಗಳು (ವಸತಿ ಹಾಗೂ ವಸತಿಯನ್ನೊಳಗೊಂಡ ವಾಣಿಜ್ಯ) ಮತ್ತು CPR ಗಳನ್ನು ಅನುಬಂಧ-ಸಿ ನಲ್ಲಿ ಲಗತ್ತಿಸಲಾಗಿದೆ (ಇದರಲ್ಲಿ ಕಾರಿಡಾರ್ 2 ಅನ್ನು ಹೊರತುಪಡಿಸಲಾಗಿದೆ. ಏಕೆಂದರೆ ಅದರ ಮರು-ಸಮೀಕ್ಷೆ ಮಾಡಲಾಗಿದೆ ಮತ್ತು ಛಾಯಾಚಿತ್ರಗಳನ್ನು ಇನ್ನೂ ತೆಗೆದುಕೊಳ್ಳಬೇಕಾಗಿದೆ). ಕಾರಿಡಾರ್-2 ರ ರಚನೆಗಳ ಗುರುತಿಸುವಿಕೆಯು ಲಭ್ಯವಿರುವ ವಿನ್ಯಾಸವನ್ನು ಆಧರಿಸಿದೆ, ಇದು ಅಂತಿಮ ಹಂತದಲ್ಲಿದೆ, ಆದರೆ ಇತರ ಕಾರಿಡಾರ್‌ಗಳಿಗೆ ಜೋಡಣೆಗಳು/ವಿನ್ಯಾಸಗಳು ಇನ್ನೂ ಅಂತಿಮಗೊಂಡಿಲ್ಲ. ಹೀಗಾಗಿ ಪಟ್ಟಿಗಳಲ್ಲಿ ಪ್ರಸ್ತುತಪಡಿಸಲಾದ ಫಲಿತಾಂಶಗಳನ್ನು ಎಲ್ಲಾ ಕಾರಿಡಾರ್‌ಗಳಿಗೆ ಪ್ರಾಥಮಿಕವೆಂದು ಪರಿಗಣಿಸಬೇಕು.

**ಪಟ್ಟಿ 3. ಒಟ್ಟು ಬಾಧಿತ ರಚನೆಗಳು**

| ಭಾಗಶಃ ಮತ್ತು ಸಂಪೂರ್ಣ ಬಾಧಿತ ರಚನೆಗಳು | C1 | C2 | C3 | C4 | ಒಟ್ಟು | ಶೇಕಡಾವಾರು |
|---|---|---|---|---|---|---|
| ವಸತಿ | 46 | 177 | 48 | 61 | 332 | 51.16% |
| ವಾಣಿಜ್ಯ | 4 | 54 | 14 | 5 | 77 | 11.86% |
| ವಸತಿಯನ್ನೊಳಗೊಂಡ ವಾಣಿಜ್ಯ | 1 | 43 | 4 | 0 | 48 | 7.40% |
| ಸಿಪಿಆರ್ ಗಳು | 1 | 15 | 6 | 5 | 27 | 4.16% |
| ಸಮೀಕ್ಷೆಗೆ ಸಹಕಾರ ನೀಡದವರು* | 3 3 | 0 | 63 | 69 | 165 | 25.42% |
| ಒಟ್ಟು | 85 | 289 | 135 | 140 | 649 | 100.00% |

ಗಮನಿಸಿ: ಈ ಪಟ್ಟಿಯಲ್ಲಿ ಪ್ರಸ್ತುತಪಡಿಸಲಾದ ಬಾಧಿತ ರಚನೆಗಳ ಸಂಖ್ಯೆಯು ಪ್ರಾಥಮಿಕವಾಗಿದೆ. ಎಲ್ಲಾ ಕಾರಿಡಾರ್‌ಗಳ ಅಂತಿಮ ಸಮೀಕ್ಷೆಯ ಫಲಿತಾಂಶಗಳು ನಂತರದ ಹಂತದಲ್ಲಿ ಲಭ್ಯವಿರುತ್ತವೆ. ಪ್ರತಿ ಕಾರಿಡಾರ್-ವಾರು RAP ವಿವರಗಳನ್ನು, ಸಿದ್ಧಪಡಿಸಲಾದ RAP ಗಳಲ್ಲಿ ಪ್ರಸ್ತುತಪಡಿಸಲಾಗುತ್ತದೆ.

* ಈ ಅಸಹಕಾರದಿಂದಾಗಿ ಮತ್ತು ಸಮೀಕ್ಷಾ ತಂಡದೊಂದಿಗೆ ತೊಡಗಿಸಿಕೊಳ್ಳಲು ಇಷ್ಟವಿಲ್ಲದಿರುವುದರಿಂದಾಗಿ ಮತ್ತು ನಿರ್ಮಾಣ/ ರಚನೆಗಳ ನಷ್ಟಪರಿಣಾಮ ಸಮೀಕ್ಷೆಯನ್ನು ನಡೆಸಲು ಸಾಧ್ಯವಾಗಿರುವುದಿಲ್ಲ; ಹಾಗೂ ಪರಿಣಾಮಗಳನ್ನು ವರ್ಗೀಕರಿಸಲು ಸಾಧ್ಯವಾಗಿರುವುದಿಲ್ಲ.

ಭಾಗಶಃ ಬಾಧಿತ ಕಟ್ಟಡಗಳ ಸಂದರ್ಭದಲ್ಲಿ, ಕಟ್ಟಡದ ಉಳಿದ ಭಾಗವು ದುರಸ್ತಿ ಮತ್ತು ನವೀಕರಣದ ನಂತರ ಸುರಕ್ಷಿತವಾಗಿದೆಯೇ ಎಂದು ನಿರ್ಣಯಿಸಲು ಬಾಧಿತ ಕುಟುಂಬದೊಂದಿಗೆ ಸಮಾಲೋಚಿಸಲಾಗುವುದು. ನಿರ್ಮಾಣ/ ರಚನೆಯ ಮೌಲ್ಯಮಾಪನದ ಸಮಯದಲ್ಲಿ ಅರ್ಹ ಎಂಜಿನಿಯರ್‌ಗಳಿಂದ ಸ್ಥಿರತೆಯ ಮೌಲ್ಯಮಾಪನವನ್ನು ಮಾಡಲಾಗುತ್ತದೆ. ಸದ್ಯಕ್ಕೆ, ಕಂಪನದಿಂದ ಉಂಟಾಗುವ ಸಂಭಾವ್ಯ ರಚನಾತ್ಮಕ ಹಾನಿಯಿಂದಾಗಿ ಯಾವುದೇ ಕೆಡವುವಿಕೆ ನಿರೀಕ್ಷಿಸಲಾಗಿಲ್ಲ. ಇಂಜಿನಿಯರ್‌ಗಳ ಪರಿಶೀಲನೆಯ ನಂತರ ಸ್ಥಳಾಂತರಗೊಂಡ ಮತ್ತು ಬಾಧಿತರ ನಿಖರ ಸಂಖ್ಯೆಯನ್ನು ಅಂತಿಮಗೊಳಿಸಲಾಗುತ್ತದೆ. ಈ ವರದಿಯ ಅಧ್ಯಾಯ 4ರ ಅಡಿಯಲ್ಲಿ ವರ್ಗವಾರು ಪ್ರಾಥಮಿಕ ಪರಿಣಾಮಗಳನ್ನು ಚರ್ಚಿಸಲಾಗಿದೆ.

ಪಟ್ಟಿ 4. ಯೋಜನೆಯಿಂದ ಬಾಧಿತ ಕುಟುಂಬಗಳು

**ಯೋಜನೆಯಿಂದ ಬಾಧಿತ ಕುಟುಂಬಗಳು**

| ಕ್ರಮ ಸಂಖ್ಯೆ | ಯೋಜನೆಯಿಂದ ಬಾಧಿತ ಕುಟುಂಬಗಳು | C1 | C2 | C3 | C4 | ಒಟ್ಟು |
|---|---|---|---|---|---|---|
| A | ಬಾಧಿತ PAH – ಯಾರ ಹೆಸರಿನಲ್ಲಿ ಜಮೀನಿದೆಯೋ ಆ ಮಾಲೀಕರು | 94 | 267 | 106 | 150 | **617** |
| B | ಬಾಧಿತ PAHs- ತಮ್ಮ ಹೆಸರಿನಲ್ಲಿ ಜಮೀನಿಲ್ಲದ ಬಾಧಿತರು | 34 | 44 | 43 | 26 | **147** |
| C | ಬಾಧಿತ PAHs- ತಮ್ಮ ಹೆಸರಿನಲ್ಲಿ ಜಮೀನಿಲ್ಲದ ಬಾಧಿತರು; ಕೊಳಚೆ ಪ್ರದೇಶ ನಿವಾಸಿಗಳು | 0 | 109 | 0 | 0 | **109** |
| D | ಬಾಧಿತ PAH – ಬಾಡಿಗೆದಾರರು. (ಮತ್ತೊಬ್ಬರ ಮಾಲೀಕತ್ವದ ಕಟ್ಟಡಗಳಲ್ಲಿ ವಾಸಿಸುವ ಬಾಡಿಗೆದಾರರು) | 11 | 156 | 31 | 30 | **228** |
| E | ಬಾಧಿತ ಕುಟುಂಬಗಳು; ವಿವರಗಳನ್ನು ಪೂರೈಸಿರುವುದಿಲ್ಲ/ ನೀಡಿರುವುದಿಲ್ಲ. * | 33 | 0 | 63 | 69 | **165** |
| F | ಬಾಧಿತ ಕಾರ್ಮಿಕರು | 0 | 2 | 0 | 0 | **2** |
| | **ಒಟ್ಟು** | **172** | **578** | **243** | **275** | **1268** |
| G | ಸ್ಥಳಾಂತರಗೊಂಡ ಉದ್ಯೋಗಿಗಳ ಸಂಖ್ಯೆ | 9 | 11 | 27 | 17 | **64** |

* ಈ ಅಸಹಕಾರದಿಂದಾಗಿ ಮತ್ತು ಸಮೀಕ್ಷಾ ತಂಡದೊಂದಿಗೆ ತೊಡಗಿಸಿಕೊಳ್ಳಲು ಇಷ್ಟವಿಲ್ಲದಿರುವುದರಿಂದಾಗಿ ಮತ್ತು ನಿರ್ಮಾಣ/ ರಚನೆಗಳ ನಷ್ಟಪರಿಣಾಮ ಸಮೀಕ್ಷೆಯನ್ನು ನಡೆಸಲು ಸಾಧ್ಯವಾಗಿರುವುದಿಲ್ಲ; ಹಾಗೂ ಪರಿಣಾಮಗಳನ್ನು ವರ್ಗೀಕರಿಸಲು ಸಾಧ್ಯವಾಗಿರುವುದಿಲ್ಲ.

ಮಾರ್ಚ್ 2023 ರ ಸಮೀಕ್ಷೆಗಳಲ್ಲಿ ಸ್ಥಳೀಯ PAP ಅಸಹಕಾರ ಕಾರಣ ಕೆಳಗಿನ ಪಟ್ಟಿಯಲ್ಲಿ ಗುರುತಿಸಲಾದ ಸ್ಥಳಗಳಿಗೆ ಸಾಮಾಜಿಕ-ಆರ್ಥಿಕ ಸಮೀಕ್ಷೆಯನ್ನು ಇನ್ನೂ ಮಾಡಲಾಗಲಿಲ್ಲ. ಆದಾಗ್ಯೂ, ಎಸ್ಐಎ ತಂಡದಿಂದ (ಕಣ್ಣಳತೆ ಮೌಲ್ಯಮಾಪನ) ದೂರದಿಂದ ಎಣಿಕೆಯನ್ನು ಮಾಡಲಾಗಿದೆ. ಈ ಮಧ್ಯೆ, ಈಗಾಗಲೇ ಸ್ಥಳಾಂತರಗೊಂಡಿರುವ ಜನರೊಂದಿಗೆ KRIDE ಸಮಾಲೋಚನೆಗಳನ್ನು ಪ್ರಾರಂಭಿಸಿದೆ ಹಾಗೂ RAP ಅನುಷ್ಠಾನ ವೇಳಾಪಟ್ಟಿಯಲ್ಲಿ ಸೂಚಿಸಿದ

ಕಾಲಮಿತಿಯೊಳಗೆ ಶೀಘ್ರದಲ್ಲೇ ಇತ್ಯರ್ಥಗೊಳಿಸುತ್ತದೆ. ಏಪ್ರಿಲ್ ಮತ್ತು ಜೂನ್ 2024 ರ ನಡುವೆ SIA/RPF ಅನ್ನು KRIDE ಬಹಿರಂಗಪಡಿಸುತ್ತದೆ. ಪುನರ್ವಸತಿ ಕ್ರಿಯಾ ಯೋಜನೆ ತಯಾರಿ ಮತ್ತು ಅನುಷ್ಠಾನ ಸಲಹೆಗಾರರು (RAPPIC) ಈ ಕುಟುಂಬಗಳ ವಿವರವಾದ ಜನಗಣತಿ ಮತ್ತು ಸಾಮಾಜಿಕ-ಆರ್ಥಿಕ ಸಮೀಕ್ಷೆಯನ್ನು ಕೈಗೊಳ್ಳುತ್ತಾರೆ. ನಿರ್ಮಾಣ ಕಾಮಗಾರಿಗೆ ಮುಂಚಿತವಾಗಿ ಪುನರ್ವಸತಿ ಯೋಜನೆಗಳನ್ನು ಅಭಿವೃದ್ಧಿಪಡಿಸುತ್ತಾರೆ. ಅನುಷ್ಠಾನ ವೇಳಾಪಟ್ಟಿಯನ್ನು ಪಟ್ಟಿ-16 ರ ಅಡಿಯಲ್ಲಿ ಪ್ರಸ್ತುತಪಡಿಸಲಾಗಿದೆ. ಬಾಧಿತ ಜನಗಣತಿ ಸಮೀಕ್ಷೆ ಬಾಕಿ ಇರುವ ಸ್ಥಳಗಳ ವಿವರಗಳನ್ನು ಕೋಷ್ಟಕದ ಕೆಳಗೆ ಪಟ್ಟಿ ಮಾಡಲಾಗಿದೆ. ಈ 165 ರಚನೆಗಳು, ಈಗಾಗಲೆ ಸಮೀಕ್ಷೆ ಮಾಡಲಾದ 484 ಬಾಧಿತ ರಚನೆಗಳಿಗೆ ಹೆಚ್ಚುವರಿಯಾಗಿವೆ; ಹೀಗಾಗಿ ಬಾಧಿತ ರಚನೆಗಳು/ಕಟ್ಟಡಗಳ ಒಟ್ಟು ಸಂಖ್ಯೆ 649 ಆಗಿದೆ. ಸಮೀಕ್ಷೆ ಬಾಕಿ ಇರುವ ಸ್ಥಳಗಳನ್ನು ಕೆಳಗಿನ ಕೋಷ್ಟಕದಲ್ಲಿ ನೀಡಲಾಗಿದೆ ಮತ್ತು ನಕ್ಷೆಯಲ್ಲಿ ತೋರಿಸಲಾಗಿದೆ:

**ಪಟ್ಟಿ 5. ಜನಗಣತಿ ಮತ್ತು ಸಾಮಾಜಿಕ-ಆರ್ಥಿಕ ಸಮೀಕ್ಷೆ ಬಾಕಿ ಇರುವ ಸ್ಥಳಗಳು (ಕಾರಿಡಾರ್ 1, 3 ಮತ್ತು 4).**

| ಕ್ರಮ ಸಂಖ್ಯೆ | ಸರಣಿ (BSRP) | | ಸ್ಥಳ | ಕಾರಿಡಾರ್ | ಬಾಧಿಕಗೊಳ್ಳ ಬಹುದಾದ ಕಟ್ಟಡಗಳ ಸಂಖ್ಯೆ | ಬಾಧಿತ ಕಟ್ಟಡಗಳ ಕುರಿತ ವಿವರ |
|---|---|---|---|---|---|---|
| | ಆರಂಭ | ಅಂತ್ಯ | | | | |
| 1 | 5/880 | 6/100 | ಯಶವಂತಪುರ ರೈಲು ನಿಲ್ದಾಣದ ಬಳಿ | 1 | 33 | ಎಲ್ಲವೂ ವಸತಿ ಕಟ್ಟಡಗಳು |
| 2 | 7/550 | 8/000 | ಕೃಷ್ಣದೇವರಾಯ ನಿಲುಗಡೆ | 3 | 28 | ಎಲ್ಲವೂ ವಸತಿ ಕಟ್ಟಡಗಳು |
| 3 | 12/110 | 12/600 | ಕೆಎಸ್ಆರ್ ರೈಲ್ವೆ ನಿಲ್ದಾಣ | 3 | 35 | ಎಲ್ಲವೂ ವಸತಿ ಕಟ್ಟಡಗಳು |
| 4 | 15/850 | 16/120 | ಬೆಳ್ಳಂದೂರು ರಸ್ತೆ | 4 | 15 | ಎಲ್ಲವೂ ವಸತಿ ಕಟ್ಟಡಗಳು |
| 5 | 37/152 | 38/800 | ಯಲಹಂಕ ನಿಲ್ದಾಣ | 4 | 54 | 24 ವಸತಿ ಕಟ್ಟಡಗಳು, 14 ವಾಣಿಜ್ಯ and 16 ವಸತಿ ಒಳಗೊಂಡ ವಾಣಿಜ್ಯ ಕಟ್ಟಡಗಳು. |
| ಒಟ್ಟು | | | | | 165 | |

ಈ ಪ್ರಾಥಮಿಕ ಸಮೀಕ್ಷೆಗಳು ಮತ್ತು ಸಮಾಲೋಚನೆಗಳ ಸಮಯದಲ್ಲಿ ಕೆಲವು ವ್ಯಕ್ತಿಗಳು ಸಂಪೂರ್ಣವಾಗಿ ಸಹಕಾರ ನೀಡಿರುವುದಿಲ್ಲ. ಮತ್ತು ಕೆಲವು ವ್ಯಕ್ತಿಗಳು ಸಮೀಕ್ಷೆ/ಸಮಾಲೋಚನೆ ಪ್ರಕ್ರಿಯೆಯಲ್ಲಿ ಭಾಗವಹಿಸಿರುವುದಿಲ್ಲ. ಇದಕ್ಕೆ ಪ್ರಮುಖ ಕಾರಣವೆಂದರೆ ಪರಿಹಾರ ಮತ್ತು ಪುನರ್ವಸತಿ ಹಕ್ಕುಗಳಿಗೆ ಸಂಬಂಧಿಸಿದ ಮಾಹಿತಿಯನ್ನು ಬಹಿರಂಗಪಡಿಸದಿರುವುದು, ಏಕೆಂದರೆ ಅದು ಆ ಹೊತ್ತಿಗೆ ಸಿದ್ಧವಾಗಿರಲಿಲ್ಲ ಮತ್ತು ಅನುಮೋದಿಸಲ್ಪಟ್ಟಿರುವುದಿಲ್ಲ. ಜನಗಣತಿ ಮತ್ತು ಸಾಮಾಜಿಕ-ಆರ್ಥಿಕ ಸಮೀಕ್ಷೆಗೆ ಮುಂಚಿತವಾಗಿ ಅರ್ಹತೆಯ ಮಾನದಂಡವನ್ನು ಬಹಿರಂಗಪಡಿಸಲು ಜನರು ಒತ್ತಾಯಿಸಿದರು. ಅವರ ಜೀವನಾಧಾರಗಳು ಮತ್ತು ಮಕ್ಕಳ ಶಾಲೆ… ಇತ್ಯಾದಿಗಳು ವಸತಿಗೆ ಹತ್ತಿರದಲ್ಲಿರುವುದರಿಂದ ಪುನರ್ವಸತಿ ಸ್ಥಳವು, ಈಗ ಅಸ್ತಿತ್ವದಲ್ಲಿರುವ ಸ್ಥಳಕ್ಕೆ ಸಮೀಪದಲ್ಲಿರಬೇಕೆಂದು ಅವರು ಒತ್ತಾಯಿಸಿದರು. RAP ಅನುಷ್ಠಾನ ವೇಳಾಪಟ್ಟಿಯಲ್ಲಿ ತಿಳಿಸಲಾದ ಕಾಲಮಿತಿಯೊಳಗೆ ಸಂಪೂರ್ಣ ವಿವರವಾದ ಸಮೀಕ್ಷೆಯನ್ನು ಪೂರ್ಣಗೊಳಿಸಲಾಗುವುದು.

ವಿಸ್ತೃತ ಸಮೀಕ್ಷೆ ನಡೆಸಬೇಕಾದ ಸ್ಥಳಗಳಲ್ಲಿ ಮತ್ತಿಕೆರೆಯೂ ಒಂದಾಗಿದೆ. ಸಮೀಕ್ಷೆ ಮಾಡಲಾದ ಒಟ್ಟು (484 ರಚನೆಗಳು) ಕಟ್ಟಡಗಳ ಪೈಕಿ ಬಹುಪಾಲು ಒಂದೇ ಅಂತಸ್ತಿನ ಕಟ್ಟಡಗಳಾಗಿವೆ. RAP ತಯಾರಿಗಾಗಿ ಬಾಧಿತ ಕಟ್ಟಡಗಳ ವಿವರಗಳು ಮತ್ತು ಮೇಲ್ಮೈ ಗುಣಲಕ್ಷಣಗಳನ್ನು (ಏಕ/ಬಹು ಅಂತಸ್ತಿನ) ಅಂತಿಮ ಸಮೀಕ್ಷೆಯ ಸಮಯದಲ್ಲಿ ಚಿತ್ರಿಸಲಾಗುತ್ತದೆ. ಅನುಬಂಧ-ಸಿ ಯಲ್ಲಿ ಬಾಧಿತ ಕಟ್ಟಡಗಳ ಅವಲೋಕನ ಒದಗಿಸಲಾಗಿದೆ.

11 For corridor 2 the location is at Mathikere, where a detailed census survey needs to be conducted; and at other areas the surveys already conducted need to be ground-truthed and updated. The survey has not yet been conducted due to changes in the design and footprint, but not due to opposition.

### 1.7.3. ಮತ್ತಿಕೆರೆ ಕೊಳಚೆ ಪ್ರದೇಶದ ಮೇಲಿನ (ಸ್ಲಮ್ ಇಂಪ್ಯಾಕ್ಟ್) ನಿರ್ವಹಣೆ (ಕಾರಿಡಾರ್ 2)

ಕಾರಿಡಾರ್ 2ರ ವ್ಯಾಪ್ತಿಗೆ ಬರುವ ಮತ್ತಿಕೆರೆ ಕೊಳಚೆ ಪ್ರದೇಶದ (ಸ್ಲಮ್) ಮೇಲೆ ಆಗುವ ಪರಿಣಾಮಗಳ ಕುರಿತು ಕೆ-ರೈಡ್ ಕರ್ನಾಟಕ ಕೊಳೆಗೇರಿ ನಿರ್ಮೂಲನಾ ಮಂಡಳಿಯೊಂದಿಗೆ ಸಮಾಲೋಚನೆ ಆರಂಭಿಸಿದೆ. ಆದರೆ, ಯಾವುದೇ ಅಪಾಯವನ್ನು ತಪ್ಪಿಸಲು, ಮನೆಗಳನ್ನು ಕೆಡವುವುದು ಅನಿವಾರ್ಯವಲ್ಲ. ಆದರೆ ವಯಡಕ್ಟ್ ವಿಭಾಗದ ನಿರ್ಮಾಣ ಚಟುವಟಿಕೆಗಳ ಸಮಯದಲ್ಲಿ ಜನರು ಆ ಪ್ರದೇಶದ ಮನೆಗಳಲ್ಲಿ ವಾಸಿಸಲು ಅನುಮತಿ ನೀಡಲಾಗುವುದಿಲ್ಲ. 109 PAH ಗಳ ಮೇಲಿನ ಪರಿಣಾಮಗಳು ತಾತ್ಕಾಲಿಕವಾಗಿರುತ್ತವೆ ಮತ್ತು ನಿರ್ಮಾಣ ಚಟುವಟಿಕೆಗಳು ಪೂರ್ಣಗೊಂಡ ನಂತರ ಜನರು ತಮ್ಮ ಮನೆಗಳಿಗೆ ಹಿಂದಿರುಗುವ ನಿರೀಕ್ಷೆಯಿದೆ.

ಮತ್ತಿಕೆರೆ ಸ್ಲಮ್ ಅನ್ನು "ಎಂ ಆರ್ ಜಯರಾಮ್ ಕಾಲೋನಿ" ಎಂದು ಕರೆಯಲಾಗುತ್ತದೆ. ಇದು ಬೆಂಗಳೂರಿನ ಉತ್ತರ ಪ್ರದೇಶದ ಕೊಳೆಗೇರಿ ಎಂದು ಸೂಚಿಸಲಾಗಿದೆ. ಈ ಕೊಳೆಗೇರಿಯು 390 ಮೀ ಉದ್ದ ಮತ್ತು 10.69 ಮೀ ಅಗಲದೊಂದಿಗೆ 1.03 ಎಕರೆ (4,168.30 ಚದರ ಮೀಟರ್) ಪ್ರದೇಶದಲ್ಲಿ ವ್ಯಾಪಿಸಿದೆ. ಇದು ಭಾರತೀಯ ರೈಲ್ವೆಯ ಗಡಿಯೊಳಗೆ ಇದೆ, ಅಲ್ಲಿ ಹಿಂದಿನ ನ್ಯಾರೋ ಗೇಜ್ ಜೋಡಣೆಯು ಕಾರ್ಯ ನಿರ್ವಹಿಸುತ್ತಿತ್ತು. ಈ ಕೊಳೆಗೇರಿಯು ಒಟ್ಟು 143 ರಚನೆಗಳನ್ನು ಹೊಂದಿದೆ ಮತ್ತು 650 ಜನರು ಕೊಳೆಗೇರಿಯಲ್ಲಿ ಉಳಿದುಕೊಂಡಿದ್ದಾರೆ. ಕೊಳೆಗೇರಿ ನಿವಾಸಿಗಳಲ್ಲಿ ಅನೇಕರು ಅನಕ್ಷರಸ್ಥರು ಮತ್ತು ಅಲ್ಪಸಾಕ್ಷರರು; ಎಂಬಿಬಿಎಸ್ (ವೈದ್ಯರು; ಓರ್ವ ವ್ಯಕ್ತಿ), ಇಂಜಿನಿಯರ್‌ಗಳು (3 ವ್ಯಕ್ತಿಗಳು), ಕಲೆಯಲ್ಲಿ ಪದವೀಧರರು (6 ವ್ಯಕ್ತಿಗಳು) ಮುಂತಾದ ಉತ್ತಮ ಶಿಕ್ಷಣ ಅರ್ಹತೆಗಳನ್ನು ಹೊಂದಿರುವವರು ಕೂಡಾ ಈ ಸ್ಲಮ್‌ನ ನಿವಾಸಿಗಳಾಗಿದ್ದಾರೆ. ಸ್ಲಮ್ ನಿವಾಸಿಗಳ ಪ್ರಮುಖ ಉದ್ಯೋಗಗಳೆಂದರೆ ಕಟ್ಟಡ ನಿರ್ಮಾಣ, ಸಹಾಯಕರು, ಮುನ್ಸಿಪಲ್ ಕಾರ್ಮಿಕರು, ಆಟೋ ರಿಕ್ಷಾ ಚಾಲನೆ ಮತ್ತು ಲಾರಿ ಚಾಲನೆ, ಮನೆಗೆಲಸ, ದಿನಗೂಲಿ ಕೆಲಸ, ಇತ್ಯಾದಿ. ಕೊಳೆಗೇರಿ ನಿವಾಸಿಗಳ ಪೈಕಿ 43 ವಿಧವೆಯರು ಮತ್ತು 6 ವಿಶೇಷಚೇತನರು ಇದ್ದಾರೆ.

ಕಾರಿಡಾರ್-2 ರ ಈ ಹಿಂದಿನ ಉದ್ದೇಶಿತ ಜೋಡಣೆಯು ಕೊಳೆಗೇರಿ ಮೂಲಕ ಹಾದುಹೋಗುತ್ತಿತ್ತು, ಇದರಿಂದಾಗಿ ಸಂಪೂರ್ಣ ಕೊಳೆಗೇರಿಯನ್ನು ಶಾಶ್ವತವಾಗಿ ಸ್ಥಳಾಂತರಿಸಲಾಯಿತು. ಆದರೆ ನಂತರ ಯೋಜನೆಯಲ್ಲಿ, ನಿಲ್ದಾಣದ ಸ್ಥಳದ ಪರಿಷ್ಕರಣೆಯಾಯಿತು. ಸಮತಲ ತಿರುವು ಮತ್ತು ವರ್ಟಿಕಲ್ ಗ್ರೇಡಿಯಂಟ್ ಅನ್ನು ಸರಿಹೊಂದಿಸಲು, ಜೋಡಣೆಯನ್ನು ಪರಿಷ್ಕರಿಸಲಾಯಿತು. ಪರಿಷ್ಕೃತ ಜೋಡಣೆಯು ಕೊಳೆಗೇರಿಯ ಮೇಲಿನ ಪರಿಣಾಮಗಳನ್ನು ಕಡಿಮೆ ಮಾಡಲು ಕಾರಣವಾಯಿತು. ಪರಿಷ್ಕೃತ ಜೋಡಣೆಯ ಪ್ರಕಾರ, ಪಿಲ್ಲರ್ ಅಡಿಪಾಯಗಳು ರಸ್ತೆಯಲ್ಲಿರುತ್ತವೆ, ಇದರಿಂದಾಗಿ 12 ಖಾಸಗಿ ಕಟ್ಟಡಗಳು, 11 ಅತಿಕ್ರಮಣ ಕಟ್ಟಡಗಳು ಮತ್ತು 8 ಖಾಲಿ ಜಮೀನುಗಳು (ಒಟ್ಟು 32 ಆಸ್ತಿಗಳು) ಬಾಧಿತವಾಗಲಿವೆ.

ಕೆಎಸ್‌ಡಿಬಿ ಅಧಿಕಾರಿಗಳನ್ನು ಒಳಗೊಂಡು, ಮತ್ತಿಕೆರೆ ಸ್ಲಂ ಪ್ರತಿನಿಧಿಗಳೊಂದಿಗೆ ಕೆ-ರೈಡ್ ಪ್ರಾಥಮಿಕ ಸಮಾಲೋಚನೆ ನಡೆಸಿತು. ಕೊಳೆಗೇರಿ ನಿವಾಸಿಗಳು, ಅವರ ಮುಖಂಡರು ಮತ್ತು ಪ್ರತಿನಿಧಿಗಳು ಹಾಗೂ KSDB ಯೊಂದಿಗಿನ ಈ ಸಮಾಲೋಚನೆಗಳು ಸ್ಥಳಾಂತರದ ಸಮಯ, ಹಣಕಾಸು, ತಾತ್ಕಾಲಿಕ ಸ್ಥಳಾಂತರದ ಆಯ್ಕೆಗಳು, ಅಗತ್ಯವಿದ್ದಲ್ಲಿ ವಸತಿಗಾಗಿ ನಿವೇಶನಗಳು ಮತ್ತು ಸೇವೆಗಳು, ಉದ್ದೇಶಿತ ವಸತಿಗಾಗಿ ವಿನ್ಯಾಸಗಳು, ಜೀವನೋಪಾಯ ಮರುಸ್ಥಾಪನೆ,

ಹಕ್ಕುಪತ್ರಗಳು, ಪಾವತಿ ಇತ್ಯಾದಿಗಳಿಗೆ ಸಂಬಂಧಿಸಿದಂತೆ ವಿವರವಾದ ಯೋಜನೆಯ ಪ್ರಕ್ರಿಯೆ ಮುಂದುವರಿಯುತ್ತದೆ. ಯೋಜನೆಯಿಂದ ಬಾಧಿತ ಎಲ್ಲಾ ಕೊಳೆಗೇರಿ ನಿವಾಸಿಗಳನ್ನು ಸಮಾಲೋಚಿಸಲಾಗುವುದು. ಈ ಮಧ್ಯೆ, ಮತ್ತಿಕೆರೆ ಕೊಳೆಗೇರಿ ಪ್ರತಿನಿಧಿಗಳೊಂದಿಗೆ ಕೆ-ರೈಡ್, ಕೆಎಸ್‌ಡಿಬಿ ಸಮಾಲೋಚನೆ ನಡೆಸಿ, ಒಡಂಬಡಿಕೆ ಪತ್ರಕ್ಕೆ (ಕೆ-ರೈಡ್ ಮತ್ತು ಕೆಎಸ್‌ಡಿಬಿ ನಡುವೆ) ಸಹಿ ಹಾಕಲು ಒಪ್ಪಂದದ ರೂಪುರೇಶೆಗಳನ್ನು ರಚಿಸಲಿದೆ. ಈ ಎಂಒಯು, ಈ ಕೆಳಗಿನ ವಿವರಗಳನ್ನು ಹೊಂದಿರುತ್ತದೆ:

1. ಬಾಧಿತ ಕೊಳೆಗೇರಿ ನಿವಾಸಿಗಳಿಗೆ ಪಾವತಿಸಿದ ಭತ್ಯೆಗಳು (ಇವು ತಾತ್ಕಾಲಿಕ ಸ್ಥಳಾಂತರದ ಅಗತ್ಯವಿದ್ದರೆ ಬಾಡಿಗೆ ಭತ್ಯೆ, ಶಿಫ್ಟಿಂಗ್ ಭತ್ಯೆ, ಜೀವನಾಧಾರ ಭತ್ಯೆ, ಇತ್ಯಾದಿ.)

2. ಕೊಳಚೆ ಪ್ರದೇಶ ನಿವಾಸಿಗಳು, ಅವರ ಜೀವನೋಪಾಯದ ಮೇಲೆ ಪರಿಣಾಮ ಬೀರುವವರನ್ನು RAPPIC ಸಿದ್ಧಪಡಿಸುವ ಜೀವನೋಪಾಯ ಪುನರ್ ಸ್ಥಾಪನೆ ಯೋಜನೆಯಲ್ಲಿ ಸೇರಿಸಲಾಗುತ್ತದೆ.

3. ಸ್ಥಳಾಂತರ ಪ್ರಕ್ರಿಯೆಯಲ್ಲಿ ಕೊಳೆಗೇರಿ ನಿವಾಸಿಗಳ ಭಾಗವಹಿಸುವಿಕೆಗೆ ಬಳಸಬೇಕಾದ ರೀತಿ ಮತ್ತು ವಿಧಾನ.

4. ತಾತ್ಕಾಲಿಕ ಸ್ಥಳಾಂತರದ ಸಮಯದಲ್ಲಿ ಕೊಳೆಗೇರಿ ನಿವಾಸಿಗಳ ಅಸ್ತಿತ್ವದಲ್ಲಿರುವ ಮನೆಗಳು ಮತ್ತು ಅವರ ಸಾಮಾನುಗಳನ್ನು ಭದ್ರಪಡಿಸುವ ಪ್ರಕ್ರಿಯೆ ಮತ್ತು ಪ್ರೋಟೋಕಾಲ್‌ಗಳು.

5. ಯಾವುದೇ ಕೊಳೆಗೇರಿ ನಿವಾಸಿಗಳ ಯಾವುದೇ ಶಾಶ್ವತ ಸ್ಥಳಾಂತರದ ಅಗತ್ಯವಿದ್ದರೆ, ಅನುಸರಿಸುವ ಕಾರ್ಯವಿಧಾನಗಳನ್ನು ಒಡಂಬಡಿಕೆ ಪತ್ರದಲ್ಲಿ (ಫ್ರೇಮ್‌ವರ್ಕ್ ಒಪ್ಪಂದ) ವಿವರಿಸಲಾಗುತ್ತದೆ.

ಎ) ಪುನರ್ ವಸತಿ ಸ್ಥಳಗಳ ಗುರುತಿಸುವಿಕೆ,

ಬಿ) ವಿನ್ಯಾಸ ಆಯ್ಕೆಗಳು ಮತ್ತು ಅನುಮೋದನೆಗಳು,

ಸಿ) ಯೋಜನೆ ಮತ್ತು ಸರ್ಕಾರದ ಸಹಾಯಧನಗಳು/ಅನುದಾನಗಳಿಂದ ಹಣಕಾಸಿನ ಕೊಡುಗೆ ಮತ್ತು ಕೊಳೆಗೇರಿ ನಿವಾಸಿಗಳಿಂದ ಯಾವುದೇ ಕೊಡುಗೆಗಳು,

ಡಿ) ನಿರ್ಮಾಣ ವ್ಯವಸ್ಥೆಗಳು, ಇತ್ಯಾದಿ.

ಇ) ಪುನರ್ ವಸತಿ ಮತ್ತು ಪರಿಹಾರ ನೀತಿಯ ಇತರ ನಿಬಂಧನೆಗಳು.

6. ಬಾಧಿತ ಕೊಳೆಗೇರಿ ನಿವಾಸಿಗಳ ಪಟ್ಟಿಯನ್ನು ಕ್ರಮಬದ್ಧವಾಗಿ ಅವರ ಒಪ್ಪಿಗೆ ಅನುಸಾರ ಎಂಒಯುಗೆ ಸೇರಿಸಲಾಗುತ್ತದೆ.

ಕಾರಿಡಾರ್-2 ರ ಮತ್ತಿಕೆರೆ ಸ್ಲಮ್ ವಿಭಾಗದಲ್ಲಿ ನಿರ್ಮಾಣ ಚಟುವಟಿಕೆಗಳನ್ನು ಪ್ರಾರಂಭಿಸುವ ಮೊದಲು ಜ್ಞಾಪನಾ ಪತ್ರದ ಒಪ್ಪಂದವನ್ನು ಅನುಷ್ಠಾನಗೊಳಿಸಲಾಗುತ್ತದೆ.

### 1.7.4. ಬಾಧಿತ ಸಮುದಾಯದ ಆಸ್ತಿ ಸಂಪನ್ಮೂಲಗಳು

ಬಾಧಿತ ಸಾಮಾನ್ಯ ಆಸ್ತಿ ಸಂಪನ್ಮೂಲದ ಕಾರಿಡಾರ್‌ವಾರು ವಿವರಗಳನ್ನು ಕೆಳಗಿನ ಪಟ್ಟಿಯಲ್ಲಿ ವಿವರಿಸಲಾಗಿದೆ. ಬಿಎಸ್‌ಆರ್‌ಪಿ ಅಭಿವೃದ್ಧಿಯಿಂದ ಯಾವುದೇ ಪಾರಂಪರಿಕ ಕಟ್ಟಡಕ್ಕೆ ಧಕ್ಕೆಯಾಗಿಲ್ಲ. ಬಾಧಿತ ಸಿಪಿಆರ್‌ಗಳಲ್ಲಿ ಬಹುಪಾಲು (66.7%) ಧಾರ್ಮಿಕ ರಚನೆಗಳಾಗಿವೆ.

**ಪಟ್ಟಿ 6. ಕಾರಿಡಾರ್-ವಾರು ಬಾಧಿತ CPRಗಳು**

| ವಿವರ | CPRಗಳು | | | | | |
|---|---|---|---|---|---|---|
| | C1 | C2 | C3 | C4 | ಒಟ್ಟು | ಶೇಕಡಾವಾರು |
| ಶಾಲೆ ಮತ್ತು ಕಾಲೇಜು | 0 | 2 | 0 | 0 | 2 | 7.41 |
| ಸಮುದಾಯ ಶೌಚಾಲಯ | 0 | 0 | 0 | 0 | 0 | 0.00 |
| ಧಾರ್ಮಿಕ ಕೇಂದ್ರಗಳು (ದೇವಾಲಯ ಮತ್ತು ಸಣ್ಣ ದೇಗುಲಗಳು; ಧಾರ್ಮಿಕ ಕೇಂದ್ರಗಳ ಕಾಂಪೌಂಡ್ ಗೋಡೆ ಇತ್ಯಾದಿ.) | 1 | 11 | 4 | 2 | 18 | 66.67 |
| ಆಸ್ಪತ್ರೆ (ಕಡಿಮೆ ಬಾಧಿತ ಕಾಂಪೌಂಡ್ ಗೋಡೆ ಮತ್ತು ಒಂದು ಶೆಡ್) | 0 | 0 | 0 | 0 | 0 | 0.00 |
| ರೈಲ್ವೆ ಗೇಟ್, ನೀರಿನ ಟ್ಯಾಂಕ್, CW, ಶೆಡ್/ | 0 | 2 | 2 | 3 | 7 | 25.93 |

| | | | | | | |
|---|---|---|---|---|---|---|
| ಕಟ್ಟಡ | | | | | | |
| ಒಟ್ಟು | 1 | 15 | 6 | 5 | 27 | 100 |

ಗಮನಿಸಿ: (ಇನ್ನೂ ಸಮೀಕ್ಷೆ ಮಾಡಬೇಕಾದ 165 ರಚನೆಗಳ ವಾಸಿಸುವವರು / ನಿವಾಸಿಗಳನ್ನು ಈ ಮೌಲ್ಯಮಾಪನಕ್ಕೆ ಇನ್ನೂ ಪರಿಗಣಿಸಿಲ್ಲ)

ನ್ಯೂ ಫ್ಲಾರೆನ್ಸ್ ಸ್ಕೂಲ್ ಎರಡು ಅಂತಸ್ತಿನ ಕಟ್ಟಡವಾಗಿದ್ದು ಮೈದಾನವನ್ನು ಹೊಂದಿದೆ. ಶಾಲೆಯ ವಿದ್ಯಾರ್ಥಿಗಳ ಸಂಖ್ಯೆ 670. ಶಾಲೆಯ ಶಿಕ್ಷಕರ ಸಂಖ್ಯೆ 23, ಶಾಲೆಯಲ್ಲಿ ತಾಂತ್ರಿಕೇತರ ಸಿಬ್ಬಂದಿ ಸಂಖ್ಯೆ 8 ಮತ್ತು ಶಾಲೆಯಲ್ಲಿ ಸಹಾಯಕರ ಸಂಖ್ಯೆ 2. ಶಾಲೆ ಕಟ್ಟಡ ಸಂಪೂರ್ಣವಾಗಿ ಬಾಧಿತವಾಗುತ್ತದೆ. ಶಾಲೆಯ ವಿದ್ಯಾರ್ಥಿಗಳ ಮೇಲೆ ಯಾವುದೇ ಪರಿಣಾಮ ಬೀರುವುದಿಲ್ಲ. ಈಗಿರುವ ಶಾಲಾ ಕಟ್ಟಡದಲ್ಲಿ 20 ತರಗತಿ ಕೊಠಡಿಗಳಿವೆ. ಶಾಲೆಯ ಮಾಲೀಕರು ಖರೀದಿಸಿದ ಹೊಸ ಕಟ್ಟಡಕ್ಕೆ ಇದನ್ನು ಸ್ಥಳಾಂತರಿಸಲಾಗುವುದು. ಈ ಹೊಸ ಕಟ್ಟಡದಲ್ಲಿ 24 ತರಗತಿ ಕೊಠಡಿಗಳಿವೆ. ಹೊಸ ಕಟ್ಟಡವು ಶಾಲಾ ಕಟ್ಟಡದಿಂದ ಸುಮಾರು 160 ಮೀ ದೂರದಲ್ಲಿದೆ. ಪಾವತಿಸಿದ ಪರಿಹಾರದ ಜೊತೆಗೆ, ಸ್ಥಳಾಂತರ ನೆರವು ರೂ. 20 ಲಕ್ಷ ನೀಡಲಾಗುವುದು. ಹೀಗಾಗಿ ಯಾವುದೇ ವಿದ್ಯಾರ್ಥಿಗಳು ಅಥವಾ ಶಿಕ್ಷಕರಿಗೆ ತೊಂದರೆಯಾಗುವುದಿಲ್ಲ.

ಡಾ. ಪಾಲ್ ಇಂಟರ್‌ನ್ಯಾಶನಲ್ ಸ್ಕೂಲ್ ಏಳು ಅಂತಸ್ತಿನ ಕಟ್ಟಡವಾಗಿದೆ. ಶಾಲೆಯಲ್ಲಿನ ವಿದ್ಯಾರ್ಥಿಗಳ ಸಂಖ್ಯೆ 1411. ಶಾಲೆಯ ಶಿಕ್ಷಕರ ಸಂಖ್ಯೆ 80, ಶಾಲೆಯಲ್ಲಿ ತಾಂತ್ರಿಕೇತರ ಸಿಬ್ಬಂದಿ ಸಂಖ್ಯೆ 40 ಮತ್ತು ಶಾಲೆಯ ಸಹಾಯಕರ ಸಂಖ್ಯೆ 12. ಶಾಲೆಯ ಕ್ರಿಕೆಟ್ ಟರ್ಫ್ ಮೈದಾನ, ಈಜುಕೊಳ, ಬಾಸ್ಕೆಟ್ ಬಾಲ್, ಫುಟ್ಬಾಲ್ ಮೈದಾನ ಇತ್ಯಾದಿಗಳು ಸೇರಿ ಸುಮಾರು ಶೇ. 30ರಷ್ಟು ಜಾಗ ಬಾಧಿತವಾಗುತ್ತದೆ. ಇದು ಕ್ರೀಡೆಗಳಿಗೆ ಅವಕಾಶಗಳನ್ನು ಕಡಿಮೆ ಮಾಡುತ್ತದೆ ಮತ್ತು ಶಾಲಾ ಪ್ರವೇಶದ ಮೇಲೂ ಪರಿಣಾಮ ಬೀರುತ್ತದೆ. ಮಾಲೀಕರು ಆವರಣದಲ್ಲಿ ಕ್ರೀಡಾ ಮೂಲಸೌಕರ್ಯವನ್ನು ಮರುನಿರ್ಮಾಣ ಮಾಡಲು ಅಥವಾ ಕ್ರೀಡಾ ಸೌಲಭ್ಯವನ್ನು ಮರುಸ್ಥಾಪಿಸಲು ಮಾರುಕಟ್ಟೆ ದರದ ಪ್ರಕಾರ ಸಮಾನ ಪರಿಹಾರವನ್ನು ಕೋರುತ್ತಿದ್ದಾರೆ. ಹೀಗಾಗಿ ಯಾವುದೇ ವಿದ್ಯಾರ್ಥಿಗಳು ಅಥವಾ ಶಿಕ್ಷಕರಿಗೆ ತೊಂದರೆಯಾಗುವುದಿಲ್ಲ.

ಇತರ CPR ಗಳಲ್ಲಿ, ಒಂದು ಮಿಜ್ಪಾ ಚರ್ಚ್ ಆಗಿದೆ, ಅಲ್ಲಿ ಕಾಂಪೌಂಡ್ ಗೋಡೆಯು ಮಾತ್ರ ಬಾಧಿತವಾಗುತ್ತದೆ. ಚರ್ಚ್ ಮಾಲೀಕರ ಪ್ರಕಾರ, ಪಾವತಿಸಿದ ಪರಿಹಾರವು ತೃಪ್ತಿಕರವಾಗಿದೆ. ಇದಲ್ಲದೆ ಮುನೇಶ್ವರ, ಶ್ರೀ ಲಕ್ಷ್ಮೀ ದೇವಿ ಮತ್ತು ಗಣಪತಿಯ ದೇವಾಲಯಗಳ ರಚನೆಗಳಿದ್ದು,

ಇಲ್ಲಿ ಕಾಂಪೌಂಡ್ ಗೋಡೆ ಮಾತ್ರ ಪರಿಣಾಮ ಬೀರುತ್ತದೆ. ಸಂದಾಯವಾದ ಪರಿಹಾರ ತೃಪ್ತಿಕರವಾಗಿದೆ ಎಂದು ದೇವಸ್ಥಾನದ ಮಾಲೀಕರು ತಿಳಿಸಿದ್ದಾರೆ. ಕೆಡವುವ ಸಮಯದಲ್ಲಿ ವಸ್ತುಗಳನ್ನು ಉಳಿಸಬೇಕೆಂದು ಅವರು ಅಪೇಕ್ಷಿಸಿದ್ದರು. ಇನ್ನು ಮೂರನೆಯ ರಚನೆ ಶ್ರೀ ಸುಬ್ರಹ್ಮಣ್ಯ ಚಿಕ್ಕ ಕಟ್ಟೆ ದೇವಸ್ಥಾನ. ಈ ದೇವಾಲಯವು ಬಿಡಿಎ ಜಮೀನಿನಲ್ಲಿದೆ (ಸರ್ಕಾರಿ ಭೂಮಿ), ಇಲ್ಲಿ ಸ್ಥಳೀಯ ಜನರು ಆರಾಧನೆ ಮತ್ತು ಪೂಜೆಯನ್ನು ಮಾಡುತ್ತಾರೆ. ಈ ಚಿಕ್ಕ ದೇವಾಲಯವನ್ನು ಸಮೀಪದ ಬಿಡಿಎ ಜಮೀನಿಗೆ ಸ್ಥಳಾಂತರಿಸಲಾಗುವುದು.

## 1.8 ಯೋಜನೆಯ ಬಾಧಿತ ಕುಟುಂಬಗಳು

### 1.8.1. ಪೂರ್ವಭಾವಿ ಜನಗಣತಿ ಮತ್ತು ಸಾಮಾಜಿಕ ಆರ್ಥಿಕ ಸಮೀಕ್ಷೆ

ಯೋಜನೆಯ ಬಾಧಿತ ರಚನೆಗಳು, ಬಾಧಿತ ಮನೆಗಳು (PAHs) ಮತ್ತು ಬಾಧಿತ ವ್ಯಕ್ತಿಗಳನ್ನು (PAPs) ಗುರುತಿಸಲು ಕೆ-ರೈಡ್ ಇಂಜಿನಿಯರಿಂಗ್ ತಂಡವು ಒದಗಿಸಿದ ಪ್ರಾಥಮಿಕ ಜೋಡಣೆ ರೇಖಾಚಿತ್ರಗಳು ಮತ್ತು ಮಾಹಿತಿಯು ಆಧಾರವಾಗಿದೆ. ಅಧ್ಯಯನವು ಬಾಧಿತ ಕುಟುಂಬಗಳನ್ನು ಒಳಗೊಂಡಿದೆ, ಇದರಲ್ಲಿ ಆಸ್ತಿಯ ಮೇಲೆ ತಮ್ಮ ಹೆಸರು (ಟೈಟಲ್ ಹೋಲ್ಡರ್ಸ್) ಇರುವವರು ಹಾಗೂ ಇಲ್ಲದವರೂ ಸೇರಿದ್ದಾರೆ. ಆಸ್ತಿ ತಮ್ಮ ಹೆಸರಿನಲ್ಲಿ ಇಲ್ಲದವರ ಗುಂಪಿನಲ್ಲಿ ಬಾಡಿಗೆದಾರರು (ವಸತಿ ಮತ್ತು/ಅಥವಾ ವಾಣಿಜ್ಯ), ಅನಧಿಕೃತ ನಿವಾಸಿಗಳು (ವಸತಿ), ಕೊಳೆಗೇರಿ ನಿವಾಸಿಗಳು (ವಸತಿ) ಮತ್ತು ವಾಣಿಜ್ಯ ಅನಧಿಕೃತ ನಿವಾಸಿಗಳು (ಕಿಯೋಸ್ಕ್‌ಗಳು) ಇದ್ದಾರೆ. ವಿನ್ಯಾಸಗಳನ್ನು ಅಂತಿಮಗೊಳಿಸಿದ ನಂತರ ಸಮೀಕ್ಷೆಗಳನ್ನು ನವೀಕರಿಸಲಾಗುತ್ತದೆ ಮತ್ತು ಕಾರಿಡಾರ್-ವಾರು RAP ಗಳನ್ನು ಸಿದ್ಧಪಡಿಸಲಾಗುತ್ತದೆ.

PAH ಗಳು ಮತ್ತು PAP ಗಳ ಗುರುತಿಸುವಿಕೆಯನ್ನು ಹಾಗೂ ಬಾಧಿತ ಮನೆಗಳ ವಿವರವನ್ನು ಪೂರ್ಣಗೊಳಿಸಲು, K-RIDE ಮೇ 2023 ರಲ್ಲಿ ಪ್ರಾಥಮಿಕ ಜನಗಣತಿ (ಎಣಿಕೆ) ಮತ್ತು ಸಾಮಾಜಿಕ ಆರ್ಥಿಕ ಸಮೀಕ್ಷೆಯನ್ನು ನಡೆಸಿತು. ಪ್ರಸ್ತಾವಿತ ಉಪನಗರ ರೈಲು ಯೋಜನೆಯ ಅಭಿವೃದ್ಧಿಯಿಂದಾಗಿ ನಿವಾಸ, ವಾಣಿಜ್ಯ ಅಥವಾ ಇತರ ರಚನೆಗಳ ನಷ್ಟದಿಂದಾಗಿ ಅಂದಾಜು 1010 PAHಗಳು ಬಾಧಿತವಾಗುತ್ತವೆ ಎಂದು ಪ್ರಾಥಮಿಕ ಜನಗಣತಿಯ ಫಲಿತಾಂಶಗಳು ಬಹಿರಂಗಪಡಿಸಿದವು. ಈ ಒಟ್ಟು ಮೊತ್ತವು ಕಾರಿಡಾರ್ 1,2, 3 ಮತ್ತು 4 ರಲ್ಲಿ ಕಂಡುಬರುವ 165 ವಸತಿ ರಚನೆಗಳಲ್ಲಿ ವಾಸಿಸುವ ಕನಿಷ್ಠ 165 ಕುಟುಂಬಗಳನ್ನು ಒಳಗೊಂಡಿದೆ (ಮೇಲಿನ

ಪಟ್ಟಿಗಳನ್ನು ನೋಡಿ). (PAP ಗಳ ಕಾರಣದಿಂದಾಗಿ) ಸಮೀಕ್ಷೆಗೆ ಕೆಲವರ ಅಸಹಕಾರದಿಂದಾಗಿ ಎಸ್ಐಎ ತಂಡವು ದೂರದಿಂದ (ಕಣ್ಣಿನ ಮೌಲ್ಯಮಾಪನ) ಎಣಿಕೆಯನ್ನು ಮಾಡಿದೆ. ತರುವಾಯ PAH ನ ಗುಣಲಕ್ಷಣದ ಬಗ್ಗೆ ಮಾಹಿತಿಯನ್ನು ಸಂಗ್ರಹಿಸಲು ಸಾಮಾಜಿಕ-ಆರ್ಥಿಕ ಸಮೀಕ್ಷೆಯನ್ನು ಕಾರ್ಯಗತಗೊಳಿಸಲಾಯಿತು. ಜನಗಣತಿಯ ಸಮಯದಲ್ಲಿ ಎಣಿಸಲಾದ ಒಟ್ಟು 845 PAH ಗಳಲ್ಲಿ (ಒಟ್ಟು 1010ರಲ್ಲಿ 165 PAH ಗಳು ಸಮೀಕ್ಷೆಯಲ್ಲಿ ಭಾಗವಹಿಸಲು ನಿರಾಕರಿಸಿದವು), ಸಮೀಕ್ಷೆಯಲ್ಲಿ ಸಾಮಾಜಿಕ-ಆರ್ಥಿಕ ನಿಯತಾಂಕಗಳಿಗೆ ಸಂಬಂಧಿಸಿದ ಕೆಲವು ಪ್ರಶ್ನೆಗಳಿಗೆ ಸುಮಾರು 250 ರಿಂದ 395 ಕುಟುಂಬಗಳು ಪ್ರತಿಕ್ರಿಯಿಸಲಿಲ್ಲ, ಅದು ಪ್ರಸ್ತುತವಲ್ಲ ಎಂದು ಅವರು ಭಾವಿಸಿದರು. ಪುನರಾವರ್ತಿತ ಪ್ರಯತ್ನಗಳ ನಂತರವೂ ಕೆಲವು ಜನರು ಸಮೀಕ್ಷೆಯೊಂದಿಗೆ ಸಹಕರಿಸಲಿಲ್ಲ ಮತ್ತು ಯೋಜನೆಯ ಅನುಷ್ಠಾನದ ಸಮಯದಲ್ಲಿ ಶೇ. 100ರಷ್ಟು ಜನಗಣತಿ ಮತ್ತು ಸಾಮಾಜಿಕ-ಆರ್ಥಿಕ ಸಮೀಕ್ಷೆಗಳನ್ನು ನಡೆಸಲಾಗುವುದು ಮತ್ತು ದತ್ತಾಂಶವನ್ನು ನವೀಕರಿಸಲಾಗುವುದು. ಪ್ರತಿ ಕಾರಿಡಾರ್‌ನ ಸಾಮಾಜಿಕ ಆರ್ಥಿಕ ಸಮೀಕ್ಷೆಯ ಸ್ಥಿತಿಯ ಸಾರಾಂಶವನ್ನು ಈ ಕೆಳಗೆ ನೀಡಲಾಗಿದೆ:

-ಕಾರಿಡಾರ್ 1, 2, 3 ಮತ್ತು 4: ಈಗಾಗಲೆ ನಡೆಸಲಾಗಿರುವ ಪ್ರಾಥಮಿಕ ಸಮೀಕ್ಷೆಗಳನ್ನು, ವಿನ್ಯಾಸದ ಅಂತಿಮಗೊಳಿಸುವಿಕೆ ಮತ್ತು ಪೀಡಿತ ಕುಟುಂಬಗಳೊಂದಿಗಿನ ಸಮಾಲೋಚನೆಯ ನಂತರ ನವೀಕರಿಸಲಾಗುತ್ತದೆ; ಮತ್ತು ಪ್ರತಿಯೊಂದು ಕಾರಿಡಾರ್‌ಗಳಿಗೆ RAP ಗಳನ್ನು ಸಿದ್ಧಪಡಿಸಲಾಗುವುದು.

ಸಾಮಾಜಿಕ-ಆರ್ಥಿಕ ಸಮೀಕ್ಷೆಯ ಮೂಲಕ ಸಂಗ್ರಹಿಸಿದ ದತ್ತಾಂಶವು ಒಟ್ಟು ಯೋಜನೆಯ ಅರ್ಧದಷ್ಟು ಪೀಡಿತ ಕುಟುಂಬಗಳ ಜನಸಂಖ್ಯಾ ಮತ್ತು ಸಾಮಾಜಿಕ-ಆರ್ಥಿಕ ವಿವರವನ್ನು ಒಳಗೊಂಡಿದೆ. ಈ ವರದಿಯ ಅಧ್ಯಾಯ 5 ರಲ್ಲಿ ದತ್ತಾಂಶವನ್ನು ಕಲೆಹಾಕಿ ಪ್ರಸ್ತುತಪಡಿಸಲಾಗಿದೆ.

ಸಮೀಕ್ಷೆಗಳನ್ನು ನಡೆಸುವ ಮೊದಲು ಸಮಾಲೋಚನೆಗಳು: PAH ಗಳ ಅಸಹಕಾರದಿಂದಾಗಿ ಸಮೀಕ್ಷೆಗಳನ್ನು ನಡೆಸಲು ಸಾಧ್ಯವಾಗದ ಪ್ರದೇಶವಾದ್ದರಿಂದ, RAP ಗಳನ್ನು ಸಿದ್ಧಪಡಿಸಲು, ಸಮೀಕ್ಷೆಗಳನ್ನು ನಡೆಸಲು ಈ ಕೆಳಗಿನ ವಿಧಾನವನ್ನು ಬಳಸಲಾಗುತ್ತದೆ:

- K-RIDE ನ SMU ಸಮೀಕ್ಷೆಗಳಿಗೆ ಪ್ರತಿರೋಧವಿರುವ ಪ್ರದೇಶಗಳಲ್ಲಿ ಪ್ರವೇಶವನ್ನು ಮಾಡುವುದು ಮತ್ತು PAHಗಳೊಂದಿಗೆ ಬಾಂಧವ್ಯವನ್ನು ಅಭಿವೃದ್ಧಿಪಡಿಸುವುದು. K-RIDE

ನ ಹಿರಿಯ ಆಡಳಿತವು ಸ್ಥಳೀಯ ನಾಯಕರನ್ನು ತೊಡಗಿಸಿಕೊಳ್ಳುವ ಮೂಲಕ ಇದಕ್ಕೆ ಮುಂದಾಳತ್ವ ವಹಿಸುತ್ತದೆ.

- RAPPIC ನ ನೆರವಿನೊಂದಿಗೆ K-RIDE ನ SMU PAHಗಳೊಂದಿಗೆ ಹಲವಾರು ಪಾಲುದಾರರ ತೊಡಗಿಸಿಕೊಳ್ಳುವಿಕೆ ಚಟುವಟಿಕೆಗಳನ್ನು ನಡೆಸುವುದು ಮತ್ತು ಅವರೊಂದಿಗೆ ಬಾಂಧವ್ಯವನ್ನು ನಿರ್ಮಿಸುವುದು.
- ಕೆ-ರೈಡ್‌ನ ವೆಬ್‌ಸೈಟ್ ಮತ್ತು ಸ್ಥಳೀಯ ಕಚೇರಿಗಳಲ್ಲಿನ ಅಂತರವನ್ನು ಪರಿಹರಿಸಲು ಅರ್ಹತೆಯ ಮಾನದಂಡ ಮತ್ತು ನಿಬಂಧನೆಗಳ ಬಹಿರಂಗಪಡಿಸುವಿಕೆ

12 There are two categories of residential not-title holders: The dwellers of declared slum areas are referred as slum dwellers all others including the dwellers of the non-notified slum are being considered as squatters. 13 Small commercial structures (less than 3 sq.m. plinth area) whose owners do not have legal rights to occupy the trading location or land parcel. 14 Compensation has been paid to the Titleholders impacted under Corridor 2

- ಅಂತರವನ್ನು ಪರಿಹರಿಸಲು ಅರ್ಹತೆಯ ಮಾನದಂಡ ಮತ್ತು ನಿಬಂಧನೆಗಳ ಪ್ರತಿಯನ್ನು ಎಲ್ಲಾ PAH ಗಳೊಂದಿಗೆ ಸ್ಥಳೀಯ ಭಾಷೆಯಲ್ಲಿ ಹಂಚಿಕೊಳ್ಳಲಾಗುತ್ತದೆ.
- ಕುಂದುಕೊರತೆ ಪರಿಹಾರ ಕಾರ್ಯವಿಧಾನವನ್ನು ಎಲ್ಲಾ PAH ಗಳಿಗೆ ವಿವರವಾಗಿ ತಿಳಿಸಲಾಗುವುದು
- ಯಾವುದೇ ಜೀವನೋಪಾಯದ ಮರುಸ್ಥಾಪನೆ, ಕೌಶಲ್ಯ ಅಭಿವೃದ್ಧಿ ಮತ್ತು ಇತರ ಸಹಾಯ ಸೇರಿದಂತೆ ಪರಿಹಾರ ಮತ್ತು R&R ನೆರವು ವಿತರಣೆಗಾಗಿ ಸಮೀಕ್ಷೆಯನ್ನು ನಡೆಸುವುದು ಮತ್ತು RAP ಅನ್ನು ಸಿದ್ದಪಡಿಸುವುದು ಅಗತ್ಯವೆಂದು ಎಲ್ಲಾ PAHS ಗಳಿಗೆ ತಿಳಿಸಲಾಗುವುದು.
- ಸಮೀಕ್ಷೆಯ ವೇಳಾಪಟ್ಟಿಯನ್ನು PAHಗಳಿಗೆ ಮುಂಚಿತವಾಗಿ ತಿಳಿಸಲಾಗುವುದು.
- ಕೆಲವು ಕಾರಣಗಳಿಗಾಗಿ ಕೆಲವು PAH ಗಳು ಸಮೀಕ್ಷೆಯಲ್ಲಿ ಭಾಗವಹಿಸಲು ಸಾಧ್ಯವಾಗದಿದ್ದರೆ, ಕಾಣೆಯಾದ/ಗೈರುಹಾಜರಾದ PAH ಗಳಿಗೆ ಮತ್ತೊಮ್ಮೆ ಸಮೀಕ್ಷೆಯನ್ನು ನಡೆಸುವ ಮೂಲಕ ಅವರಿಗೆ ಮತ್ತೊಂದು ಅವಕಾಶವನ್ನು ನೀಡಲಾಗುತ್ತದೆ.
- PAHಗಳೊಂದಿಗೆ ಸಮಾಲೋಚಿಸಿ RAP ಅನ್ನು ತಯಾರಿಸಲಾಗುವುದು.
- SMU ಮತ್ತು RAPPIC ತಂಡವು ಪ್ರತಿ PAH ಗೆ ಮೈಕ್ರೋ ಯೋಜನೆಗಳನ್ನು ಸಿದ್ದಪಡಿಸುವಲ್ಲಿ PAH ಗಳು ಸಂಪೂರ್ಣವಾಗಿ ತೊಡಗಿಸಿಕೊಂಡಿರುತ್ತಾರೆ

### 1.8.2. ಬಾಧಿತ ಕುಟುಂಬಗಳು

ಕೆಳಗಿನ ಪಟ್ಟಿ 8 ರಲ್ಲಿ ಪ್ರಸ್ತುತಪಡಿಸಿದಂತೆ, ಅಂದಾಜು 1010 PAH ಗಳು ಇವೆ, ಇದರಲ್ಲಿ 617 ಭೂಮಿ/ ಬಾಧಿತ ಕುಟುಂಬಗಳು, 228 ಬಾಡಿಗೆದಾರರು ಮತ್ತು 165 (ಅಧ್ಯಾಯ 4 ನೋಡಿ) ಪ್ರತಿಕ್ರಿಯಿಸದ ಕುಟುಂಬಗಳು ಸೇರಿವೆ. ಇವರಲ್ಲದೆ ಅಂಗಡಿಗಳ 64 ನೌಕರರು ಸ್ಥಳಾಂತರಗೊಳ್ಳಲಿದ್ದಾರೆ. ಬಾಧಿತ ಮನೆಗಳ ಸಂಖ್ಯೆ 217. ಕಾರಿಡಾರ್‌ವಾರು ವಿವರಗಳನ್ನು SIA ವರದಿಯ ಅಧ್ಯಾಯ 4 ರಲ್ಲಿ ಮತ್ತು ಕೆಳಗಿನ ಪಟ್ಟಿ 8 ರಲ್ಲಿ ಪ್ರಸ್ತುತಪಡಿಸಲಾಗಿದೆ.

BSRP ಯ ಕಾರಣದಿಂದಾಗಿ ಒಟ್ಟಾರೆ ಯೋಜನೆಯ ಪರಿಣಾಮಗಳನ್ನು ಪಟ್ಟಿ 8 ಒದಗಿಸುತ್ತದೆ; ಖಾಸಗಿ ಭೂಮಿ ಅಗತ್ಯತೆ, ಬಾಧಿತವಾದ ರಚನೆಗಳು, ಯೋಜನಾ ಬಾಧಿತ ಕುಟುಂಬಗಳು, ದುರ್ಬಲ ಕುಟುಂಬಗಳು ಇತ್ಯಾದಿ ವಿವರಗಳನ್ನು ಸಮರ್ಪಕವಾಗಿ ನೀಡುವುದು.

**ಪಟ್ಟಿ 7. ಕಾರಿಡಾರ್ ವಾಡು ಬಾಧಿತರ ವಿವರ**

| ಕ್ರಮ ಸಂಖ್ಯೆ | ಪರಿಣಾಮ/ಬಾಧಿತ | ಕಾರಿಡಾರ್-1 | ಕಾರಿಡಾರ್ -2 | ಕಾರಿಡಾರ್ -3 | ಕಾರಿಡಾರ್ -4 | ಒಟ್ಟು |
|---|---|---|---|---|---|---|
| 1 | ಜಮೀನು ಅಗತ್ಯತೆಗಳು | | | | | |
| a | ಖಾಸಗಿ ಜಮೀನು (ಚದರ ಮೀಟರ್ ಗಳಲ್ಲಿ) | 9.06 (ಡಿಪೊ ಸೇರಿ) | 23.12 (ಡಿಪೊ ಸೇರಿ) | 8.39 | 16.31 | **56.88** |
| **2** | **ಒಟ್ಟು ಬಾಧಿತ ಕಟ್ಟಡ/ ನಿರ್ಮಾಣಗಳು (ಸಂಖ್ಯೆ)** | | | | | |
| a | ಬಾಧಿತ ರಚನೆಗಳು/ಕಟ್ಟಡ ಗಳು - ವಿವರಗಳನ್ನು ಸ್ವೀಕರಿಸಲಾಗಿದೆ/ ಒದಗಿಸಲಾಗಿದೆ (ಸ್ಲಮ್ ನಿವಾಸಿಗಳು ಸೇರಿದಂತೆ | 51 | 274 | 66 | 66 | **457** |
| b | ಬಾಧಿತ ಸಿಪಿ ಆರ್ | 1 | 15 | 6 | 5 | **27** |
| c | ವಿವರ ನೀಡದ/ | 33 | 0 | 63 | 69 | **165** |

| | | | | | | |
|---|---|---|---|---|---|---|
| | ಸ್ವೀಕರಿಸಲಾಗದ ಬಾಧಿತ ರಚನೆ/ ಕಟ್ಟಡಗಳ ಸಂಖ್ಯೆ | | | | | |
| | **ಒಟ್ಟು** | **85** | **289** | **135** | **140** | **649** |
| **3** | **ಒಟ್ಟು ಬಾಧಿತ ಕಟ್ಟಡ/ ನಿರ್ಮಾಣಗಳು (ಸಂಖ್ಯೆ)** | | | | | |
| a | ಬಾಧಿತ PAH - ಮಾಲೀಕರು | 94 | 267 | 106 | 150 | **617** |
| b | ಬಾಧಿತ PAH - ಬಾಡಿಗೆದಾರರು | 11 | 156 | 31 | 30 | **228** |
| c | ವಿವರ ನೀಡದ/ ಸ್ವೀಕರಿಸಲಾಗದ ಬಾಧಿತ ರಚನೆ/ ಕಟ್ಟಡಗಳ ಸಂಖ್ಯೆ* | 33 | 0 | 63 | 69 | **165** |
| | **ಒಟ್ಟು** (no.) | **138** | **423** | **200** | **249** | **1010** |
| 4 | ಬಾಧಿತ ಕಾರ್ಮಿಕರ ಸಂಖ್ಯೆ (no.) | 9 | 11 | 27 | 17 | **64** |
| 5 | ತಮ್ಮ ಹೆಸರಿನಲ್ಲಿ ಆಸ್ತಿ ಇರುವ ಮಾಲೀಕರ ಬಾಧಿತ ಕಟ್ಟಡಗಳು (no.) | 44 | 196 | 65 | 66 | **371** |
| 6 | ತಮ್ಮ ಹೆಸರಿನಲ್ಲಿ ಆಸ್ತಿ ಇಲ್ಲದ ಬಾಧಿತ ನಿವಾಸಿಗಳು | 34 | 44 | 43 | 26 | **147** |
| 7 | ಬಾಧಿತ ವಸತಿ ಕಟ್ಟಡಗಳು (no.) | 46 | 177 | 48 | 61 | **332** |
| 8 | ಬಾಧಿತ ವಾಣಿಜ್ಯ ಕಟ್ಟಡಗಳು (no.) | 4 | 54 | 14 | 5 | **77** |
| 9 | ಬಾಧಿತ ವಸತಿಯನ್ನೂ ಹೊಂದಿರುವ ವಾಣಿಜ್ಯ ಕಟ್ಟಡಗಳು (no.) | 1 | 43 | 4 | 0 | **48** |
| 10 | ಬಾಧಿತ ದುರ್ಬಲ PAHs (no.) | 47 | 116 | 46 | 8 | **217** |

*ಸಮೀಕ್ಷೆಯ ಸಮಯದಲ್ಲಿ ಮನೆ ಮುಚ್ಚಲಾಗಿದೆ, ಮಾಲೀಕರು ವಿವರಗಳನ್ನು ನೀಡಲು ಸಿದ್ಧರಿಲ್ಲ, ಮಾಲೀಕರು ಲಭ್ಯವಿಲ್ಲ ಮುಂತಾದ ಕಾರಣಗಳಿಂದಾಗಿ ವಿವರಗಳು ಲಭ್ಯವಿಲ್ಲ.

ಗಮನಿಸಿ*: ಮೇಲಿನ ದತ್ತಾಂಶವು ಪ್ರಾಥಮಿಕವಾಗಿದೆ ಮತ್ತು ವಿನ್ಯಾಸಗಳನ್ನು ಅಂತಿಮಗೊಳಿಸುವ ಮತ್ತು ವಿವರವಾದ ವಿನ್ಯಾಸದ ಗುರುತುಗಳ ಆಧಾರದ ಮೇಲೆ ಜನಗಣತಿ ಮತ್ತು ಸಾಮಾಜಿಕ-ಆರ್ಥಿಕ ಸಮೀಕ್ಷೆಗಳನ್ನು ನವೀಕರಿಸಲಾಗುತ್ತದೆ.

### 1.8.3. ಬಾಧಿತ ದುರ್ಬಲ ಕುಟುಂಬಗಳು

ಸಮೀಕ್ಷೆ ಮಾಡಲಾದ PAH ಗಳ ನಡುವಿನ ದುರ್ಬಲತೆಗೆ ಸಂಬಂಧಿಸಿದಂತೆ (165 ಇನ್ನೂ ಸಮೀಕ್ಷೆ ಮಾಡಬೇಕಾದ HH (ಕುಟುಂಬ) ಗಳನ್ನು ಹೊರತುಪಡಿಸಿ), ಒಟ್ಟು 845 ರಲ್ಲಿ 217 PAH ಗಳು ದುರ್ಬಲ ವರ್ಗಕ್ಕೆ ಸೇರಿವೆ (ದಯವಿಟ್ಟು ಪಟ್ಟಿ 9 ಅನ್ನು ನೋಡಿ). 59 PAH ಗಳಲ್ಲಿ ಮಹಿಳಾ ನೇತೃತ್ವದ ಕುಟುಂಬಗಳಿವೆ, 68 PAH ಗಳು ಬಡತನ ರೇಖೆಗಿಂತ ಕೆಳಗಿವೆ, 21 PAH ಗಳಲ್ಲಿ ದಿವ್ಯಾಂಗರು ಮತ್ತು ವೃದ್ಧರು ಇದ್ದಾರೆ. ಇದಲ್ಲದೆ, 54 ಮತ್ತು 15 PAH ಗಳು ಅನುಕ್ರಮವಾಗಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸೇರಿವೆ. ಪರಿಶಿಷ್ಟ ಜಾತಿಗಳು ಮತ್ತು ಪರಿಶಿಷ್ಟ ಪಂಗಡಗಳನ್ನು ದುರ್ಬಲ ಗುಂಪು ಎಂದು ಪರಿಗಣಿಸಲಾಗುತ್ತದೆ ಏಕೆಂದರೆ ಪರಿಶಿಷ್ಟ ಜಾತಿಗಳು (ಎಸ್‌ಸಿಗಳು) ಮತ್ತು ಪರಿಶಿಷ್ಟ ಪಂಗಡಗಳು (ಎಸ್‌ಟಿಗಳು) ಭಾರತದ ಸಂವಿಧಾನದ ನಿಬಂಧನೆಗಳ ಅಡಿಯಲ್ಲಿ ಬರುತ್ತವೆ ಮತ್ತು ಈ ಜನರು ಸಾಂಪ್ರದಾಯಿಕವಾಗಿ ದುರ್ಬಲರಾಗಿರುವುದರಿಂದ ಸರ್ಕಾರಿ ಸೌಲಭ್ಯಗಳಲ್ಲಿ ಆದ್ಯತೆಯ ಸೌಲಭ್ಯವನ್ನು ಪಡೆಯುತ್ತಾರೆ.

**ಪಟ್ಟಿ 8. ಕಾರಿಡಾರ್ ವಾರು ಬಾಧಿತ ದುರ್ಬಲ ಕುಟುಂಬಗಳು**

| ಬಾಧಿತ ದುರ್ಬಲತೆ | ಕುಟುಂಬಗಳ ಸಂಖ್ಯೆ | | | | | |
|---|---|---|---|---|---|---|
| | C1 | C2 | C3 | C4 | ಒಟ್ಟು HH | ಶೇಕಡಾವಾರು |
| ಮಹಿಳೆ ನೇತೃತ್ವದ ಕುಟುಂಬಗಳು | 0 | 54 | 3 | 2 | 59 | 27.19% |
| ಬಡತನ ರೇಖೆಗಿಂತ ಕೆಳಗಿನವು | 7 | 47 | 13 | 1 | 68 | 31.34% |
| ದಿವ್ಯಾಂಗರು ಮತ್ತು ವೃದ್ಧಾಪ್ಯದ ಕುಟುಂಬಗಳು | 7 | 12 | 1 | 1 | 21 | 9.68% |
| ಪರಿಶಿಷ್ಟ ಜಾತಿ | 23 | 70 | 29 | 2 | 54 | 24.88% |
| ಪರಿಶಿಷ್ಟ ಪಂಗಡ | 10 | 3 | 0 | 2 | 15 | 6.91% |
| ಒಟ್ಟು | 47 | 116 | 46 | 8 | 217 | 100.00% |

ಗಮನಿಸಿ: (ಈ ಮೌಲ್ಯಮಾಪನಕ್ಕಾಗಿ ಇನ್ನೂ ಸಮೀಕ್ಷೆ ಮಾಡಬೇಕಾದ 165 ರಚನೆಗಳಲ್ಲಿ ವಾಸಿಸುವವರು/ ನಿವಾಸಿಗಳನ್ನು ಇನ್ನೂ ಪರಿಗಣಿಸಲಾಗಿಲ್ಲ).

## 1.1. ಯೋಜನೆಯ ಪ್ರಮುಖ ಸಾಮಾಜಿಕ ಅಪಾಯಗಳು ಮತ್ತು ಅಪಾಯ ಉಪಶಮನ ಅಳವಡಿಕೆ ಕ್ರಮಗಳು

ಪ್ರಮುಖ ಸಾಮಾಜಿಕ ಅಪಾಯಗಳನ್ನು ಗುರುತಿಸಲಾಗಿದ್ದು, ಈ ಯೋಜನೆಯಲ್ಲಿ ಅಳವಡಿಸಿಕೊಂಡಿರುವ ಅಪಾಯ ತಗ್ಗಿಸುವಿಕೆ ಕ್ರಮಗಳನ್ನು ಕೆಳಗಿನ ಪಟ್ಟಿಯಲ್ಲಿ ವಿವರಿಸಲಾಗಿದೆ.

## ಪಟ್ಟಿ 9. ಸಾಮಾಜಿಕ ಅಪಾಯಗಳ ತಗ್ಗಿಸುವಿಕೆಗಾಗಿ ಯೋಜನೆಯಲ್ಲಿ ಅಳವಡಿಸಿಕೊಳ್ಳಲಾದ ಕ್ರಮಗಳು

| ಸಾಮಾಜಿಕ ಅಪಾಯಗಳು | ಅಳವಡಿಸಿಕೊಳ್ಳಲಾದ ಉಪಶಮನ ಕ್ರಮಗಳು |
|---|---|
| ಭೌತಿಕವಾಗಿ ಸ್ಥಳಾಂತರಗೊಂಡ ಕುಟುಂಬಗಳ ಪುನರ್ವಸತಿ - ಕೊಳೆಗೇರಿ ನಿವಾಸಿಗಳು | ಬಾಧಿತರು ಕಳೆದುಕೊಳ್ಳುವ ಸ್ವತ್ತುಗಳಿಗೆ ಬದಲಿ ವೆಚ್ಚ, ವರ್ಗಾವಣೆಯ ನೆರವು ಮತ್ತು ಜೀವನಾಧಾರ, ಬಾಡಿಗೆ ನೆರವು ಇತ್ಯಾದಿಗಳನ್ನು ಅನುಮೋದಿತ ಏಕೀಕೃತ ಅರ್ಹತಾ ಮಾನದಂಡ ಮತ್ತು ಜೀವನೋಪಾಯ ಮರುಸ್ಥಾಪನೆ ಕ್ರಮಗಳಲ್ಲಿ ಒದಗಿಸಲಾಗಿದೆ. ಸಮಾಲೋಚನೆಯ ಸಮಯದಲ್ಲಿ ಈ ಅರ್ಹತೆಯ ಮಾನದಂಡವನ್ನು PAP ಗಳೊಂದಿಗೆ ವ್ಯಾಪಕವಾಗಿ ಚರ್ಚಿಸಲಾಗಿದೆ.<br>KRIDE ಈಗಾಗಲೇ ಕೊಳೆಗೇರಿ ನಿವಾಸಿಗಳ ಪುನರ್ವಸತಿಗೆ ಸಂಬಂಧಿಸಿದಂತೆ ಸ್ಲಮ್ ನಿವಾಸಿಗಳೊಂದಿಗೆ ಪಾಲುದಾರರ ಸಮಾಲೋಚನೆಯ ಪ್ರಕ್ರಿಯೆಯನ್ನು ಪ್ರಾರಂಭಿಸಿದೆ.<br>ಕೊಳೆಗೇರಿ ನಿವಾಸಿಗಳ ಪುನರ್ವಸತಿಯನ್ನು ಕರ್ನಾಟಕ ಕೊಳೆಗೇರಿ ಅಭಿವೃದ್ಧಿ ಮಂಡಳಿಯ (ಕೆಎಸ್‌ಡಿಬಿ) ಸಮನ್ವಯದಲ್ಲಿ ಮಾಡಲಾಗುತ್ತದೆ. ಎಂಆರ್ ಜಯರಾಮ್ ಕಾಲೋನಿ ಕೊಳೆಗೇರಿಯಲ್ಲಿ ನಿರ್ಮಾಣ ಅವಧಿಯಲ್ಲಿ ತಾತ್ಕಾಲಿಕ ಸ್ಥಳಾಂತರ ಮಾತ್ರ ಅಗತ್ಯವಿದೆ ಎಂದು ಭಾವಿಸಲಾಗಿದೆ. ಅಲ್ಲದೆ, ಮೇಲಿನವುಗಳ ಹೊರತಾಗಿ, KSDB ಸ್ಲಂ ನಿವಾಸಿಗಳ ಶಾಶ್ವತ ಸ್ಥಳಾಂತರವನ್ನು ನಿರ್ವಹಿಸಿದಾಗ (ಸ್ವತಂತ್ರವಾಗಿ) K RIDE ಬೆಂಬಲ ಅನುದಾನ ಮತ್ತು ಅರ್ಹತೆಯ ಮ್ಯಾಟ್ರಿಕ್ಸ್ ಪ್ರಕಾರ ಹೆಚ್ಚುವರಿ ಅರ್ಹತೆಗಳನ್ನು ಒದಗಿಸುತ್ತದೆ (ವಿಭಾಗ 11 ರಲ್ಲಿ ಕೋಷ್ಟಕ 54 ಅನ್ನು ನೋಡಿ). ಅನಿವಾರ್ಯವಾದರೆ, ಸಾಕಷ್ಟು ಆರೋಗ್ಯ ಮತ್ತು ಶಿಕ್ಷಣದ ಮೂಲಸೌಕರ್ಯಗಳನ್ನು ಹೊಂದಿರುವ ಪ್ರದೇಶದಲ್ಲಿ (ಮತ್ತಿಕೆರೆ ಕೊಳಗೇರಿಗೆ ಸುರಕ್ಷತಾ ಕಾರಣಗಳಿಗಾಗಿ ನಿರ್ಮಾಣದ ಸಮಯದಲ್ಲಿ (ಅಂದಾಜು 6 ತಿಂಗಳು) ತಾತ್ಕಾಲಿಕ ಸ್ಥಳಾಂತರವನ್ನು ನಿರೀಕ್ಷಿಸಲಾಗಿದೆ) ಅಭಿವೃದ್ಧಿಪಡಿಸಿದ ನಂತರವೇ ಸ್ಥಳಾಂತರ ಮಾಡಲಾಗುವುದು. ಈ ಮೂಲಕ ಪುನರ್ವಸತಿ ಪ್ರಕ್ರಿಯೆಯಲ್ಲಿ ಮಕ್ಕಳ ಶಿಕ್ಷಣ, ಸಮುದಾಯದ ಆರೋಗ್ಯ ಮತ್ತು ದುರ್ಬಲ ವರ್ಗಗಳ ಸುರಕ್ಷತೆಗೆ ಸಂಬಂಧಿಸಿದಂತೆ ಅಪಾಯವನ್ನು ತಗ್ಗಿಸಲಾಗುತ್ತದೆ.<br>ಸ್ಥಳಾಂತರಗೊಂಡ ಜನರು ತಮ್ಮ ಕುಂದುಕೊರತೆಗಳನ್ನು ಸಕಾಲದಲ್ಲಿ ನೋಂದಾಯಿಸಲು ಮತ್ತು ಪರಿಹರಿಸಲು RAPPIC ಅನುಕೂಲ ಮಾಡುತ್ತದೆ. ಅನಕ್ಷರಸ್ಥರು ಮತ್ತು ದಿವ್ಯಾಂಗರಿಗೆ ತಮ್ಮ ಕುಂದುಕೊರತೆಗಳನ್ನು ಕರಡು ಮಾಡಲು ಮತ್ತು ವರದಿ ಮಾಡಲು RAPPIC ಸಹಾಯ ಮಾಡುತ್ತದೆ. |
| ಆರ್ಥಿಕವಾಗಿ ಸ್ಥಳಾಂತರಗೊಂಡ, ಆಸ್ತಿಯ ಮೇಲೆ ಹೆಸರಿರುವ (ಟೈಟಲ್ ಹೋಲ್ಡರ್ಸ್) ಕುಟುಂಬಗಳ ಜೀವನೋಪಾಯದ ಪುನರ್ ಸ್ಥಾಪನೆ. | ಬಾಧಿತ ಕಟ್ಟಡ/ ರಚನೆಗಳ ಬದಲಿ ವೆಚ್ಚದ ಹೊರತಾಗಿ, ಆರ್ಥಿಕ ಸ್ಥಳಾಂತರಗೊಂಡ ಕುಟುಂಬಗಳು, ಯೋಜನೆಯ ಅನುಮೋದಿತ ಅರ್ಹತಾ ಮಾನದಂಡದ (EM) ಪ್ರಕಾರ, ವರ್ಗಾವಣೆ ನೆರವು, ವ್ಯಾಪಾರ ನಷ್ಟ ಭತ್ಯೆ ಮತ್ತು ವ್ಯಾಪಾರ ಆವರಣದ ಮರು-ಸ್ಥಾಪನೆ ಭತ್ಯೆಗಳನ್ನು ಪಡೆಯಲು ಅರ್ಹರಾಗಿರುತ್ತಾರೆ. |

| ಸಾಮಾಜಿಕ ಅಪಾಯಗಳು | ಅಳವಡಿಸಿಕೊಳ್ಳಲಾದ ಉಪಶಮನ ಕ್ರಮಗಳು |
|---|---|
| | ಅನುಮೋದಿತ EM ನಲ್ಲಿ ಕೌಶಲ್ಯ ಉನ್ನತೀಕರಣ ತರಬೇತಿಯನ್ನು ಸಹ ನೀಡಲಾಗುತ್ತದೆ, ಅಗತ್ಯ ಮೌಲ್ಯಮಾಪನ ಸಮೀಕ್ಷೆಯನ್ನು RAPPIC ನಡೆಸುತ್ತದೆ. ಸ್ಥಳಾಂತರಗೊಂಡ ಜನರ ಆಸಕ್ತಿ ಮತ್ತು ಕಾರ್ಯಸಾಧ್ಯತೆಯ ಆಧಾರದ ಮೇಲೆ, ಅವರ ಕೌಶಲ್ಯ ಮತ್ತು ಜೀವನೋಪಾಯದ ಮರುಸ್ಥಾಪನೆಯನ್ನು ನವೀಕರಿಸಲು ಸೂಕ್ತ ತರಬೇತಿ, ಕೌಶಲ್ಯ ಮತ್ತು ಜೀವನೋಪಾಯ ವರ್ಧನೆ ಇತ್ಯಾದಿಗಳನ್ನು ನೀಡಲಾಗುತ್ತದೆ. ಜೀವನೋಪಾಯದ ಪುನರ್ ಸ್ಥಾಪನೆಗಾಗಿ ಕ್ರಮಗಳ ವಿಧಾನವನ್ನು ಅಧ್ಯಾಯ 12ರಲ್ಲಿ ಪ್ರಸ್ತಾಪಿಸಲಾಗಿದೆ. |
| ಬಾಧಿತ ಸಾಮಾನ್ಯ ಆಸ್ತಿ ಸಂಪನ್ಮೂಲಗಳ ಸ್ಥಳಾಂತರ | ಆಯಾ ಬಳಕೆದಾರರ ಸಮುದಾಯಗಳೊಂದಿಗೆ ಸಮಾಲೋಚನೆ ನಡೆಸಲಾಗುವುದು ಮತ್ತು ಅದರ ಪ್ರಕಾರ ಸ್ಥಳಾಂತರವನ್ನು ಮಾಡಲಾಗುತ್ತದೆ. ಸ್ಥಳಾಂತರಗೊಂಡ ಸಾಮಾನ್ಯ ಆಸ್ತಿ ಸಂಪನ್ಮೂಲವನ್ನು ಸ್ಥಳಾಂತರಿಸಲು KRIDE ಮತ್ತು ಬಳಕೆದಾರ ಸಮುದಾಯವನ್ನು RAPPIC ಸುಗಮಗೊಳಿಸುತ್ತದೆ. ಬಾಧಿತ ಸಿಆರ್‌ಪಿಗಳ ವಿವರಗಳಿಗಾಗಿ ದಯವಿಟ್ಟು 1.7.4 ನೋಡಿ. |
| ಅಸ್ತಿತ್ವದಲ್ಲಿರುವ ರಸ್ತೆಗಳ ಸ್ವಾಧೀನ/ ಬಳಕೆಯಿಂದಾಗಿ ಆಸ್ತಿಗಳಿಗೆ ಪ್ರವೇಶದ ನಷ್ಟ. | ಇಲಾಖೆಗಳ ಸಮನ್ವಯದೊಂದಿಗೆ KRIDE ನಿಂದ ಎಲ್ಲಾ ಆಸ್ತಿಗಳಿಗೆ ಪ್ರವೇಶವನ್ನು ಖಚಿತಪಡಿಸಲಾಗುವುದು.<br><br>GRM ಪ್ರಕಾರ ನಿಗದಿತ ಕಾಲಮಿತಿಯೊಳಗೆ ಸಂತ್ರಸ್ತ ಜನರಿಗೆ ತಮ್ಮ ಕುಂದುಕೊರತೆಗಳನ್ನು ಪರಿಹರಿಸಲು RAPPIC ಸಹಾಯ ಮಾಡುತ್ತದೆ. |
| ಯೋಜನೆಯಿಂದಾಗಿ ಅಸ್ತಿತ್ವದಲ್ಲಿರುವ ರೈಲ್ವೆ ಲೆವೆಲ್ ಕ್ರಾಸಿಂಗ್‌ಗಳನ್ನು (LCs) ಮುಚ್ಚುವುದು. | ಅಸ್ತಿತ್ವದಲ್ಲಿರುವ ಎಲ್ಲಾ 34 LCಗಳನ್ನು ROB ಗಳು / RUB ಗಳ ಮೂಲಕ ತೆಗೆದುಹಾಕಲಾಗುತ್ತದೆ ಮತ್ತು ಹೀಗಾಗಿ ಸುರಕ್ಷತೆಯನ್ನು ಬಲಪಡಿಸಲಾಗುವುದು. ನಿಲ್ದಾಣಗಳಲ್ಲಿ ಹೆಚ್ಚುವರಿ ಮಾರ್ಗಗಳನ್ನು ನಿರೀಕ್ಷಿಸಲಾಗಿದೆ. ಅಂಡರ್-ಪಾಸ್‌ಗಳು ಮತ್ತು ಸ್ಕೈವಾಕ್‌ಗಳನ್ನು ಸಹ ವಿನ್ಯಾಸದಲ್ಲಿ ಸೇರಿಸಲಾಗಿದೆ. ಕಾರಿಡಾರ್ ನ ಜೋಡಣೆಗಳು ಸ್ಥಳೀಯ ಸಮುದಾಯಗಳಿಗೆ ಅಡೆತಡೆಗಳನ್ನು ಅಥವಾ ಗಮನಾರ್ಹ ಅಡ್ಡದಾರಿಗಳನ್ನು ಸೃಷ್ಟಿಸುವುದಿಲ್ಲ. |
| ಸಮುದಾಯ ಆರೋಗ್ಯ ಮತ್ತು ಸುರಕ್ಷತೆ | ಈ ಯೋಜನೆಯು ಸ್ಥಳೀಯ ಜನರ ಸಮುದಾಯದ ಆರೋಗ್ಯದ ಮೇಲೆ ಗಮನಾರ್ಹ ಪ್ರತಿಕೂಲ ಪರಿಣಾಮ ಬೀರುವ ನಿರೀಕ್ಷೆಯಿಲ್ಲ; ಆದಾಗ್ಯೂ, ಸಾಮಾನ್ಯ ಆರೋಗ್ಯ ಮತ್ತು ಸುರಕ್ಷತೆ ಮತ್ತು ಕಾರ್ಮಿಕ ಶಿಬಿರಗಳಲ್ಲಿ ಅನುಸರಿಸಬೇಕಾದ ನೈರ್ಮಲ್ಯದ ನಿಬಂಧನೆಗಳಿಂದ ಅಪಾಯಗಳನ್ನು ತಗ್ಗಿಸಲಾಗುತ್ತದೆ. ಇತ್ಯಾದಿ ವಿವರಗಳನ್ನು EMP ಯಲ್ಲಿ ಸೇರಿಸಲಾಗಿದೆ.<br>ಕಾನೂನು ಪ್ರಕಾರ ಮತ್ತು ಉತ್ತಮ ಅಂತರಾಷ್ಟ್ರೀಯ ವಿಧಾನಗಳ (IFC ಮಾರ್ಗದರ್ಶನ) ಅನುಸಾರ EPC ಗುತ್ತಿಗೆದಾರರು ಎಲ್ಲ ಸೌಲಭ್ಯಗಳಿರುವ ಕಾರ್ಮಿಕ ಶಿಬಿರಗಳನ್ನು ನಿರ್ಮಿಸುತ್ತಾರೆ. ವಲಸೆ ಕಾರ್ಮಿಕರು ಸೇರಿದಂತೆ ಕಾರ್ಮಿಕರಿಗೆ ವಸತಿ ಒದಗಿಸಲು ಖಾಲಿ ಇರುವ ಅಪಾರ್ಟ್‌ಮೆಂಟ್‌ಗಳನ್ನು ಬಾಡಿಗೆಗೆ ಪಡೆಯಲು ಗುತ್ತಿಗೆದಾರರಿಗೆ ಸೂಚಿಸಲಾಗುವುದು. ಯೋಜನೆಯಲ್ಲಿರುವ ವಲಸೆ ಕಾರ್ಮಿಕರನ್ನು ಶಾಸನದ ಪ್ರಕಾರ ನೋಂದಾಯಿಸಲಾಗುತ್ತದೆ (2022ರಲ್ಲಿ ಬೆಂಗಳೂರಿನ ಪ್ರಸ್ತುತ ಮೆಟ್ರೋಪಾಲಿಟನ್ ಪ್ರದೇಶದ ಜನಸಂಖ್ಯೆಯು 13,193,000 ಆಗಿದೆ. ಬೆಂಗಳೂರಿನ ಸುಮಾರು ಶೇ. 50% ಜನಸಂಖ್ಯೆಯನ್ನು ವಲಸೆಗಾರರು ಎಂದು ಪರಿಗಣಿಸಲಾಗುತ್ತದೆ).<br>ಗುತ್ತಿಗೆದಾರರು ಅಭಿವೃದ್ಧಿಪಡಿಸಿದ ಮತ್ತು ಜಾರಿಗೊಳಿಸಿದ ಎಚ್‌ಎಸ್‌ಇ ಯೋಜನೆಯಿಂದ ಕಾರ್ಮಿಕರ ಔದ್ಯೋಗಿಕ ಆರೋಗ್ಯ ಮತ್ತು |

| | |
|---|---|
| | ಸುರಕ್ಷತೆಯನ್ನು ನೋಡಿಕೊಳ್ಳಲಾಗುತ್ತದೆ. ಇದು ಕಾರ್ಮಿಕರ ನೀತಿ ಸಂಹಿತೆಯ ಅನುಸಾರ ಇರುತ್ತದೆ. ಇದು ಸಮುದಾಯ ಆರೋಗ್ಯ ಮತ್ತು ಸುರಕ್ಷತಾ ಅಂಶಗಳನ್ನು ಸಹ ಒಳಗೊಂಡಿರುತ್ತದೆ.<br>ವೃದ್ಧರು, ಮಹಿಳೆಯರು, ಮಕ್ಕಳು, ವಿಶೇಷಚೇತನರು ಮತ್ತು ತೃತೀಯ ಲಿಂಗಿಗಳ (EWCD&T) ಸುರಕ್ಷತೆ ಮತ್ತು ಸೌಕರ್ಯಗಳನ್ನು ಖಾತ್ರಿಪಡಿಸುವ ಅವಕಾಶವನ್ನು ಲಿಂಗ ಕ್ರಿಯಾ ಯೋಜನೆಯಲ್ಲಿ (GAP) ಸೇರಿಸಲಾಗಿದೆ.<br>ನಿರ್ಮಾಣ ದಟ್ಟಣೆ ಮತ್ತು ನಿವೇಶನ ಕಾಮಗಾರಿ ಚಟುವಟಿಕೆಗಳಿಂದಾಗಿ ಸಾರ್ವಜನಿಕ ರಸ್ತೆ ಬಳಕೆದಾರರಿಗೆ ಅಪಘಾತದ ಅಪಾಯಗಳನ್ನು ಸಂಚಾರ ನಿರ್ವಹಣಾ ಯೋಜನೆಯಿಂದ ನಿರ್ವಹಿಸಲಾಗುತ್ತದೆ. |
| ಸ್ಥಳೀಯ ಜನರ ಮೇಲಿನ ಇತರೆ ಪರಿಣಾಮಗಳು | ನಗರದ ಸಸ್ಯವರ್ಗ, ಮನರಂಜನಾ ಚಟುವಟಿಕೆ, ದೃಶ್ಯ ಸೌಂದರ್ಯ ಮತ್ತು ಪರಿಸರ ವ್ಯವಸ್ಥೆಯ ಸೇವೆಗಳು, ಮರಗಳ ನಷ್ಟ ಮತ್ತು ನಗರದ ಹಸಿರು ಮುಂತಾದವುಗಳ ಮೇಲೆ ಪರಿಣಾಮವಾಗಲಿದೆ. ಮರ ನಿರ್ವಹಣೆ ಯೋಜನೆಯ ಪ್ರಕಾರ ಮರಗಳಿಗೆ ಪರಿಹಾರ ನೀಡಲಾಗುವುದು. ನಗರದ ಜೀವವೈವಿಧ್ಯ, ದೃಶ್ಯ ಸೌಂದರ್ಯ ಕಾಪಾಡಲು ಮರಗಳ ಪುನರ್ ನೆಡುವಿಕೆ / ಕಸಿ ಮಾಡುವ ಸ್ಥಳಗಳನ್ನು ಆಯ್ಕೆ ಮಾಡಲಾಗುವುದು. |
| ಅನಧಿಕೃತ ನಿವಾಸಿಗಳು<br><br>(Squatters) | ಶಾಶ್ವತ ಭೌತಿಕ ಸ್ಥಳಾಂತರದ ಪುನರ್ವಸತಿಗಾಗಿ<br>ಎ) ಕನಿಷ್ಠ 5,000 ರೂ.ಗೆ ಒಳಪಟ್ಟಿರುವ ಅನುಮೋದಿತ ಮೌಲ್ಯಮಾಪಕರಿಂದ ಕಟ್ಟಡದ ಮೌಲ್ಯಮಾಪನದ ಆಧಾರದ ಮೇಲೆ ಒಂದು-ಬಾರಿ ಹಣಕಾಸಿನ ನೆರವು. ಬದಲಿ ವೆಚ್ಚದ ತತ್ವಗಳ ಆಧಾರದ ಮೇಲೆ ಸವಕಳಿ ಕಡಿತಗೊಳಿಸದೆ ಆಸ್ತಿ ಮೌಲ್ಯಮಾಪನ, ಮತ್ತು<br>ಬಿ) ಅನಾನುಕೂಲತೆ ಭತ್ಯೆ: ರೂ. 30,000 ಒಂದು ಬಾರಿ ಪಾವತಿ ನೀಡಲಾಗುತ್ತದೆ.<br>ಸಿ) ಶಿಫ್ಟಿಂಗ್ ಭತ್ಯೆ ರೂ. 30,000/-<br>ಡಿ) ಜೀವನಾಧಾರ ಭತ್ಯೆ ರೂ. 30,000/-<br><br>ಇದರ ಜೊತೆಗೆ ಪೋಷಕ ಕ್ರಮಗಳು ಮತ್ತು ಜೀವನೋಪಾಯ ಮರುಸ್ಥಾಪನೆ (ಶಾಶ್ವತ ಮತ್ತು ತಾತ್ಕಾಲಿಕ ಸ್ಥಳಾಂತರ) ಕ್ರಮಗಳು:<br>ಎ) ಸಮಾಲೋಚನೆ, ಸೂಕ್ಷ್ಮ ಯೋಜನೆ ತಯಾರಿ, ನಿಧಿ ನಿರ್ವಹಣೆ ಬೆಂಬಲವಾಗಿ ಆರ್ಥಿಕ ಸಾಕ್ಷರತೆ, ಸರ್ಕಾರಿ ಯೋಜನೆಗಳು ಮತ್ತು ಬ್ಯಾಂಕ್‌ಗಳೊಂದಿಗಿನ ಸಂಪರ್ಕ ಇತ್ಯಾದಿ.<br>ಬಿ) ಪರ್ಯಾಯ ವಸತಿ ಆವರಣವನ್ನು ಗುರುತಿಸುವಲ್ಲಿ ಸಹಾಯ; ಮತ್ತು ಅಧ್ಯಾಯ 12 ರ ಪ್ರಕಾರ ಜೀವನೋಪಾಯದ ಪುನರ್ ಸ್ಥಾಪನೆ ಕ್ರಮಗಳಿಗೆ ಪ್ರವೇಶವನ್ನು ಒದಗಿಸಲಾಗುವುದು.<br>ಸಿ) ಅಧ್ಯಾಯ 12 ರ ಪ್ರಕಾರ ಜೀವನೋಪಾಯದ ಮರುಸ್ಥಾಪನೆಯ ಕ್ರಮಗಳಿಗೆ ಪ್ರವೇಶ<br>ಒದಗಿಸಲಾಗುವುದು. |

| | |
|---|---|
| ವಾಣಿಜ್ಯ ಅನಧಿಕೃತ ನಿವಾಸಿಗಳು<br><br>Squatter (Commercial) | ಪುನರ್ವಸತಿಗಾಗಿ (ಶಾಶ್ವತ ಆರ್ಥಿಕ ಸ್ಥಳಾಂತರ),<br>ಎ) ಅನುಮೋದಿತ ಮೌಲ್ಯಮಾಪಕರಿಂದ ಕಟ್ಟಡಗಳ ಮೌಲ್ಯಮಾಪನದ ಆಧಾರದ ಮೇಲೆ ಕನಿಷ್ಠ 5,000 ರೂ.ಗೆ ಒಳಪಟ್ಟಿರುವ ಒಂದು ಬಾರಿ ಹಣಕಾಸಿನ ನೆರವು. ಬದಲಿ ವೆಚ್ಚದ ತತ್ವಗಳ ಆಧಾರದ ಮೇಲೆ ಸವಕಳಿ ಕಡಿತಗೊಳಿಸದೆ ಆಸ್ತಿ ಮೌಲ್ಯಮಾಪನ.<br>ಬಿ) ಅನನುಕೂಲತೆ ಭತ್ಯೆ: ಒಂದು ಬಾರಿ ಪಾವತಿ ರೂ. 30,000,<br>ಸಿ) ವಾಣಿಜ್ಯ ಭಾಗಕ್ಕೆ ಸಂಬಂಧಿಸಿದಂತೆ ವ್ಯಾಪಾರ ಆವರಣದ ಮರು-ಸ್ಥಾಪನೆಗಾಗಿ ಪ್ರತಿ ಚದರ ಅಡಿಗೆ ರೂ. 540 ರೂ.<br>ಡಿ) ಸ್ಥಳಾಂತರ ಭತ್ಯೆ ರೂ. 35,000/-<br>ಇ) ಜೀವನಾಧಾರ ಭತ್ಯೆ ರೂ. 30,000/-<br>ಎಫ್) ವ್ಯಾಪಾರ ನಷ್ಟ ರೂ. 50,000/-<br><br>ಹೆಚ್ಚುವರಿಯಾಗಿ, ಪೋಷಕ ಕ್ರಮಗಳು ಮತ್ತು ಜೀವನೋಪಾಯ ಮರುಸ್ಥಾಪನೆ (ಶಾಶ್ವತ ಮತ್ತು ತಾತ್ಕಾಲಿಕ ಸ್ಥಳಾಂತರಕ್ಕಾಗಿ).<br>ಎ) ಸಮಾಲೋಚನೆ, ಮೈಕ್ರೋ ಪ್ಲಾನ್ ತಯಾರಿ, ಆರ್ಥಿಕ ಸಾಕ್ಷರತೆ, ಸರ್ಕಾರಿ ಯೋಜನೆಗಳು ಮತ್ತು ಬ್ಯಾಂಕ್‌ಗಳೊಂದಿಗಿನ ಸಂಪರ್ಕ ಮುಂತಾದ ಹಣಕಾಸು ನಿರ್ವಹಣೆ ಬೆಂಬಲ.<br>ಬಿ) ಪರ್ಯಾಯ ವಾಣಿಜ್ಯ ಆವರಣಗಳನ್ನು ಗುರುತಿಸುವಲ್ಲಿ ಸಹಾಯ ಮತ್ತು<br>ಸಿ) ಅಧ್ಯಾಯ 12 ರ ಪ್ರಕಾರ ಜೀವನೋಪಾಯದ ಮರುಸ್ಥಾಪನೆಯ ಕ್ರಮಗಳಿಗೆ ನೆರವು ನೀಡುವುದು. |

//

________________________________________________________________---

## 1.1. ಸಮುದಾಯ ಆರೋಗ್ಯ ಮತ್ತು ಸುರಕ್ಷತೆ

### 1.1.1. ಉದ್ದೇಶಗಳು

- ಯೋಜನೆ ಜಾರಿಯಲ್ಲಿರುವ ಸಂದರ್ಭದಲ್ಲಿ ದಿನನಿತ್ಯ ಮತ್ತು ನಿಗದಿತಯಲ್ಲದ ಸಂದರ್ಭದಲ್ಲೂ ಯೋಜನೆಯಿಂದ ಸಂತ್ರಸ್ತರಾದ ಸಮುದಾಯಗಳ ಆರೋಗ್ಯ ಮತ್ತು ಸುರಕ್ಷತೆಯ ಮೇಲೆ ವ್ಯತಿರಿಕ್ತ ಪರಿಣಾಮಗಳಾಗುವ ಬಗ್ಗೆ ಗಮನಿಸಿ, ಅವುಗಳನ್ನು ತಪ್ಪಿಸುವುದು
- ಗುಣಮಟ್ಟ ಮತ್ತು ಸುರಕ್ಷತೆಯನ್ನು ಉತ್ತೇಜಿಸಲು ಹಾಗೂ ಅಣೆಕಟ್ಟುಗಳು ಸೇರಿದಂತೆ ಮೂಲಸೌಕರ್ಯಗಳ ವಿನ್ಯಾಸ ಮತ್ತು ನಿರ್ಮಾಣ ಸಂದರ್ಭದಲ್ಲಿ ಹವಾಮಾನ ಬದಲಾವಣೆಗೆ ಸಂಬಂಧಿಸಿದಂತೆ ಪರಿಶೀಲಿಸುವುದು.
- ಯೋಜನೆಗೆ ಸಂಬಂಧಿತ ಸಂಚಾರ ಮತ್ತು ರಸ್ತೆ ಸುರಕ್ಷತೆಯ ಅಪಾಯಗಳು, ರೋಗಗಳು ಮತ್ತು ಅಪಾಯಕಾರಿ ವಸ್ತುಗಳಿಗೆ ಸಮುದಾಯ ಒಡ್ಡಿಕೊಳ್ಳುವುದನ್ನು ತಪ್ಪಿಸಲು ಅಥವಾ ಕಡಿಮೆ ಮಾಡುವುದು.
- ತುರ್ತು ಸಂದರ್ಭಗದಳಲ್ಲಿ ಸಮಸ್ಯೆ ಪರಿಹರಿಸಿ, ಪರಿಣಾಮಕಾರಿ ಕ್ರಮಗಳನ್ನು ಕೈಗೊಳ್ಳುವುದು.
- ಯೋಜನೆಯಿಂದ ತೊಂದರೆಗೊಳಗಾದ ಸಮುದಾಯಗಳು ಮತ್ತು ಆಸ್ತಿಗಳಿಗೆ ಅಪಾಯಗಳನ್ನು ತಪ್ಪಿಸುವ ಅಥವಾ ಕಡಿಮೆ ಮಾಡುವುದನ್ನು ಖಚಿತಪಡಿಸಿಕೊಳ್ಳುವುದು.

### 1.1.2. ಪರಿಣಾಮ ಮತ್ತು ಉಪಶಮನ ಕ್ರಮಗಳು

**ನಿರ್ಮಾಣ ಹಂತ**: ನಿರ್ಮಾಣ ಹಂತದಲ್ಲಿ ಹೆಚ್ಚಿನ ಸಂಖ್ಯೆಯ ನಿರ್ಮಾಣಗಳ ಸಂದರ್ಭದಲ್ಲಿ ಕಚ್ಚಾ ಮತ್ತು ಸಿದ್ಧಪಡಿಸಿದ ವಸ್ತುಗಳ ನಿರ್ಮಾಣ ಮತ್ತು ಸಾಗಣೆಯ ಸಮಯದಲ್ಲಿ ಸುರಕ್ಷತೆಯ ಬಗ್ಗೆ ಕಾಳಜಿ ವಹಿಸದಿದ್ದಲ್ಲಿ

ಅಪಾಯಕಾರಿ ವಸ್ತುಗಳಿಂದ ಸಾರ್ವಜನಿಕ ಆರೋಗ್ಯ ಮತ್ತು ಸುರಕ್ಷತೆಗೆ ಅಪಾಯ ಸಂಭವಿಸಬಹುದು. ನಿರ್ಮಾಣದ ಸಮಯದಲ್ಲಿ ಭಾರೀ ವಾಹನಗಳ ಓಡಾಟದಿಂದ ರಸ್ತೆ ಅಪಘಾತಗಳ ಅಪಾಯ ಎದುರಾಗಬಹುದು. ನಿರ್ಮಾಣ ಸ್ಥಳದಲ್ಲಿ ಭದ್ರತಾ ಸಿಬ್ಬಂದಿ ಕೆಲಸದಲ್ಲಿ ತೊಡಗಿಸಿಕೊಂಡರೆ ಭದ್ರತೆಗೆ ಸಂಭಾವ್ಯ ಬೆದರಿಕೆ ಎದುರಾಗಬಹುದು.

ಅಥವಾ ಗುತ್ತಿಗೆದಾರರ ಸೌಲಭ್ಯಗಳು ನಡಾವಳಿಯಂತೆ ಸೂಕ್ತವಾಗಿ ಕಾರ್ಯನಿರ್ವಹಿಸುತ್ತಿಲ್ಲ, ಉದಾ.. ಮಾನವ ಹಕ್ಕುಗಳ ವಿಷಯದಲ್ಲಿ ಅವರಿಗೆ ಸಮರ್ಪಕವಾಗಿ ತರಬೇತಿ ನೀಡದಿದ್ದರೆ ಪೊಲೀಸ್ ಬಲ ಬಳಸುವುದು ಅಗತ್ಯವಾಗಬಹುದು. ಇಂತಹ ಯಾವುದೇ ನಕಾರಾತ್ಮಕ ಪರಿಣಾಮಗಳನ್ನು ತಪ್ಪಿಸಲು ಇಲ್ಲವೇ ಕಡಿಮೆ ಮಾಡಲು ನಿರ್ಮಾಣ ಕಾರ್ಯದ ಮೊದಲು ಮತ್ತು ನಿರ್ಮಾಣ ಸಮಯದಲ್ಲಿ ಈ ಕೆಳಗಿನ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತದೆ:

- ಆರೋಗ್ಯ, ಸುರಕ್ಷತೆ ಮತ್ತು ಪರಿಸರ (HSE) ಯೋಜನೆಯನ್ನು ಗುತ್ತಿಗೆದಾರರು ಸಮರ್ಪಕವಾಗಿ ಅಭಿವೃದ್ಧಿಪಡಿಸಿ, KRIDE ಪ್ರತಿನಿಧಿಯಿಂದ ಅಂಗೀಕಾರಗೊಂಡ ಬಳಿಕವೇ ನಿವೇಶನದಲ್ಲಿ ನಿರ್ಮಾಣ ಕಾರ್ಯ ಆರಂಭಿಸಲಾಗುತ್ತದೆ;
- ನಿರ್ಮಾಣ ಕಾರ್ಯಗಳು ಪ್ರಾರಂಭವಾಗುವ ಮೊದಲು ತುರ್ತು ಸಿದ್ಧತೆ ಮತ್ತು ಪರಿವರ್ತನೆ ಯೋಜನೆಯನ್ನು ಅಭಿವೃದ್ಧಿಪಡಿಸಲಾಗುತ್ತದೆ;
- ಅಸ್ತಿತ್ವದಲ್ಲಿರುವ ರಸ್ತೆಗಳ ಮೇಲೆ ಕನಿಷ್ಠ ಋಣಾತ್ಮಕ ಪರಿಣಾಮದೊಂದಿಗೆ ನಿರ್ಮಾಣ ಪ್ರದೇಶಗಳಿಗೆ ಸುರಕ್ಷಿತ ಪ್ರವೇಶಕ್ಕಾಗಿ ಮತ್ತು ಸಮುದಾಯದ ಸುರಕ್ಷತೆ ಖಚಿತಪಡಿಸಿಕೊಳ್ಳಲು ಮತ್ತು ಅವರ ಆಸ್ತಿಗಳಿಗೆ (ಮನೆಗಳು, ಭೂಮಿ, ಉದ್ಯಾನಗಳು, ಇತ್ಯಾದಿ) ಸುಲಭ ಪ್ರವೇಶವನ್ನು ಖಚಿತಪಡಿಸಿಕೊಳ್ಳಲು ಸಂಚಾರ ನಿರ್ವಹಣಾ ಯೋಜನೆಯನ್ನು ಅಭಿವೃದ್ಧಿಪಡಿಸಲಾಗುತ್ತದೆ;
- ಸಂಚಾರ ನಿಯಂತ್ರಣ ಮತ್ತು ಸುರಕ್ಷತೆಗಾಗಿ ಕೆಲಸದ ಸ್ಥಳಗಳ ಬಳಿ ಎಚ್ಚರಿಕೆಯಿಂದ ಚಾಲನೆ ಮಾಡಲು (ಕಡಿಮೆ ವೇಗ) ಸ್ಥಳೀಯ ರೇಡಿಯೋ/ಟಿವಿ ಮೂಲಕ ಯೋಜನೆಯ ಚಟುವಟಿಕೆಗಳ ಕುರಿತು ಮಾಹಿತಿ ಪ್ರಕಟಿಸಲಾಗುತ್ತದೆ. KRIDE ಮತ್ತು ಗುತ್ತಿಗೆದಾರರು ಬಾಧಿತ ಪ್ರದೇಶಗಳು ಮತ್ತು ಗ್ರಾಮಗಳ ನಿವಾಸಿಗಳಿಗೆ ವಾರಕ್ಕೊಮ್ಮೆ ಅನುಸರಿಸುವ ಯೋಜಿತ ಚಟುವಟಿಕೆಗಳ ಕುರಿತು ಬಹಿರಂಗವಾಗಿ ಮತ್ತು ಪಾರದರ್ಶಕವಾಗಿ ತಿಳಿಸುತ್ತಾರೆ;
- ಯೋಜನಾ ಪ್ರದೇಶದ ಮೂಲಕ ಮತ್ತು ನಗರ ಪ್ರದೇಶಗಳಲ್ಲಿ ಸಂಚಾರ ಹರಿವು ಕುರಿತು BDA/BBMP ಮತ್ತು ಟ್ರಾಫಿಕ್ ಪೋಲಿಸರು ಜವಾಬ್ದಾರಿಯುತ ಟ್ರಾಫಿಕ್ ಇಂಜಿನಿಯರ್ ಗಳ ಜತೆ ಸಮನ್ವಯದಿಂದ ಕಾರ್ಯನಿರ್ವಹಿಸುತ್ತಾರೆ;
- ಕಚ್ಚಾ ಸಾಮಗ್ರಿಗಳು/ ಅಪಾಯಕಾರಿ ವಸ್ತುಗಳ ಸಾಗಣೆಯ ಸಂದರ್ಭದಲ್ಲಿ ಸಂಭವಿಸಬಹುದಾದ ಪ್ರಕರಣಗಳ ನಿರ್ವಹಣೆ ಜತೆಗೆ ರಕ್ಷಣೆ ನೀಡುವುದು ಸೇರಿದಂತೆ ತುರ್ತು ಯೋಜನೆಯನ್ನು ಅಭಿವೃದ್ಧಿಪಡಿಸಲಾಗುವುದು;
- ಸಬರ್ಬನ್ ರೈಲ್ವೇ ಜೋಡಣೆಯ ನಿರ್ಮಾಣಕ್ಕಾದ ವಿನ್ಯಾಸವನ್ನು **EPC** ಗುತ್ತಿಗೆದಾರರು, ಉತ್ತಮ ನಿರ್ಮಾಣ ಪದ್ಧತಿಯಂತೆ ಮತ್ತು ರಾಷ್ಟ್ರೀಯ ನಿಯಮಗಳ ಪ್ರಕಾರ ಪರಿಸರ ಅಗತ್ಯಗಳು ಹಾಗೂ ಮಾಲಿನ್ಯ ತಡೆಗಟ್ಟುವ ಮಾನದಂಡಗಳ ಅನುಸಾರ ಅಭಿವೃದ್ಧಿಪಡಿಸುತ್ತಾರೆ;
- ಯೋಜನಾ ಪ್ರದೇಶಗಳ ಭೇಟಿ ಕುರಿತು ಸ್ಥಳೀಯ ಸಮುದಾಯದೊಂದಿಗೆ ಸಮಾಲೋಚನೆಗಳು ಮತ್ತು ವಿನ್ಯಾಸದಲ್ಲಿ ಅಳವಡಿಸಲಾದ ಹೆಚ್ಚುವರಿ ಕ್ರಮಗಳ ಆಧಾರದ ಮೇಲೆ ಪಾದಚಾರಿ/ ವಾಹನ ಕ್ರಾಸಿಂಗ್ (ಮೇಲ್ಸೇತುವೆ/ಕೆಳಸೇತುವೆ) ಕುರಿತು ಪ್ರತ್ಯೇಕ ಅಧ್ಯಯನ ನಡೆಸಲಾಗುವುದು. ವಾಸಸ್ಥಳ ಮತ್ತು ನಿರ್ಮಿತ ಪ್ರದೇಶಗಳ ಮೂಲಕ ಪ್ರಸ್ತಾಪಿಸಲಾದ ಮರುಜೋಡಣೆ ಭಾಗಗಳಿಗೆ ವಿಶೇಷ ಗಮನ ನೀಡಲಾಗುವುದು;
- ರಚನಾತ್ಮಕ ಅಂಶಗಳನ್ನು (ಮೇಲ್ಸೇತುವೆಗಳು/ಅಂಡರ್‌ಪಾಸ್‌ಗಳು ಮತ್ತು ವಯಾಡಕ್ಟ್‌ಗಳ ಮೇಲೆ ಸೇತುವೆಗಳು ಸೇರಿದಂತೆ ಸುಮಾರು 23 ಹಳಿಗಳ ನಿರ್ಮಾಣ) ಸುರಕ್ಷತೆ ಮತ್ತು ಕಾರ್ಯನಿರ್ವಹಣೆಯನ್ನು ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಾನದಂಡಗಳಿಗೆ ಅನುಗುಣವಾಗಿ ವಿನ್ಯಾಸಗೊಳಿಸಲಾಗಿದೆ;

- ಯೋಜನೆಯ ಅನುಷ್ಠಾನ ಸಮಯದಲ್ಲಿ ಸಂಭಾವ್ಯ ಪ್ರತಿಕೂಲ ಪರಿಣಾಮಗಳ ಕುರಿತು ಸ್ಥಳೀಯ ಸಮುದಾಯ ಮತ್ತು ಚಾಲಕರ ಸಾಮರ್ಥ್ಯವನ್ನು ತಿಳಿದುಕೊಳ್ಳಲು ಮತ್ತು ಹೆಚ್ಚಿಸಲು ಸಮುದಾಯ ಆರೋಗ್ಯ ಮತ್ತು ಸುರಕ್ಷತೆಗಾಗಿ ಶೈಕ್ಷಣಿಕ ಕಾರ್ಯಕ್ರಮವನ್ನು ಅಭಿವೃದ್ಧಿಪಡಿಸಲಾಗುತ್ತದೆ.
- ರೈಲ್ವೇ ವಲಯದಲ್ಲಿ ಕೃಷಿ, ಸಮುದಾಯ ಕಾರ್ಯಕ್ರಮಗಳು ಮತ್ತು ಮನರಂಜನಾ ಚಟುವಟಿಕೆಗಳನ್ನು ಕೈಗೊಳ್ಳಲು ಅವಕಾಶವಿಲ್ಲ ಎಂಬುದನ್ನು ನಿವಾಸಿಗಳಿಗೆ ತಿಳಿಸಲಾಗುವುದು;
- ಸ್ಥಳೀಯ ಸಮುದಾಯ ಅಥವಾ ಸ್ಥಳೀಯ ಪರಿಸರದೊಂದಿಗೆ ಸಂಘರ್ಷ ತಡೆಗಟ್ಟಲು ಕಾರ್ಮಿಕ ನೀತಿ ಸಂಹಿತೆಗೆ ಸಹಿ ಮಾಡುವುದು ಹೇಗೆ ಎಂಬುದರ ಕುರಿತು ಕಾರ್ಮಿಕರಿಗೆ ತರಬೇತಿ ಮತ್ತು ಮಾರ್ಗದರ್ಶನ ನೀಡಲಾಗುವುದು;
- ಗುತ್ತಿಗೆದಾರರಿಗೆ ನಿಗದಿಪಡಿಸಿದ ಪ್ರದೇಶಗಳಲ್ಲಿರುವ ಮತ್ತು ಅವರು ಸಿದ್ಧಪಡಿಸಿದ ವಿನ್ಯಾಸ ಸ್ಥಳಗಳಿಗೆ ಅನಧಿಕೃತ ಪ್ರವೇಶ ತಡೆಗಟ್ಟಲಾಗುತ್ತದೆ. ಅದಕ್ಕಾಗಿ ಯೋಜನೆಯ ವಿನ್ಯಾಸ,

  ಯೋಜನಾ ನಿವೇಶನಗಳಿಗೆ ಪೊಲೀಸರು ಮತ್ತು ಗುತ್ತಿಗೆದಾರರು ನಿಯೋಜಿಸಿರುವ ಕಾವಲುಗಾರರಿಂದ ಕಣ್ಗಾವಲು ಸುಗಮಗೊಳಿಸಲಾಗುವುದು;
- ಸೂಕ್ತ ತರಬೇತಿಯೊಂದಿಗೆ ಸೂಕ್ತ ಪ್ರಮಾಣದಲ್ಲಿ ಅರ್ಹ ಭದ್ರತಾ ಸಿಬ್ಬಂದಿಯ ನೇಮಕ;
- ಸ್ಥಳೀಯ ಮನೆಗಳು, ಕಟ್ಟಡಗಳು ಮತ್ತು ಇತರ ಮೂಲಸೌಕರ್ಯಗಳ ಮೇಲೆ ಕಾರ್ಮಿಕರು ಯಾವುದಾದರೂ ಹಾನಿ ಮಾಡಿದರೆ ಆ ಹಾನಿಯ ನ್ಯಾಯಯುತ ಪರಿಹಾರವನ್ನು ಪ್ರವರ್ತಕರಿಗೆ ನೀಡಲು ಗುತ್ತಿಗೆದಾರರು ಬದ್ಧರಾಗಿರುತ್ತಾರೆ;
- ನಿರ್ಮಾಣ ಕಾರ್ಯ ಆರಂಭಿಸುವ ಮೊದಲು ನಗರ ಯೋಜನೆ, ನಗರ ಮೂಲಸೌಕರ್ಯ, ಸಮುದಾಯ ಕಾರ್ಯಗಳು, ಅರಣ್ಯ ನಿರ್ವಹಣೆ, ನೀರಿನ ರಕ್ಷಣೆ, ವಿದ್ಯುತ್ ಮತ್ತು ದೂರಸಂಪರ್ಕ, ನೈಸರ್ಗಿಕ ಅನಿಲ ಪೂರೈಕೆ ಜಾಲ ಮತ್ತು ಸಾಂಸ್ಕೃತಿಕ ಪರಂಪರೆಯ ರಕ್ಷಣೆ ಹೊತ್ತಿರುವ ಜವಾಬ್ದಾರಿಯುತ ಸಂಸ್ಥೆಗಳಿಂದ ಎಲ್ಲಾ ಅಗತ್ಯ ಅನುಮತಿಗಳನ್ನು ಪಡೆಯಲಾಗುತ್ತದೆ.;
- EPC ಗುತ್ತಿಗೆದಾರರು ESIA ನಲ್ಲಿ ಒಳಗೊಂಡಿರುವ ಎಲ್ಲಾ ಪ್ರಸ್ತಾವಿತ ಮುನ್ನೆಚ್ಚರಿಕೆ, ತಗ್ಗಿಸುವಿಕೆ ಮತ್ತು ಪರಿಹಾರ ಕ್ರಮಗಳನ್ನು ಪರಿಗಣನೆಗೆ ತೆಗೆದುಕೊಳ್ಳುತ್ತಾರೆ.

- ಸ್ಥಳೀಯ ನಿವಾಸಿಗಳಿಗೆ ಆಳವಾದ ಉತ್ಖನನ ಅಥವಾ ಭಾರೀ ಪ್ರಮಾಣದ ಕೆಲಸಗಳ ಬಗ್ಗೆ, ವಿಶೇಷವಾಗಿ ಹಳೆಯ ಕಟ್ಟಡಗಳು ಇರುವ ಸ್ಥಳಗಳ ಬಗ್ಗೆ ತಿಳಿಸಲಾಗುವುದು.
- ನಿರ್ಮಾಣದ ಸಮಯದಲ್ಲಿ ಅಸುರಕ್ಷಿತ ಕಟ್ಟಡಗಳ ನಿವಾಸಿಗಳನ್ನು ತಾತ್ಕಾಲಿಕವಾಗಿ ಸ್ಥಳಾಂತರಿಸಲು KRIDE ನಿಂದ ವ್ಯವಸ್ಥೆಗಳನ್ನು ಮಾಡುವುದರ ಜತೆಗೆ ಸಾಕಷ್ಟು ಸಮಯ ನೀಡಲಾಗುತ್ತದೆ.

**ಕಾರ್ಯಾಚರಣೆಯ ಹಂತ**: ಕಾರ್ಯಾಚರಣೆಯ ಸಮಯದಲ್ಲಿ ಹೆಚ್ಚಿನ ರೈಲು ದಟ್ಟಣೆಯಿಂದ ಸಮುದಾಯ ಸುರಕ್ಷತೆಯ ಮೇಲೆ ಪರಿಣಾಮ ಬೀರುವ ಸಂಭವವಿರುತ್ತದೆ. ರೈಲ್ವೆಯ ಅನಧಿಕೃತ ಕ್ರಾಸಿಂಗ್ ಮತ್ತು ವಿದ್ಯುದ್ದೀಕರಣದಿಂದ ಅಪಘಾತಗಳ ಅಪಾಯಗಳು ಸೇರಿದಂತೆ ಋಣಾತ್ಮಕ ಪರಿಣಾಮಗಳನ್ನು ತಪ್ಪಿಸಲು ಅಥವಾ ಕಡಿಮೆ ಮಾಡಲು ಕಾರ್ಯಾಚರಣೆಗೆ ಮೊದಲು ಮತ್ತು ಕಾರ್ಯಾಚರಣೆ ಸಮಯದಲ್ಲಿ ಈ ಕೆಳಗಿನ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತದೆ:

- ಎಲ್ಲಾ 37 ಲೆವೆಲ್ ಕ್ರಾಸ್ (LC) ಗಳನ್ನು ಮೇಲ್ಸೇತುವೆ ಅಥವಾ ಅಂಡರ್‌ಪಾಸ್‌ಗಳೊಂದಿಗೆ ಬದಲಾಯಿಸಲಾಗುತ್ತದೆ;
- ಮೂರನೇ ವ್ಯಕ್ತಿಗಳು ಮತ್ತು ಯಾವುದೇ ದಾಟುವಿಕೆಯನ್ನು ತಡೆಯಲು ಟ್ರ್ಯಾಕ್ ಇರುವ ಕಡೆ ಬೇಲಿ ಹಾಕಲಾಗುತ್ತದೆ. ನಿಗದಿಪಡಿಸಿದ ಮೇಲ್ಸೇತುವೆ/ಅಂಡರ್‌ಪಾಸ್‌ಗಳಲ್ಲಿ ದಾಟಲು ಅವಕಾಶ ಮಾಡಿಕೊಡಲಾಗುತ್ತದೆ.
- ಸಮುದಾಯ ಆರೋಗ್ಯ ಮತ್ತು ಸುರಕ್ಷತೆ ಕುರಿತು ಶೈಕ್ಷಣಿಕ ಕಾರ್ಯಕ್ರಮ ಅಭಿವೃದ್ಧಿಪಡಿಸಿ ಕಾರ್ಯಗತಗೊಳಿಸಲಾಗುವುದು.
- ಸುರಕ್ಷತಾ ಕಾರ್ಯಕ್ಷಮತೆಯ ಮಾಹಿತಿಯನ್ನು (ಅಪಘಾತದ ತನಿಖೆಗಳು ಮತ್ತು ಒಟ್ಟಾರೆ ಅಂಕಿಅಂಶಗಳು) ಸಾರ್ವಜನಿಕವಾಗಿ ಲಭ್ಯವಾಗುವಂತೆ ಮಾಡಲಾಗುತ್ತದೆ. ಸುರಕ್ಷತಾ ಕಾರ್ಯಕ್ಷಮತೆ ಮತ್ತು ಸುರಕ್ಷತೆ ಸಂಬಂಧಿತ ಇತರೆ ಡೇಟಾ ಅಭಿವೃದ್ಧಿಪಡಿಸಲಾಗುತ್ತದೆ.
- ಕಾರ್ಯಾಚರಣೆಗೆ ಮೊದಲು ಅಭಿವೃದ್ಧಿಪಡಿಸಬೇಕಾದ ಅಪಾಯದ ಮೌಲ್ಯಮಾಪನದ ವಿಧಾನ;
- ಉಪನಗರ ರೈಲ್ವೆ ಕುರಿತ ಮಾಹಿತಿಯನ್ನು ಸಾರ್ವಜನಿಕವಾಗಿ ಲಭ್ಯವಿರುವಂತೆ ಮಾಡುವುದು- ಉದಾಹರಣೆಗೆ ವೆಬ್‌ಸೈಟ್ ಅಥವಾ ಪತ್ರಿಕೆಗಳ ಮೂಲಕ ಬಹಿರಂಗಪಡಿಸುವುದು.
- ಯೋಜನೆಯ ಕಾರಿಡಾರ್ ವ್ಯಾಪ್ತಿಯಲ್ಲಿ ಇರುವ ಜನರಿಗೆ ನಿರ್ಮಾಣ ಮತ್ತು ಕಾರ್ಯಾಚರಣೆ ಸಮಯದಲ್ಲಿ ಸುರಕ್ಷತೆ ಕುರಿತು ಅರಿವು ಮೂಡಿಸಲು RAPIC ಕಾರ್ಯಕ್ರಮ ಆಯೋಜಿಸಲಿದೆ.
- ದುರ್ಬಲ ವರ್ಗಗಳ ಕಲ್ಯಾಣ ಮತ್ತು ರಕ್ಷಣೆಯನ್ನು ಖಚಿತಪಡಿಸಿಕೊಳ್ಳಲು (EWCD&T) GAP ನಲ್ಲಿ ನಿಬಂಧನೆಗಳನ್ನು ನೀಡಲಾಗಿದ್ದು, ಈ GAP ಅನ್ನು KRIDE ನಿಂದ ಜಾರಿಗೊಳಿಸಲಾಗುತ್ತದೆ.

## 1.2. ಕಾರ್ಮಿಕರ ಮಹಾಪೂರದಿಂದಾಗುವ ಸಂಘರ್ಷಗಳು

### 1.2.1. ಉಪಶಮನ ಕ್ರಮಗಳು

**ನಿರ್ಮಾಣ ಹಂತ**: ನಿರ್ಮಾಣ ಹಂತದಲ್ಲಿ ಪ್ರದೇಶದ ಹೊರಗಿನ ಕೆಲಸಗಾರರ ಹಾಜರಾತಿಯು ಸ್ಥಳೀಯ ಸಮುದಾಯಗಳಲ್ಲಿ ಸಂಘರ್ಷವನ್ನು ಉಂಟುಮಾಡಬಹುದು ಅಥವಾ ಹೆಚ್ಚಿಸಬಹುದು. ಸ್ಥಳೀಯ ಜನರೊಂದಿಗೆ ಹೋಲಿಸಿದರೆ ಕಾರ್ಮಿಕರ ವಿಭಿನ್ನ ಸಾಂಸ್ಕೃತಿಕ ಮತ್ತು ಸಾಮಾಜಿಕ ಹಿನ್ನೆಲೆಯು ಸಂಭವನೀಯ ಸಮಸ್ಯೆಗಳಿಗೆ ಕಾರಣವಾಗಬಹುದು (ಉದಾಹರಣೆಗೆ ಮೌಖಿಕ ಸಂಘರ್ಷಗಳು, ಲಿಖಿತ ಮತ್ತು ಮೌಖಿಕ ಬೆದರಿಕೆಗಳು ಮತ್ತು ದೈಹಿಕ ಹಿಂಸೆ). ನಿರ್ಮಾಣ ಚಟುವಟಿಕೆಗಳು ಸ್ಥಳೀಯ ಜನರ ಸಾಮಾನ್ಯ ಜೀವನಕ್ಕೆ ಅಡ್ಡಿಪಡಿಸುವುದರೊಂದಿಗೆ ಸಮುದಾಯದಲ್ಲಿ ಹೆಚ್ಚಿನ ಉದ್ವಿಗ್ನತೆ ಮತ್ತು ಒತ್ತಡಕ್ಕೆ ಕಾರಣವಾಗಬಹುದು. ಸಾಮಾನ್ಯ ಜೀವನಕ್ಕೆ

ಅಡ್ಡಿ ಸಂಭವಿಸಬಹುದು: ಜೀವ ಮತ್ತು ಭೂಮಿ ಕಳೆದುಕೊಳ್ಳುವುದು, ಬಳಸು ರಸ್ತೆಗಳು ಮತ್ತು ಪಾತ್ ವೇ ಗಳಿಂದ ಪ್ರಯಾಣದ ಸಮಯವನ್ನು ಹೆಚ್ಚಿಸುವುದು, ಸ್ಥಳೀಯ ರಸ್ತೆಗಳಲ್ಲಿ ಭಾರೀ ವಾಹನಗಳ ಸಂಚಾರ, ನಿರ್ಮಾಣ ಪ್ರದೇಶದೊಳಗೆ ನಿರ್ಬಂಧಿತ ಸಂಚಾರ, ಸಮುದಾಯಗಳ ಮಧ್ಯೆ ಕಾರ್ಮಿಕರ ಶಿಬಿರಗಳ ಉಪಸ್ಥಿತಿ ಇತ್ಯಾದಿ... ನಕಾರಾತ್ಮಕ ಪರಿಣಾಮಗಳನ್ನು ತಪ್ಪಿಸಲು ಮತ್ತು ಕಡಿಮೆ ಮಾಡಲು ನಿರ್ಮಾಣದ ಮೊದಲು ಮತ್ತು ನಿರ್ಮಾಣ ಸಮಯದಲ್ಲಿ ಈ ಕೆಳಗಿನ ಉಪಶಮಕ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತದೆ:

- ಸ್ಥಳೀಯ ಸಮುದಾಯದ ಸದಸ್ಯರು ಮತ್ತು ಪರಿಸರದೊಂದಿಗೆ ಸಂಘರ್ಷ ತಪ್ಪಿಸಲು ಕಾರ್ಮಿಕ ನೀತಿ ಸಂಹಿತೆಗೆ ಸಹಿ ಮಾಡುವುದು ಹೇಗೆ ಎಂಬುದರ ಕುರಿತು ಕಾರ್ಮಿಕರಿಗೆ ತರಬೇತಿ ಮತ್ತು ಮಾರ್ಗದರ್ಶನ ನೀಡಲಾಗುತ್ತದೆ;
- ಸಮುದಾಯಗಳಿಂದ ದೂರದಲ್ಲಿ ಕಾರ್ಮಿಕ ಶಿಬಿರಗಳನ್ನು ನಿಗದಿಪಡಿಸುವುದು;
- ಸ್ಥಳೀಯ ಉದ್ಯೋಗಿಗಳಿಗೆ ಸಾಧ್ಯವಾದಷ್ಟು ಪ್ರಮಾಣದಲ್ಲಿ ಉದ್ಯೋಗ ಖಾತರಿಪಡಿಸಲು **ಸ್ಥಳೀಯ ಉದ್ಯೋಗಿಗಳ ನೇಮಕಾತಿ ಯೋಜನೆ**ಯನ್ನು ಅಭಿವೃದ್ಧಿಪಡಿಸಲಾಗುವುದು;
- ನಿರ್ಮಾಣ ಸ್ಥಳಗಳ ಸುತ್ತಲಿನ ಪ್ರದೇಶದಲ್ಲಿ ಕಾರ್ಮಿಕರ ಓಡಾಟ ನಿಯಂತ್ರಣ. KRIDE ಮತ್ತು ಗುತ್ತಿಗೆದಾರರ ನಡುವಿನ ಒಪ್ಪಂದದ ಮೂಲಕ ಓಡಾಟದ ವಿಧಾನವನ್ನು ಉತ್ತಮವಾಗಿ ಸಂಘಟಿಸುವುದು ಮತ್ತು ಗೊತ್ತುಪಡಿಸುವುದು;
- ಸಾರ್ವಜನಿಕ/ಆಡಳಿತದಲ್ಲಿ (ಸ್ಥಳೀಯ ಆಡಳಿತ, ಮಾಧ್ಯಮಗಳು, ಸರ್ಕಾರೇತರ ಸಂಸ್ಥೆಗಳು) ಜಾಗೃತಿ ಹೆಚ್ಚಿಸುವುದು ಸಮುದಾಯದ ಉದ್ವಿಗ್ನತೆ ಕಡಿಮೆ ಮಾಡುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ತಮ್ಮ ಸಾಮಾನ್ಯ ಜೀವನಕ್ಕೆ ತೊಂದರೆಯಾಗುವ ಕುರಿತು ನಿವಾಸಿಗಳಿಂದ ಬರುವ ಕುಂದುಕೊರತೆಗಳನ್ನು ನಿಭಾಯಿಸಲು ಸಮರ್ಥರಾಗಿರಬೇಕು. ನಿರ್ಮಾಣ ಕಾರ್ಯಗಳು ನಡೆಯುವ ಪ್ರದೇಶದಲ್ಲಿ ಕಾಣಿಸಿಕೊಳ್ಳುವ ಪ್ರಾತಿನಿಧಿಕ ಅಡಚಣೆಗಳಿಗೆ ಜನರು ಹೊಂದಿಕೊಳ್ಳಬೇಕು.

**ಕಾರ್ಯಾಚರಣೆಯ ಹಂತ**: ಕಾರ್ಯಾಚರಣೆಯ ಹಂತದಲ್ಲಿ, ರೈಲ್ವೇ ಕ್ರಾಸಿಂಗ್‌ಗಳು ಮತ್ತು ವಿದ್ಯುದೀಕರಣದ ವೇಳೆ ಅಪಘಾತಗಳು ಸಂಭವಿಸುವ ಅಪಾಯಗಳು ಹೆಚ್ಚುವ ಬಗ್ಗೆ ಸಮುದಾಯದ ಕಡೆಯಿಂದ ಪ್ರತಿಕ್ರಿಯೆಗಳು ವ್ಯಕ್ತವಾಗುತ್ತವೆ. ರೈಲು ಕಾರ್ಯಾಚರಣೆಯಿಂದ ಉಂಟಾಗುವ ಶಬ್ದ ಮತ್ತು ಕಂಪನಗಳಿಂದ ರೈಲ್ವೇ ಮಾರ್ಗದ ಹತ್ತಿರದಲ್ಲಿರುವ ಸಮುದಾಯಗಳು ತೊಂದರೆಗೊಳಗಾಗುತ್ತವೆ. ರೈಲ್ವೇಗೆ ಸಂಬಂಧಿಸಿದಂತೆ ಬದಲಾದ ಜೀವನ ಪರಿಸ್ಥಿತಿಗಳಿಗೆ ಹೊಂದಿಕೊಳ್ಳುವವರೆಗೆ ಇಂತಹವುಗಳನ್ನು ಹೆಚ್ಚಾಗಿ ನಿರೀಕ್ಷಿಸಬಹುದಾಗಿದೆ. ಸಮುದಾಯ ಆರೋಗ್ಯ, ಸುರಕ್ಷತೆ ಮತ್ತು ಭದ್ರತೆಗಾಗಿ ಪ್ರಸ್ತಾಪಿಸಲಾದ ಶಮನಗೊಳಿಸುವ ಕ್ರಮಗಳು ಮತ್ತು ಉಪನಗರ ರೈಲ್ವೆಯ ಕಾರ್ಯಾಚರಣೆಗೆ ಸಮುದಾಯ ಪ್ರತಿಕ್ರಿಯೆಗೆ ಸಂಬಂಧಿಸಿದ ಜೀವನದ ಗುಣಮಟ್ಟ ಸುರಕ್ಷತೆ ಪರಿಣಾಮಗಳ ಅಡಿಯಲ್ಲಿ ವಿವರಿಸಲಾದ ಉಪಶಮನ ಕ್ರಮಗಳು.

## 1.3. ಸಮಾಲೋಚನೆ ಮತ್ತು ಪಾಲ್ಗೊಳ್ಳುವಿಕೆ

ಸಾರ್ವಜನಿಕ ಸಮಾಲೋಚನೆಯು ಯೋಜನೆಯ ಅವಧಿ, ಯೋಜನೆಯ ತಯಾರಿ, ಅನುಷ್ಠಾನ, ಕಾರ್ಯಾಚರಣೆಯ ಹಂತಗಳಲ್ಲಿ ನಿರಂತರ ಪ್ರಕ್ರಿಯೆಯಾಗಿರುತ್ತದೆ. ಯಾವುದೇ ಮೂಲಸೌಕರ್ಯ ಅಭಿವೃದ್ಧಿ ಯೋಜನೆಯ ಸಮರ್ಥನೀಯತೆಯಲ್ಲಿ ಸಾರ್ವಜನಿಕ ಸಮಾಲೋಚನೆಯು ಪ್ರಮುಖ ಪಾತ್ರ ವಹಿಸುವುದರ ಜತೆಗೆ ಯೋಜನೆಯಲ್ಲಿ ಪಾಲ್ಗೊಳ್ಳುವುದನ್ನು ಅವಲಂಬಿಸಿರುತ್ತದೆ. ಯೋಜನಾ ಹಂತದಲ್ಲಿ ಜನರ ಸಹಭಾಗಿತ್ವವನ್ನು ಖಚಿತಪಡಿಸಿಕೊಳ್ಳಲು ಸಾರ್ವಜನಿಕ ಸಮಾಲೋಚನೆ ಮತ್ತು ಭಾಗವಹಿಸುವಿಕೆಯನ್ನು ನಿರಂತರ ಪ್ರಕ್ರಿಯೆಯಾಗಿ ಪರಿಗಣಿಸಲು, ಯೋಜನೆ ಸಿದ್ಧಪಡಿಸುವ ವಿವಿಧ

ಹಂತಗಳಲ್ಲಿ ಹಲವಾರು ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ. ಸಾರ್ವಜನಿಕ ತಿಳುವಳಿಕೆಯನ್ನು ಉತ್ತೇಜಿಸುವ ಉದ್ದೇಶದಿಂದ ಹಾಗೂ ಸ್ಥಳೀಯ ಅಗತ್ಯಗಳು, ಸಮಸ್ಯೆಗಳು ಮತ್ತು ಪುನರ್ವಸತಿಯ ನಿರೀಕ್ಷೆಗಳಂತಹ ಅಭಿವೃದ್ಧಿಗೆ ಸಂಬಂಧಿಸಿದ ಸಮಸ್ಯೆಗಳ ಫಲಪ್ರದ ಪರಿಹಾರಗಳ ಕುರಿತು ವಿವಿಧ ಪಾಲುದಾರರು ಅಂದರೆ, ಸ್ಥಳಾಂತರಗೊಂಡ ವ್ಯಕ್ತಿಗಳು, ಸರ್ಕಾರಿ ಅಧಿಕಾರಿಗಳು, ಸ್ಥಳೀಯ ಸಮುದಾಯದ ಮುಖಂಡರು, ಜನರು ಮತ್ತು ಚುನಾಯಿತ ಜನಪ್ರತಿನಿಧಿಗಳನ್ನು ಒಳಗೊಂಡಂತೆ ಸಮುದಾಯ ಸಭೆಗಳ ಮೂಲಕ ಸಮಾಲೋಚಿಸಲಾಗುತ್ತದೆ. ಗುಂಪು ಚರ್ಚೆಗಳು, ವೈಯಕ್ತಿಕ ಸಂದರ್ಶನಗಳು ಮತ್ತು ಔಪಚಾರಿಕ ಸಮಾಲೋಚನೆಗಳನ್ನು ಕೇಂದ್ರೀಕರಿಸಲಾಗುತ್ತದೆ. ಮೂಲಕ ಯೋಜನೆಯಿಂದ ಸ್ಥಳಾಂತರಗೊಂಡ ಜನರು ಮತ್ತು ಇತರ ಮಧ್ಯಸ್ಥಗಾರರಿಗೆ ಮಾಹಿತಿ, ಸಮಾಲೋಚನೆ ಮತ್ತು ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಸಕ್ರಿಯವಾಗಿ ಭಾಗವಹಿಸಲು ಅವಕಾಶ ನೀಡಲಾಗುತ್ತದೆ ಎಂಬುದನ್ನು ಖಚಿತಪಡಿಸಿಕೊಳ್ಳಲಾಗುತ್ತದೆ. ಯೋಜನೆಯ ಫಲಿತಾಂಶಗಳು ಮತ್ತು ಪರಿಣಾಮಗಳು, ಅನುಷ್ಠಾನ ಮತ್ತು ಮೇಲ್ವಿಚಾರಣೆಗಳನ್ನು ಯೋಜನೆಯುದ್ದಕ್ಕೂ ಮೌಲ್ಯಮಾಪನದ ಸಮಯದಲ್ಲಿ ಮಾಡಲಾಗುತ್ತದೆ.

ಪ್ರಸ್ತಾವಿತ ಯೋಜನೆಯಿಂದ ತೊಂದರೆಗೊಳಗಾಗುವ ಜನರ ಜತೆಗಿನ ಸಮಾಲೋಚನೆ ಮತ್ತು ಅವರ ಪಾಲ್ಗೊಳ್ಳುವಿಕೆಯ ಮಹತ್ವವನ್ನು ಗಮನದಲ್ಲಿಟ್ಟುಕೊಂಡು ಸಾಮಾಜಿಕ ಮತ್ತು ಪರಿಸರ ಮೌಲ್ಯಮಾಪನ ಪ್ರಕ್ರಿಯೆಯ ಅವಿಭಾಜ್ಯ ಅಂಗವಾಗಿ ಸಾರ್ವಜನಿಕ ಸಮಾಲೋಚನೆಯನ್ನು ಪರಿಗಣಿಸಲಾಗಿದೆ. ಅಭಿವೃದ್ಧಿ ನಿರ್ಧಾರಗಳನ್ನು ತೆಗೆದುಕೊಳ್ಳುವ ಮೊದಲು ಮತ್ತು ನಂತರ ಅವುಗಳ ಉದ್ದೇಶಗಳ ಬಗ್ಗೆ ಮಧ್ಯಸ್ಥಗಾರರಿಗೆ ತಿಳಿಸಲು ಮತ್ತು ಶಿಕ್ಷಣ ನೀಡಲು ಸಮಾಲೋಚನೆಯನ್ನು ಸಾಧನವಾಗಿ ಬಳಸಲಾಗುತ್ತದೆ. ಇದು ಯೋಜನೆಗೆ ಸಂಬಂಧಿಸಿದ ಸಮಸ್ಯೆಗಳು ಮತ್ತು ಪರಿಣಾಮ ಬೀರುವ ಸಾಧ್ಯತೆಯಿರುವ ಜನರ ಅಗತ್ಯಗಳನ್ನು ಗುರುತಿಸುವಲ್ಲಿ ಸಹಾಯ ಮಾಡುತ್ತದೆ. ಈ ಪಾಲ್ಗೊಳ್ಳುವಿಕೆ ಪ್ರಕ್ರಿಯೆಯು ಬದಲಾವಣೆಗೆ ಸಾರ್ವಜನಿಕ ಪ್ರತಿರೋಧವನ್ನು ಕಡಿಮೆ ಮಾಡಲು ಸಹಾಯ ಮಾಡುತ್ತದೆ. ಅಲ್ಲದೆ, ನಿರ್ಧಾರ ತೆಗೆದುಕೊಳ್ಳುವ ಪ್ರಕ್ರಿಯೆಯಲ್ಲಿ ಸ್ಥಳೀಯರ ಪಾಲ್ಗೊಳ್ಳುವಿಕೆಯನ್ನು ಸಕ್ರಿಯಗೊಳಿಸುತ್ತದಗೆ. ಯೋಜನೆಯ ಅನುಕೂಲಗಳ ಬಗ್ಗೆ ಸಮುದಾಯದಲ್ಲಿ ಜಾಗೃತಿ ಮೂಡಿಸುವ ಮೂಲಕ ಸಂಭವನೀಯ ಪ್ರತಿಕೂಲ ಪರಿಣಾಮಗಳನ್ನು ಕಡಿಮೆ ಮಾಡುವ ಮತ್ತು ಯೋಜನೆಯ ತ್ವರಿತ ಅನುಷ್ಠಾನವನ್ನು ಕಾರ್ಯಗತಗೊಳಿಸುವ ಉದ್ದೇಶಗಳೊಂದಿಗೆ ಯೋಜನಾ ಪ್ರದೇಶಗಳಲ್ಲಿ ಆರಂಭಿಕ ಸಾರ್ವಜನಿಕ ಸಮಾಲೋಚನೆಯನ್ನು ಕೈಗೊಳ್ಳಲಾಗುತ್ತದೆ.

ಯೋಜನೆಯ ಬಗ್ಗೆ ಮಧ್ಯಸ್ಥಗಾರರ ಅನುಭವಗಳನ್ನು ಅರ್ಥಮಾಡಿಕೊಳ್ಳಲು ವಿವಿಧ ಮಧ್ಯಸ್ಥಗಾರರೊಂದಿಗೆ ಸಮಾಲೋಚನೆ ನಡೆಸಲಾಯಿತು. ಸಲಹೆಗಾರರು ಈ ಅಧ್ಯಯನದಲ್ಲಿ ಸಂದರ್ಶನಗಳು, ಕೇಂದ್ರಬಿಂದುವಾಗಿ ಗುಂಪು ಸಮಾಲೋಚನೆ, ಪ್ರಮುಖ ಮಾಹಿತಿದಾರರ ಚರ್ಚೆ, ಸಾರ್ವಜನಿಕ ಸಭೆಗಳು ಮುಂತಾದ ವಿವಿಧ ಉಪಕ್ರಮಗಳನ್ನು ಅಮನುಸರಿಸಿದ್ದಾರೆ. ಅಧ್ಯಯನದ ಸಮಯದಲ್ಲಿ ಸಲಹೆಗಾರರು ನಡೆಸಿದ ಪ್ರಮುಖ ಸಮಾಲೋಚನೆಗಳು ಈ ಕೆಳಗಿನಂತಿವೆ:

### **1.3.1.** ಸಾಮಾನ್ಯ ಸಮಾಲೋಚನೆಗಳು ಮತ್ತು ಪ್ರಮುಖ ಮಾಹಿತಿದಾರರ ಸಂದರ್ಶನಗಳು.

ಪ್ರಮುಖ ಮಾಹಿತಿದಾರರು ಮತ್ತು ಯೋಜನೆಯಿಂದ ಬಾಧಿತ ಕುಟುಂಬಗಳೊಂದಿಗೆ ನಡೆಸಿದ ಸಮಾಲೋಚನೆಗಳ ಸಾರಾಂಶವನ್ನು ಕೆಳಗಿನ ಕೋಷ್ಟಕದಲ್ಲಿ ನೀಡಲಾಗಿದೆ. ನಂತರ ಸಭೆಗಳ ನಡಾವಳಿಗಳನ್ನು ಅನುಬಂಧ D ನಲ್ಲಿ ಲಗತ್ತಿಸಲಾಗಿದೆ.

**ಕೋಷ್ಟಕ 10. ಪ್ರಮುಖ ಮಾಹಿತಿದಾರರೊಡನೆ ನಡೆಸಿದ ಸಮಾಲೋಚನೆಗಳ ಸಂಕ್ಷಿಪ್ತ ವಿವರ ಮತ್ತು ಪಿಎಎಚ್ ಎಸ್**

| ಸ್ಥಳ ಮತ್ತು ಪ್ರತಿವಾದಿಗಳ ವಿಧ | ದಿನಾಂಕ & ಸಮಯ | ಭಾಗವಹಿಸಿದವರ ಸಂಖ್ಯೆ ಪುರುಷ | ಮಹಿಳೆ | ಚರ್ಚಿಸಿದ ವಿಷಯಗಳು | ಮಧ್ಯಸ್ಥಗಾರರ ಸಲಹೆಗಳು/ ಮನವಿಗಳು/ ಬೇಡಿಕೆಗಳು ಮತ್ತು ಕೈಗೊಂಡ ಕ್ರಮಗಳು |
|---|---|---|---|---|---|
| ಪ್ರಮುಖ ಮಾಹಿತಿದಾರ ಆಯುಕ್ತರು- ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ, ಬೆಂಗಳೂರು | 17 ಮಾರ್ಚ್ 2022, ಸಂಜೆ 4 | 2 | - | ಕೊಳಗೇರಿ ನಿವಾಸಿಗಳ ಪುನರ್ವಸತಿ ಕುರಿತ ಪ್ರಾಯೋಗಿಕ ತೊಂದರೆಗಳ ಕುರಿತು ಚರ್ಚೆ ನಡೆಸಲಾಯಿತು. | ಶ್ರೀ ಬಿ ವೆಂಕಟೇಶ್, ಆಯುಕ್ತರು KSDB ಅವರು, KSDB, KRIDE ಅಧಿಕಾರಿಗಳು ಮತ್ತು ಕೊಳಗೇರಿ ಇರುವ ಕ್ಷೇತ್ರದ (ಮಲ್ಲೇಶ್ವರಂ ಕ್ಷೇತ್ರ) ಚುನಾಯಿತ ಪ್ರತಿನಿಧಿಗಳೊಂದಿಗೆ ಜಂಟಿ ಸಭೆ ನಡೆಸಲು ಸಲಹೆ ಮಾಡಿದರು. ಈ ಕುರಿತು KRIDE ಗೆ ತಮಾಹಿತಿ ನೀಡಲಾಗಿದೆ. ಅಲ್ಲದೆ, SEP ಯಲ್ಲಿ ಸಂಯೋಜಿಸಲಾಗಿದೆ. |
| ವಿಶೇಷ ಭೂಸ್ವಾಧೀನಾಧಿಕಾರಿ ಕಚೇರಿಯ ವ್ಯವಸ್ಥಾಪಕರು, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ, ಬೆಂಗಳೂರು | 25 ಮಾರ್ಚ್ 2022, ಮಧ್ಯಾಹ್ನ 2 | 1 | - | ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ಕಾಯ್ದೆ 1966 (KIADA)ರ ಪ್ರಕಾರ ವ್ಯಾಪ್ತಿಗೆ ಒಳಪಡದ ಹಕ್ಕುದಾರರಲ್ಲದವರಿಗೆ ಪರಿಹಾರ ಮತ್ತು ಪುನರ್ವಸತಿ | ಅರ್ಹತಾ ಮ್ಯಾಟ್ರಿಕ್ಸ್ ಅಭಿವೃದ್ಧಿಪಡಿಸಲು ಮತ್ತು KRIDE ಕಚೇರಿಯಿಂದ ಮೊತ್ತವನ್ನು ಪಾವತಿಸಲು ಸಾಂಸ್ಥಿಕ ವ್ಯವಸ್ಥೆಗಳನ್ನು ಮಾಡುವಂತೆ ಸೂಚಿಸಲಾಗಿದೆ. ಅರ್ಹ PAP ಗಳಿಗೆ ಅರ್ಹತೆಯ ಮ್ಯಾಟ್ರಿಕ್ಸ್ ಪ್ರಕಾರ ಪುನರ್ವಸತಿ ಸೌಲಭ್ಯ ವಿತರಿಸಲು KRIDE ನಲ್ಲಿ ಸಾಂಸ್ಥಿಕ ವ್ಯವಸ್ಥೆಯನ್ನು ಮಾಡಲಾಗುತ್ತಿದೆ. |
| ವಿಶೇಷ ಭೂಸ್ವಾಧೀನ ಅಧಿಕಾರಿ, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ, ಬೆಂಗಳೂರು | 11 ಏಪ್ರಿಲ್ 2022, ಮಧ್ಯಾಹ್ನ 2 | 2 | 0 | ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ಕಾಯ್ದೆ 1966 (KIADA)ರ ಪ್ರಕಾರ ವ್ಯಾಪ್ತಿಗೆ ಒಳಪಡದ ಹಕ್ಕುದಾರರಲ್ಲದವರಿಗೆ ಪರಿಹಾರ ಮತ್ತು ಪುನರ್ವಸತಿ | |

| | | | | | |
|---|---|---|---|---|---|
| ವಸತಿ ಮತ್ತು ವಸತಿ ಒಳಗೊಂಡ ವಾಣಿಜ್ಯ ಮಾಲೀಕರು. ಮೋಹನ್ ಕುಮಾರ್ ನಗರ, ಕಾರಿಡಾರ್ 2 (ಇದು ಕೊಳಗೇರಿ ಅಲ್ಲ) | 17 ಮಾರ್ಚ್ 2022, ಮಧ್ಯಾಹ್ನ 2 | 9 | 2 | ಹಾನಿಗೊಳಗಾದ ಭೂಮಿ ಮತ್ತು ಕಟ್ಟಡಕ್ಕೆ ಚಾಲ್ತಿಯಲ್ಲಿರುವ ಮಾರುಕಟ್ಟೆ ದರದಲ್ಲಿ ಪರಿಹಾರ ಪ್ಯಾಕೇಜ್ ನೀಡಲು ಸೂಚಿಸಿದರು. ಕಟ್ಟಡಗಳ ಬಾಡಿಗೆದಾರರು ತಮ್ಮ ಚಟುವಟಿಕೆಗಳನ್ನು ಸ್ಥಳಾಂತರಿಸಲು ಸೂಕ್ತ ಸ್ಥಳ ಹುಡುಕಲು ಸಾಕಷ್ಟು ಮುಂಗಡವಾಗಿ ಸೂಚನೆ ನೀಡುವಂತೆ ಕೋರಿದರು. ಸ್ವಾಧೀನ ಪ್ರಕ್ರಿಯೆ ಮತ್ತು ಪರಿಹಾರ ನಿಗದಿಪಡಿಸುವಲ್ಲಿ ಪಾರದರ್ಶಕತೆಯನ್ನು ಕಾಪಾಡಿಕೊಳ್ಳಲು PAP ಗಳು ವಿನಂತಿಸಿದವು. | ಅರ್ಹತೆಯ ಮ್ಯಾಟ್ರಿಕ್ಸ್‌ನಲ್ಲಿ ಪರಿಗಣಿಸಲಾಗಿದೆ. ಪಾರದರ್ಶಕತೆಗೆ ಸಂಬಂಧಿಸಿದಂತೆ ಭೂಸ್ವಾಧೀನ ಕಾಯ್ದೆ ಪ್ರಕಾರ ಸ್ವಾಧೀನಪಡಿಸಿಕೊಳ್ಳಲಾಗುತ್ತಿದೆ. |
| ಘೋಷಿತ ಸ್ಲಂನ ವಸತಿ ಮಾಲೀಕರು | 18 ಮಾರ್ಚ್ 2022, ಸಂಜೆ 4 | 12 | 0 | ಆಸ್ತಿಗಳ ನಷ್ಟ ಮತ್ತು ಜೀವನೋಪಾಯದ ನಷ್ಟ ಸೇರಿದಂತೆ ಸಂಭವನೀಯ ಸಾಮಾಜಿಕ ಸಮಸ್ಯೆಗಳನ್ನು ಗುರುತಿಸುವುದು. | ಈ ಸ್ಥಳದಿಂದ ಮತ್ತೊಂದು ನಿವೇಶನಕ್ಕೆ ಸ್ಥಳಾಂತರಿಸುವ ಕುರಿತು ಎರಡು ವಿಭಿನ್ನ ಅಭಿಪ್ರಾಯಗಳಿವೆ. ಕೆಲವರು ಪ್ರಸ್ತುತ ಸ್ಥಳದಲ್ಲಿ ಅನುಭವಿಸುತ್ತಿರುವ 'ಪಟ್ಟಾ ಭೂಮಿ'(ಕಾನೂನು ಮಾಲೀಕತ್ವ) ಅದೇ ಸ್ಥಳಕ್ಕೆ ಪಡೆದರೆ ಸ್ಥಳಾಂತರಕ್ಕೆ ಸಿದ್ಧರಾಗಿದ್ದಾರೆ. |

| ಸ್ಥಳ ಮತ್ತು ಪ್ರತಿವಾದಿಗಳ ವಿಧ | ದಿನಾಂಕ & ಸಮಯ | ಭಾಗವಹಿಸಿದವರ ಸಂಖ್ಯೆ | | ಚರ್ಚಿಸಿದ ವಿಷಯಗಳು | ಮಧ್ಯಸ್ಥಗಾರರ ಸಲಹೆಗಳು/ ಮನವಿಗಳು/ ಬೇಡಿಕೆಗಳು ಮತ್ತು ಕೈಗೊಂಡ ಕ್ರಮಗಳು |
|---|---|---|---|---|---|
| | | ಪುರುಷ | ಮಹಿಳೆ | | |
| ಶ್ರೀ ಜಯರಾಮ್ ಕಾಲೋನಿ, ಮತ್ತಿಕೆರೆ ಕಾರಿಡಾರ್ 2 | | | | ಪರಿಹಾರ ಮತ್ತು ಪುನರ್ವ್ಯವಸ್ಥೆ ಮತ್ತು ಪುನರ್ವಸತಿ ಕುರಿತಾದ ನಿರೀಕ್ಷೆ. | ಪುನರ್ವಸತಿ ಸ್ಥಳವು ಹಾಲಿ ಅಸ್ತಿತ್ವದಲ್ಲಿರುವ ಸ್ಥಳಕ್ಕೆ ಸಮೀಪದಲ್ಲಿರಬೇಕೆಂದು ಕೆಲವರು ಸಲಹೆ ನೀಡಿದರು.<br><br>ಸ್ಥಳಾಂತರ ತಪ್ಪಿಸಲು ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ, ಚುನಾಯಿತ ಪ್ರತಿನಿಧಿಗಳು ಸೇರಿದಂತೆ ಎಲ್ಲಾ ಏಜೆನ್ಸಿಗಳನ್ನು ಸಂಪರ್ಕಿಸುತ್ತಿದ್ದೇವೆ ಎಂದು ಜನರು ತಿಳಿಸಿದರು.<br><br>ಪುನರ್ವಸತಿಗಾಗಿ ನಿಬಂಧನೆಗಳನ್ನು ಅರ್ಹತೆಯ ಮ್ಯಾಟ್ರಿಕ್ಸ್ ನಲ್ಲಿ ಸೇರಿಸಲಾಗಿದೆ ಮತ್ತು PAP ಗಳಿಗೆ ತಿಳಿಸಲಾಗಿದೆ. |

| | | | | | |
|---|---|---|---|---|---|
| ನಾಯಂಡಹಳ್ಳಿ ರೈಲ್ವೆ ಗೇಟ್ ಹತ್ತಿರ, ವಿನಾಯಕ ಎಕ್ಸ್‌ಟೆನ್ಶನ್‌ನ ಅಧಿಸೂಚಿತವಲ್ಲದ ಸ್ಲಂನ ವಸತಿ ಹಕ್ಕು ಹೊಂದಿರದವರು. ಕಾರಿಡಾರ್ 3 (ಇದು ಕೃಷ್ಣದೇವರಾಯ ನಿಲ್ದಾಣದ ಭಾಗವಾಗಿದೆ) ಈ ನಿವಾಸಿಗಳು ಅವರು ವಾಸಿಸುವ ಸ್ಥಳಗಳನ್ನು ಹೊಂದಿದ್ದಾರೆ. ಕೊಳಗೇರಿಯು ಕಾರಿಡಾರ್‌ನ ಸಮೀಪದಲ್ಲಿದೆ. | 21 ಮಾರ್ಚ್ 2022, ಮಧ್ಯಾಹ್ನ 1 | 6 | 8 | ಆಸ್ತಿಗಳ ನಷ್ಟ ಮತ್ತು ಜೀವನೋಪಾಯದ ನಷ್ಟ ಸೇರಿದಂತೆ ಸಂಭವನೀಯ ಸಾಮಾಜಿಕ ಸಮಸ್ಯೆಗಳನ್ನು ಗುರುತಿಸುವುದು. ಪರಿಹಾರ, ಪುನರ್ವ್ಯವಸ್ಥೆ ಮತ್ತು ಪುನರ್ವಸತಿ ಕುರಿತಾದ ನಿರೀಕ್ಷೆ. | ಪುನರ್ವಸತಿಗೆ ಸರಿಯಾದ ಕಾರ್ಯಕ್ರಮ ಇಲ್ಲದಿದ್ದರೆ ಯೋಜನೆಗೆ ಸಹಕರಿಸುವುದಿಲ್ಲ ಎಂದು ಅವರು ಹೇಳಿದರು.<br><br>ಯೋಜನೆಯಲ್ಲಿ ಸೂಕ್ತ ಪುನರ್ವಸತಿ ಕಲ್ಪಿಸದಿದ್ದಲ್ಲಿ ತಮ್ಮ ಪರಿಸ್ಥಿತಿ ತುಂಬಾ ದಯನೀಯವಾಗಲಿದೆ ಎಂದು ಭಾಗವಹಿಸಿದ ಮಹಿಳೆಯರು ತಿಳಿಸಿದರು.<br><br>ಆದ್ದರಿಂದ ಸ್ಥಳಾಂತರಕ್ಕೆ ಮುಂಚಿತವಾಗಿ ಸರಿಯಾದ ಪುನರ್ವಸತಿ ಕಲ್ಪಿಸಬೇಕು.<br><br>ಪುನರ್ವಸತಿ ನಿಬಂಧನೆಯನ್ನು ಅರ್ಹತೆಯ ಮ್ಯಾಟ್ರಿಕ್ಸ್‌ನಲ್ಲಿ ಸೇರಿಸಲಾಗಿದ್ದು, ಅದನ್ನು PAP ಗಳಿಗೆ ತಿಳಿಸಲಾಗಿದೆ. |

| ಸ್ಥಳ ಮತ್ತು ಪ್ರತಿವಾದಿಗಳ ವಿಧ | ದಿನಾಂಕ & ಸಮಯ | ಭಾಗವಹಿಸಿದವರ ಸಂಖ್ಯೆ | | ಚರ್ಚಿಸಿದ ವಿಷಯಗಳು | ಮಧ್ಯಸ್ಥಗಾರರ ಸಲಹೆಗಳು/ ಮನವಿಗಳು/ ಬೇಡಿಕೆಗಳು ಮತ್ತು ಕೈಗೊಂಡ ಕ್ರಮಗಳು |
|---|---|---|---|---|---|
| | | **Male** | **ಮಹಿಳೆಯರು** | | |
| ಸ್ಥಳಾಂತರಗೊಂಡ ಉದ್ಯೋಗಿಗಳು- ವಾಣಿಜ್ಯ ಕಟ್ಟಡ, ಯಲಹಂಕ (ರೈಲ್ವೆ ನಿಲ್ದಾಣದ ಹತ್ತಿರ) ಕಾರಿಡಾರ್ 1 ಮತ್ತು 4 | 14 ಮಾರ್ಚ್ 2022, ಮಧ್ಯಾಹ್ನ 2 | 9 | 0 | ಜೀವನೋಪಾಯದ ನಷ್ಟ ಸೇರಿದಂತೆ ಸಂಭವನೀಯ ಸಾಮಾಜಿಕ ಸಮಸ್ಯೆಗಳನ್ನು ಗುರುತಿಸುವುದು. ಉದ್ಯೋಗಿಗಳ ಮೇಲೆ ಉಂಟಾಗಬಹುದಾದ ಪರಿಣಾಮ, ಜೀವನೋಪಾಯದ ಪುನಃಸ್ಥಾಪನೆ ಮತ್ತು ಪುನರ್ವ್ಯವಸ್ಥೆ ಮತ್ತು ಪುನರ್ವಸತಿ ಇತ್ಯಾದಿಗಳ ಮೇಲಿನ ನಿರೀಕ್ಷೆ. | ನಿಜವಾದ ಉದ್ಯೋಗ ನಷ್ಟದ ಅವಧಿಗೆ ಕೆಲವು ಪುನರ್ವಸತಿ ಸೌಲಭ್ಯಕ್ಕಾಗಿ ಬೇಡಿಕೆ ಇದೆ.<br><br>ಇಎಂ ನಲ್ಲಿ ನೀಡಲಾದ ನಿಬಂಧನೆ ಮತ್ತು ಅದನ್ನು PAP ಗಳಿಗೆ ಒದಗಿಸಲಾಗಿದೆ. |

| | | | | | |
|---|---|---|---|---|---|
| ವಸತಿ ಮತ್ತು ವಸತಿ ಒಳಗೊಂಡ ವಾಣಿಜ್ಯ ಮಾಲೀಕರು.<br>ಯಲಹಂಕ (ರೈಲ್ವೆ ನಿಲ್ದಾಣದ ಬಳಿ)- ಕಾರಿಡಾರ್ 1 ಮತ್ತು 4 | 14 ಮಾರ್ಚ್ 2022, ಮಧ್ಯಾಹ್ನ 3 | 4 | 4 | ಆಸ್ತಿಗಳ ನಷ್ಟ ಮತ್ತು ಜೀವನೋಪಾಯದ ನಷ್ಟ ಸೇರಿದಂತೆ ಸಂಭವನೀಯ ಸಾಮಾಜಿಕ ಸಮಸ್ಯೆಗಳನ್ನು ಗುರುತಿಸುವುದು. ಪರಿಹಾರ<br>ಮತ್ತು ಜೀವನೋಪಾಯದ ಮರುಸ್ಥಾಪನೆ ಮತ್ತು ಪುನರ್ವ್ಯವಸ್ಥೆ ಮತ್ತು ಪುನರ್ವಸತಿ ಮೇಲಿನ ನಿರೀಕ್ಷೆ. | ರೈಲ್ವೆ ಒಡೆತನದ ಜಮೀನಿನಲ್ಲಿ ಯೋಜನೆ ಅನುಷ್ಠಾನಕ್ಕೆ ಮಿತಿ ಹೇರುವಂತೆ ಕೋರಿದ್ದಾರೆ. ಅವರ ಭೂಮಿ<br>ಸ್ವಾಧೀನಪಡಿಸಿಕೊಳ್ಳಲು ಸಮರ್ಪಕ ಪರಿಹಾರ ಮತ್ತು ಪುನರ್ವಸತಿ ಸೌಲಭ್ಯ ಕಲ್ಪಿಸಬೇಕು. ಅವರು ತಮ್ಮ ಎರಡೂ<br>ಮನೆಗಳನ್ನು ಮತ್ತು ಆದಾಯದ ಮೂಲ ಕಳೆದುಕೊಳ್ಳುತ್ತಾರೆ.<br>ಪ್ರಸ್ತುತ ನೇಯ್ಗೆಯಿಂದ ಗಳಿಸುವ ಆದಾಯದಲ್ಲಿ ತಮ್ಮ ವೈಯಕ್ತಿಕ ಮತ್ತು ಮಕ್ಕಳ ಅಗತ್ಯಗಳನ್ನು (ಹೆಚ್ಚಾಗಿ<br>ಶಿಕ್ಷಣಕ್ಕಾಗಿ) ನಿರ್ವಹಿಸುತ್ತಿದ್ದಾರೆ ಎಂದು<br>ಮಹಿಳಾ ಸದಸ್ಯರು ಹೇಳಿದ್ದಾರೆ. ಯೋಜನೆ<br>ಜಾರಿಯಾದ ನಂತರ ಅವರು ಇವುಗಳಿಂದ ವಂಚಿತರಾಗುತ್ತಾರೆ ಮತ್ತು ತಮ್ಮ ವೈಯಕ್ತಿಕ ಅಗತ್ಯಗಳಿಗಾಗಿ ಪತಿ ಅಥವಾ ಮಗನನ್ನು ಅವಲಂಬಿಸಬೇಕಾಗುತ್ತದೆ.<br>ಇದು ಸಮಸ್ಯೆ ತಂದೊಡ್ಡುತ್ತದೆ.<br><br>ಭೌತಿಕ ಮತ್ತು ಆರ್ಥಿಕ ಸ್ಥಳಾಂತರಗೊಂಡ ಕುಟುಂಬಗಳ ಪುನರ್ವಸತಿಗೆ EM ನಲ್ಲಿ ಅವಕಾಶ ಕಲ್ಪಿಸಲಾಗಿದೆ. |
| ಸ್ಥಳಾಂತರಗೊಂಡ ಮನೆ ಬಾಡಿಗೆದಾರರು ಮಹದೇವಪುರ (ಬೆಳ್ಳಂದೂರು ರಸ್ತೆ) ಕಾರಿಡಾರ್ 4 | 15 ಮಾರ್ಚ್ 2022, ಬೆಳಗ್ಗೆ 11.30 | 7 | 2 | ಮನೆ ಬಾಡಿಗೆದಾರರ ಮೇಲೆ ವ್ಯತಿರಿಕ್ತ ಪರಿಣಾಮ ಉಂಟಾಗಬಹುದಾಗಿದ್ದರಿಂದ ಹೊಸ ಮನೆಗಳಿಗೆ ಸ್ಥಳಾಂತರಗೊಳ್ಳುವ ಕುರಿತು ಅವರ ನಿರೀಕ್ಷೆಗಳೇನು. | ಠೇವಣಿ ಮಾಡಿದ ಮೊತ್ತವನ್ನು (ಮಾಲೀಕರಿಗೆ ಪಾವತಿಸಿರುವ ಮುಂಗಡ) ಮರುಪಾವತಿಸಲು ಮತ್ತು ಹತ್ತಿರದ ಪ್ರದೇಶಗಳಲ್ಲಿ ಈ ಮೊತ್ತದ ಬಾಡಿಗೆಯಲ್ಲಿ ಮತ್ತೊಂದು ಸೂಕ್ತ ಮನೆ ಪಡೆಯುವ ಬಗ್ಗೆ ಅವರು ಚಿಂತಿತರಾಗಿದ್ದಾರೆ. ಏಕೆಂದರೆ, ಅದೇ ಪ್ರದೇಶದಲ್ಲಿ ಅವರ ಜೀವನಾಧಾರ ಚಟುವಟಿಕೆಗಳಿದ್ದು, ಮಕ್ಕಳು ಹತ್ತಿರದ ಶಾಲೆಗಳಲ್ಲಿ ಓದುತ್ತಿದ್ದಾರೆ. |

| | | | | | |
|---|---|---|---|---|---|
| | | | | | ಅವರು ತಮ್ಮ ಮನೆಯ ವಸ್ತುಗಳನ್ನು ಹೊಸ ಸ್ಥಳಕ್ಕೆ ಸಾಗಿಸಲು ಮುಂಗಡ ಮಾಹಿತಿ ಮತ್ತು ಸಹಾಯಕ್ಕಾಗಿ ಮನವಿ ಮಾಡಿದರು<br>ಈ ಕುರಿತು EM ನಲ್ಲಿ ನೀಡಲಾದ ನಿಬಂಧನೆಗಳ ಕುರಿತು PAP ಗಳಿಗೆ ತಿಳಿಸಲಾಗಿದೆ. |

| ಸ್ಥಳ ಮತ್ತು ಪ್ರತಿವಾದಿಗಳ ವಿಧ | ದಿನಾಂಕ & ಸಮಯ | ಭಾಗವಹಿಸಿದವರ ಸಂಖ್ಯೆ | | ಚರ್ಚಿಸಿದ ವಿಷಯಗಳು | ಮಧ್ಯಸ್ಥಗಾರರ ಸಲಹೆಗಳು/ ಮನವಿಗಳು/ ಬೇಡಿಕೆಗಳು ಮತ್ತು ಕೈಗೊಂಡ ಕ್ರಮಗಳು |
|---|---|---|---|---|---|
| | | ಪುರುಷ | ಮಹಿಳೆ | | |
| | | | | | |
| ಸ್ಥಳಾಂತರಗೊಂಡ ವಯಸ್ಸಾದ ವಸತಿ ಮಾಲೀಕರು ಮತ್ತು ಬಾಡಿಗೆದಾರರು, ಮಹದೇವಪುರ (ಬೆಳಂದೂರು ರಸ್ತೆ) ಕಾರಿಡಾರ್ 4 | 15 ಮಾರ್ಚ್ 2022, ಬೆಳಗ್ಗೆ 11 | 2 | 3 | ಆಸ್ತಿಗಳ ನಷ್ಟ ಮತ್ತು ಜೀವನೋಪಾಯದ ನಷ್ಟ ಸೇರಿದಂತೆ ಸಂಭವನೀಯ ಸಾಮಾಜಿಕ ಸಮಸ್ಯೆಗಳನ್ನು ಗುರುತಿಸುವುದು. ಪರಿಹಾರ ಮತ್ತು ಜೀವನೋಪಾಯದ ಮರುಸ್ಥಾಪನೆ, ಪುನರ್ವ್ಯವಸ್ಥೆ ಮತ್ತು ಪುನರ್ವಸತಿ ಕುರಿತ ನಿರೀಕ್ಷೆ. | ಶ್ರೀ ಪಿ.ಎಸ್. ರಾಮಚಂದ್ರ ರಾವ್ ಕಳೆದ 23 ವರ್ಷಗಳಿಂದ ಸ್ವಂತ ಮನೆಯಲ್ಲಿ ವಾಸವಿದ್ದಾರೆ. ಅವರಿಗೆ ಸುಮಾರು 63 ವರ್ಷ ವಯಸ್ಸು. ಎರಡು ಅಂತಸ್ತಿನ ಕಟ್ಟಡದ ನೆಲ ಮಹಡಿಯ ಮನೆಯಲ್ಲಿ ವಾಸವಿದ್ದು, 1ನೇ ಮಹಡಿಯ ಮನೆಗಳನ್ನು ಬಾಡಿಗೆಗೆ ನೀಡಿದ್ದಾರೆ.<br>ಅವರು ಖಾಸಗಿ ಸಂಸ್ಥೆಯ ನಿವೃತ್ತ ಉದ್ಯೋಗಿಯಾಗಿದ್ದಾರೆ. ಬಾಡಿಗೆ ಕಟ್ಟಡಗಳಿಂದ ಬರುವ ಆದಾಯವೇ ಅವರ ಜೀವನಕ್ಕೆ ಆಧಾರ. ಇದು ಮಾಸಿಕ 15,000 ರೂ. ಆಗಿದೆ. ಅವರು ಮತ್ತು ಪತ್ನಿ ಮನೆಯಲ್ಲೇ ಇದ್ದಾರೆ ಅವರಿಗೆ ಮಕ್ಕಳಿಲ್ಲ ಹಾಗೂ ನೋಡಿಕೊಳ್ಳಲು ಕುಟುಂಬದ ಇತರ ಸದಸ್ಯರೂ ಇಲ್ಲ ಎಂದು ಹೇಳಿದ್ದಾರೆ. ಆದ್ದರಿಂದ ಅವರು ಪರ್ಯಾಯ ಮನೆ ಜತೆಗೆ ಅವರ ಭೂಮಿ ಮತ್ತು ಕಟ್ಟಡಕ್ಕೆ ಉತ್ತಮ ಪರಿಹಾರ ( ಬೆಂಗಳೂರು ಮೆಟ್ರೋ ರೈಲು ನಿಗಮದ ಪರಿಹಾರ ಪ್ಯಾಕೇಜ್ ಪ್ರಕಾರ) |

| | | | | | |
|---|---|---|---|---|---|
| | | | | | ಪಡೆಯಬೇಕು. ಅಲ್ಲದೆ, ಬಾಡಿಗೆದಾರರು ತಮ್ಮ ಸ್ವತ್ತುಗಳನ್ನು ಸ್ಥಳಾಂತರಿಸಲು ಸಮಯ ನೀಡಬೇಕು ಮತ್ತು ಸಹಾಯ ಒದಗಿಸಬೇಕು ಎಂದು ಮನವಿ ಮಾಡಿದರು.<br><br>ಭೌತಿಕ ಮತ್ತು ಆರ್ಥಿಕವಾಗಿ ಸ್ಥಳಾಂತರಗೊಂಡ ಕುಟುಂಬಗಳ ಪುನರ್ವಸತಿಗೆ EM ನಲ್ಲಿ ನಿಬಂಧನೆಗಳನ್ನು ನೀಡಲಾಗಿದೆ ಮತ್ತು ಅದನ್ನು PAP ಗಳಿಗೆ ತಿಳಿಸಲಾಗಿದೆ. |

| ಸ್ಥಳ & ಪ್ರತಿವಾದಿಗಳ ವಿಧ | ದಿನಾಂಕ & ಸಮಯ | ಭಾಗವಹಿಸಿದವರ ಸಂಖ್ಯೆ | | ಚರ್ಚಿಸಿದ ವಿಷಯಗಳು | ಮಧ್ಯಸ್ಥಗಾರರ ಸಲಹೆಗಳು/ ಮನವಿಗಳು/ ಬೇಡಿಕೆಗಳು ಮತ್ತು ಕೈಗೊಂಡ ಕ್ರಮಗಳು |
|---|---|---|---|---|---|
| | | ಪುರುಷ | ಮಹಿಳೆ | | |
| ಮತ್ತಿಕೆರೆ ಕೊಳೆಗೇರಿಗೆ ಸಂಬಂಧಿಸಿದಂತೆ KSDB ಯೊಂದಿಗೆ KSDB ಆಯುಕ್ತರ ಕಚೇರಿಯಲ್ಲಿ ಸಭೆ. | 25 ಅಕ್ಟೋಬರ್ 2023 ಸಂಜೆ 16.40 | 9 | | KSDB ಮತ್ತು K-RIDE ನ ಅಧಿಕಾರಿಗಳು 53 ಮನೆಗಳನ್ನು ಒಳಗೊಂಡಿರುವ ಸಿವಿಲ್ ಕಾಮಗಾರಿಗಳ ಪ್ರಗತಿಯ ಸಮಯದಲ್ಲಿ ಸಂತ್ರಸ್ತ ನಿವಾಸಿಗಳನ್ನು ತಾತ್ಕಾಲಿಕವಾಗಿ ಖಾಲಿ ಮಾಡುವ/ ಸ್ಥಳಾಂತರಿಸುವ ಬಗ್ಗೆ ಮತ್ತು ಮತ್ತಿಕೆರೆಯ ಎಂ.ಆರ್.ಜಯರಾಮ್ ಕೊಳಗೇರಿ ಪ್ರದೇಶದ ಉದ್ದಕ್ಕೂ BSRP ನಿರ್ಮಾಣ ವಿಧಾನಗಳ ಬಗ್ಗೆ ಚರ್ಚಿಸಿದರು.<br><br>ಆಯುಕ್ತರು ಮತ್ತು ಕೊಳಗೇರಿ ಅಭಿವೃದ್ಧಿ ಮಂಡಳಿಯ ಮುಖ್ಯ ಇಂಜಿನಿಯರ್ ಅವರು, ಕೊಳಗೇರಿ ಪ್ರತಿನಿಧಿಗಳು ಮತ್ತು ಸಂಬಂಧಿತ ವಿಧಾನ ಪರಿಷತ್ ಸದಸ್ಯರ (ಎಂಎಲ್‌ಸಿ) ಜೊತೆ ಸಭೆ ನಡೆಸಿ ಸಮಸ್ಯೆಯನ್ನು ಸೌಹಾರ್ದಯುತವಾಗಿ ಪರಿಹರಿಸಲು ಒಪ್ಪಿದ್ದಾರೆ.<br><br>ಅದರಂತೆ, 02.11.2023 ರಂದು ವಿಧಾನ ಪರಿಷತ್ ಸದಸ್ಯರು ಮತ್ತು ಸ್ಲಂ ನಿವಾಸಿಗಳ ಪ್ರತಿನಿಧಿಗಳು, K-RIDE ಮತ್ತು KSDB ನ ಅಧಿಕಾರಿಗಳೊಂದಿಗೆ ಸಭೆಯನ್ನು ನಿಗದಿಪಡಿಸಲಾಗಿತ್ತು.<br><br>ಸಂತ್ರಸ್ತ ಮನೆಗಳು/ನಿವಾಸಿಗಳ ತಾತ್ಕಾಲಿಕ ಸ್ಥಳಾಂತರದ ಅಂತಿಮ ನಿರ್ಧಾರವನ್ನು ಮೇಲಿನ ಸಿಬ್ಬಂದಿ ಜತೆ ಚರ್ಚಿಸಿ ಕೈಗೊಳ್ಳಲು ಮತ್ತು ಈ ಕುರಿತು ಸಭೆ ಕರೆದು | ಮತ್ತಿಕೆರೆ ಕೊಳಗೇರಿಯ ಸಮಸ್ಯೆಗೆ ಸಂಬಂಧಿಸಿದಂತೆ ಒಪ್ಪಂದದ ಚೌಕಟ್ಟು ರೂಪಿಸಲು ಕೆ-ರೈಡ್ ಅಧಿಕಾರಿಗಳು ಮತ್ತೆ ಕೆಎಸ್‌ಡಿಬಿ ಅಧಿಕಾರಿಗಳನ್ನು ಭೇಟಿಯಾಗಲಿದ್ದಾರೆ. |

| | | | | | |
|---|---|---|---|---|---|
| | | | | ಮಧ್ಯಸ್ಥಗಾರರೊಂದಿಗೆ ಸಮನ್ವಯ ಸಾಧಿಸುವ ಜವಾಬ್ದಾರಿಯನ್ನು ವಿಶೇಷ ಉಪ ಆಯುಕ್ತರು/ಕೆ ರೈಡ್ ಅವರಿಗೆ ವಹಿಸಲಾಗಿದೆ; | |
| ಶ್ರೀ ಎಂ.ಆರ್. ಸೀತಾರಾಮ್, (ವಿಧಾನ ಪರಿಷತ್ ಸದಸ್ಯರು ಮತ್ತು ಮಾಜಿ ಶಾಸಕರು, ಕರ್ನಾಟಕ ಸರ್ಕಾರ) ಅವರೊಂದಿಗೆ ಮತ್ತಿಕೆರೆ ಕೊಳಗೇರಿ ಕುರಿತು ಅವರ ಕಚೇರಿಯಲ್ಲಿ ಸಭೆ. | 02 ನವೆಂಬರ್ 2023, ಮಧ್ಯಾಹ್ನ 2.30 | 13 | | 02.11.2023 ರಂದು ಮಾನ್ಯ ಶಾಸಕರ ಕಚೇರಿಯಲ್ಲಿ ವಿಧಾನ ಪರಿಷತ್ ಸದಸ್ಯ (MLC) ಮತ್ತು K-RIDE & KSDB ಅಧಿಕಾರಿಗಳ ಸಮ್ಮುಖದಲ್ಲಿ M R ಜಯರಾಮ ಸ್ಲಂನ 4 ಪ್ರತಿನಿಧಿಗಳೊಂದಿಗೆ ಸಭೆಯನ್ನು ಕರೆಯಲಾಯಿತು. | ಸಮಯಾವಕಾಶ, ಹಣಕಾಸು, ತಾತ್ಕಾಲಿಕ ಸ್ಥಳಾಂತರ ಆಯ್ಕೆಗಳು ಅಥವಾ ಉದ್ದೇಶಿತ ವಸತಿಗಾಗಿ ನಿವೇಶನಗಳು ಮತ್ತು ಸೇವೆಗಳು, ಪ್ರಸ್ತಾವಿತ ವಸತಿಗಾಗಿ ವಿನ್ಯಾಸಗಳು ಇತ್ಯಾದಿಗಳಿಗೆ ಸಂಬಂಧಿಸಿದಂತೆ ವಿವರವಾದ ಯೋಜನೆ ಮುಂದುವರಿಸಲು ಕೊಳಗೇರಿ ನಿವಾಸಿಗಳು ಮತ್ತು KSDB ಯೊಂದಿಗೆ ಹೆಚ್ಚಿನ ಸಮಾಲೋಚನೆಗಳನ್ನು ನಡೆಸುವ ಅಗತ್ಯವಿದೆ. |

| | | | | | | |
|---|---|---|---|---|---|---|
| | | | | | | |

| ಸ್ಥಳ ಮತ್ತು ಪ್ರತಿವಾದಿಗಳ ವಿಧ | ದಿನಾಂಕ & ಸಮಯ | ಭಾಗವಹಿಸಿದವರ-ಸಂಖ್ಯೆ | | ಚರ್ಚಿಸಿದ ವಿಷಯಗಳು | ಮಧ್ಯಸ್ಥಗಾರರ ಸಲಹೆಗಳು/ ಮನವಿಗಳು/ ಬೇಡಿಕೆಗಳು ಮತ್ತು ಕೈಗೊಂಡ ಕ್ರಮಗಳು |
|---|---|---|---|---|---|
| | | ಪುರುಷ | ಮಹಿಳೆ | | |
| KSDB ಅಧಿಕಾರಿಗಳು ಮತ್ತು ಕೊಳಗೇರಿಯ 4 ನಿವಾಸಿಗಳು ಇದ್ದರು. | | | | BSRP ನಿರ್ಮಾಣದ ಸಂದರ್ಭದಲ್ಲಿ ನಿವಾಸಿಗಳಿಗೆ ಆಗಬಹುದಾದ ತೊಂದರೆಗಳ ಬಗ್ಗೆ ಗೌರವಾನ್ವಿತ ಎಂಎಲ್‌ಸಿ ಮತ್ತು ಎಂ.ಆರ್. ಜಯರಾಮ್ ಕೊಳಗೇರಿ ನಿವಾಸಿಗಳ ಪ್ರತಿನಿಧಿಗೆ ವಿವರಿಸಲಾಯಿತು. ಸಿವಿಲ್ ಕಾಮಗಾರಿ ಸಮಯದಲ್ಲಿ ನಿವಾಸಿಗಳ ಸುರಕ್ಷತೆಯನ್ನು ಖಚಿತಪಡಿಸಿಕೊಳ್ಳಲು ತಾತ್ಕಾಲಿಕವಾಗಿ ಮನೆಗಳನ್ನು ಖಾಲಿ ಮಾಡುವ ಅಗತ್ಯವನ್ನು ಮನದಟ್ಟು ಮಾಡಲಾಯಿತು.<br><br>ಎಂ.ಆರ್. ಜಯರಾಮ್ ಕೊಳಗೇರಿಯ ಪ್ರತಿನಿಧಿಗಳು ಸಿವಿಲ್ ಕಾಮಗಾರಿಗಳ ಸಮಯದಲ್ಲಿ ತಾತ್ಕಾಲಿಕವಾಗಿ ಸ್ಥಳಾಂತರಗೊಳ್ಳಲು ಸ್ವಯಂಪ್ರೇರಣೆಯಿಂದ ಒಪ್ಪಿಕೊಂಡಿದ್ದಾರೆ, ಏಕೆಂದರೆ BSRP ಕಾರ್ಯಗತಗೊಳಿಸಲು ತಾತ್ಕಾಲಿಕ ಸ್ಥಳಾಂತರದ ಅಗತ್ಯವಿದೆ.<br><br>ಆಯುಕ್ತರು/ಕೆಎಸ್‌ಡಿಬಿಯು ವತಿಯಿಂದ ಎಂ.ಆರ್.ಜಯರಾಮ್ ಕೊಳಗೇರಿ ನಿವಾಸಿಗಳಿಗೆ ಕೊಳಗೇರಿ ಯೋಜನೆಯನ್ನು ಪ್ರತ್ಯೇಕವಾಗಿ ಜಾರಿಗೊಳಿಸಲು ಎಂಎಲ್‌ಸಿಯವರ ಸಮನ್ವಯದಲ್ಲಿ ಒಪ್ಪಿಕೊಂಡಿದ್ದಾರೆ. ಈ ಹೊಸ ವಸತಿ ಯೋಜನೆ ನಿರ್ಮಾಣದ ಸಮಯದಲ್ಲಿ ತಾತ್ಕಾಲಿಕವಾಗಿ ಸ್ಥಳಾಂತರಿಸಲು ಅಲ್ಲ. ಈ | |

| | | | | | |
|---|---|---|---|---|---|
| | | | | ಹೊಸ ವಸತಿ ಯೋಜನೆಯು ಪ್ರತ್ಯೇಕವಾಗಿ ಮತ್ತು ಯೋಜನೆಯಿಂದ ಸ್ವತಂತ್ರವಾಗಿದೆ.<br><br>ಎಂ.ಆರ್. ಜಯರಾಮ್ ಕೊಳೆಗೇರಿ ನಿವಾಸಿಗಳ ಪ್ರತಿನಿಧಿಗಳಿಗೆ ಪರಿಹಾರ ಮತ್ತು ಪುನರ್ವಸತಿ ಪ್ಯಾಕೇಜ್ ಗೆ ಇರಬೇಕಾದ ಅರ್ಹತೆ ಕುರಿತು ವಿವರಿಸಲಾಯಿತು. ಈ ವೇಳೆ ಕೊಳೆಗೇರಿ ನಿವಾಸಿಗಳು ಎಂಎಲ್ ಸಿ ಅವರಿಂದ ಮೆಚ್ಚುಗೆಗೆ ಪಾತ್ರರಾದರು. ಸರ್ಕಾರವು ಅನುಮೋದಿಸಿದಂತೆ "BSRP ಗಾಗಿ ಪರಿಹಾರ ಮತ್ತು ಪುನರ್ವಸತಿ ಪ್ಯಾಕೇಜ್" ಪ್ರಕಾರ ಪರಿಹಾರ ನೀಡುವುದು. KSDB ಯ ವಸತಿ ಯೋಜನೆಯಲ್ಲಿ ಶಾಶ್ವತ ಪುನರ್ವಸತಿಗಾಗಿ ನಿವಾಸಿಗಳಿಗೆ ನೀಡಹಬೇಕಾದ ನಿಧಿಯ ಕುರಿತು KSDB ಗೆ ಲೆಕ್ಕಹಾಕಲಾಗುತ್ತದೆ ಮತ್ತು ಪ್ರಕ್ರಿಯೆಯನ್ನು ಸುಗಮಗೊಳಿಸಲಾಗುತ್ತದೆ. ಅಲ್ಲದೆ, ಇದು ಶಾಶ್ವತ ವಸತಿಗಾಗಿ ಕೊಳಗೇರಿ ನಿವಾಸಿಗಳ ಬಹುಕಾಲದ ಬೇಡಿಕೆಯಾಗಿದೆ. ವಸತಿ ಯೋಜನೆ ಸಾಕಾರಗೊಂಡರೆ, ನಂತರ CRP ಅಡಿಯಲ್ಲಿ ಒದಗಿಸಲಾದ 5 ಲಕ್ಷ ರೂ.ಗಳನ್ನು ಕೊಡುಗೆ ನಿಧಿಯಾಗಿ ಬಳಸಬಹುದು.<br><br>ಎಂ.ಆರ್. ಜಯರಾಮ್ ಕೊಳಗೇರಿ ನಿವಾಸಿಗಳ ಪ್ರತಿನಿಧಿಗಳು ಉಪನಗರ ರೈಲು ಯೋಜನೆ ಕಾಮಗಾರಿಗೆ ಎಲ್ಲಾ ರೀತಿಯಲ್ಲೂ ಸಹಾಯ ಮಾಡುವ ಇಂಗಿತ ವ್ಯಕ್ತಪಡಿಸಿದರು. | |

[16] During this meeting on-top of the discussion on temporary resettlement related to the BSRP project, the Commissioner of KSDB brought on table the housing scheme that is planned, irrespectively of the project.

## 1.4. 1000 ಭವಿಷ್ಯದ ಸಂಭವನೀಯ ಬಿಎಸ್ಆರ್ ಪಿ ಬಳಕೆದಾರರ ಆಯ್ದ ಸಮೀಕ್ಷೆ

ಮುಂಬರುವ ಯೋಜನೆಯ ಪರಿಕಲ್ಪನೆಯನ್ನು ಅರ್ಥಮಾಡಿಕೊಳ್ಳಲು, ಸದ್ಯದ ಸಾರಿಗೆ ಮಾದರಿಯನ್ನು ತಿಳಿಯಲು ಮೂಲ ಮತ್ತು ಪ್ರಯಾಣಿಕರ ಸ್ಥಳ, ಪ್ರಯಾಣದ ಉದ್ದೇಶ, ಪ್ರಯಾಣಕ್ಕೆ ತಗುಲುವ ವೆಚ್ಚ ಮತ್ತಿತರ ಅಂಶಗಳನ್ನು ಅರಿಯಲು ಬಿಎಸ್ಆರ್ ಪಿಯ ಸಂಭವನೀಯ ಬಳಕೆದಾರರ ಮಾದರಿ ಸಮೀಕ್ಷೆಯನ್ನು ನಡೆಸಲಾಯಿತು. ಸಮೀಕ್ಷೆಗೆಒಟ್ಟು 1000 ಜನರನ್ನು(ಸಾವಿರ) ಒಳಪಡಿಸಲಾಗಿದೆ. ಮುಂಬರುವ ಬಿಎಸ್ಆರ್ ಪಿ ನಿಲ್ದಾಣಗಳ ಸಮೀಪದ ಮಾರುಕಟ್ಟೆ ಪ್ರದೇಶಗಳಲ್ಲಿ ಸಮೀಕ್ಷೆಯನ್ನು ನಡೆಸಲಾಗಿದೆ. ಈ ಸಮೀಕ್ಷೆಯನ್ನು ನಾನಾ ಸಮಯದ ವೇಳಾಪಟ್ಟಿ(ವಿಭಾಗ-1: ಬೆಳಗ್ಗೆ 8 ರಿಂದ 10; ವಿಭಾಗ-2: ಬೆಳಗ್ಗೆ 11 ರಿಂದ ಮಧ್ಯಾಹ್ನ 1; ವಿಭಾಗ-3: ಮಧ್ಯಾಹ್ನ 2 ರಿಂದ 5) ಸಮಯದಲ್ಲಿ ಬೇರೆ ಬೇರೆ ವರ್ಗದ ಪ್ರಯಾಣಿಕರ ಅಭಿಪ್ರಾಯಗಳನ್ನು ಸಂಗ್ರಹಿಸಲಾಗಿದೆ. ಈ ಸಮೀಕ್ಷೆಯಲ್ಲಿ ಪ್ರಯಾಣಿಕರ ವರ್ಗ ಮತ್ತು ಯೋಜನೆಗೆ ಬಗ್ಗೆ ಅವರ ಪರಿಕಲ್ಪನೆ ಮತ್ತು ವಿನ್ಯಾಸದ ವೇಳೆ ಯಾವ ಯಾವ ಸೌಕರ್ಯಗಳನ್ನು ಸೇರಿಸಬೇಕು ಎಂಬ ಬಗ್ಗೆ ಮಾಹಿತಿ ಸಂಗ್ರಹಿಸಲಾಗಿದೆ.

1000 ಜನರ ಪೈಕಿ ಆಯ್ದ ಸರ್ವೆಯಲ್ಲಿ 282 ಮಹಿಳೆಯರು ಭಾಗವಹಿಸಿ, ಪ್ರತಿಕ್ರಿಯಿಸಿದ್ದಾರೆ. ಸಮೀಕ್ಷೆಯಲ್ಲಿ ಪಾಲ್ಗೊಂಡವರಲ್ಲಿ ವಿದ್ಯಾರ್ಥಿಗಳು (132 ಸಂಖ್ಯೆ), ದುಡಿಯುವ ಮಹಿಳೆಯರು (102 ಸಂಖ್ಯೆ), ಗೃಹಿಣಿಯರು (ಅಪರೂಪಕ್ಕೆ ಪ್ರಯಾಣಿಸುವವರು) (36 ಸಂಖ್ಯೆ), ವಯೋವೃದ್ದರು (12 ಸಂಖ್ಯೆ) ಇತ್ಯಾದಿ ಸೇರಿದ್ದಾರೆ. ಮಹಿಳಾ ಭಾಗಿದಾರರು ವ್ಯಕ್ತಪಡಿಸಿದ ಪ್ರಮುಖ ಕಾಳಜಿಗಳು ಈ ಕೆಳಗಿನಂತಿವೆ.

- ಪ್ರಯಾಣಿಕರಿಗೆ ಆರಂಭದಿಂದ ಅಂತ್ಯದವರೆಗಿನ ಸಂಪರ್ಕ ಕೊರತೆಯಿರುವುದು ಅತ್ಯಂತ ಮುಖ್ಯ ವಿಚಾರವಾಗಿದೆ. ಒಂದು ವೇಳೆ ಕೆ-ರೈಡ್ ಸಾಕಷ್ಟು ಸೌಕರ್ಯಗಳನ್ನು ವಾಹನ ನಿಲುಗಡೆಗೆ ಪ್ರಮುಖವಾಗಿ ನಗರದ ಹೊರವಲಯದ ನಿಲ್ದಾಣಗಳಲ್ಲಿ ಒದಗಿಸಿದರೆ ಅದು ಪ್ರತಿ ದಿನ ಸಂಚರಿಸುವ ಪ್ರಯಾಣಿಕರಿಗೆ (ದುಡಿಯುವ ಮಹಿಳೆಯರು ಮತ್ತು ವಿದ್ಯಾರ್ಥಿಗಳು) ಅನುಕೂಲವಾಗುತ್ತದೆ.

- ಬಿಎಸ್ಆರ್ ಪಿಯ ಜತೆ ಬಿಎಂಟಿಸಿ ಸಂಯೋಜನೆ: ಬಿಎಂಟಿಸಿ ನಿಯಮಿತವಾಗಿ ಸಮೀಪದ ಬಿಎಸ್ಆರ್ ಪಿ ನಿಲ್ದಾಣಗಳಿಂದ ಹೊರವಲಯದ ಜನವಸತಿಗಳಿಗೆ ಫೀಡರ್ ಬಸ್ ಸೇವೆಗಳ ಕಾರ್ಯಾಚರಣೆ ಮಾಡಬಹುದು. ಇದರಿಂದ ಬಿಎಸ್ಆರ್ ಪಿ ವಿಶೇಷವಾಗಿ ಮಹಿಳೆಯರಿಗೆ ಹೆಚ್ಚಿನ ಅನುಕೂಲವಾಗುತ್ತದೆ.

- ವಾಹನ ನಿಲುಗಡೆ ಪ್ರದೇಶದಿಂದ ಪಾದಚಾರಿ ಮಾರ್ಗ ಸೇರಿದಂತೆ ಸಮೀಪದ ಬಸ್ ನಿಲ್ದಾಣದ ವರೆಗೆ ಎಲ್ಲ ನಿಲ್ದಾಣಗಳಲ್ಲಿ ಉತ್ತಮ ಬೆಳಕಿನ ವ್ಯವಸ್ಥೆ ಇರಬೇಕು. ಜತೆಗೆ ಪೊಲೀಸ್ ಪಹರೆ ಕೂಡ ಖಾತರಿಪಡಿಸಬೇಕು ಮತ್ತು ಎಲ್ಲ ನಿಲ್ದಾಣಗಳು ಹಾಗೂ ವಾಹನ ನಿಲುಗಡೆ ಪ್ರದೇಶದಲ್ಲಿ ಸಿಸಿಟಿವಿಗಳನ್ನು ಅಳವಡಿಸಬೇಕು.

- ಎಲ್ಲ ನಿಲ್ದಾಣಗಳಲ್ಲಿ ಶೌಚಾಲಯಗಳನ್ನು ಒದಗಿಸಬೇಕು(ಯಾವುದೋ ಒಂದು ಮೂಲೆಯಲ್ಲಿ ಇರಬಾರದು), ವಿಶ್ರಾಂತಿ ಗೃಹಗಳನ್ನು ವಿನ್ಯಾಸಗೊಳಿಸುವಾಗ ಮಹಿಳಾ ಪ್ರಯಾಣಿಕರು ಮತ್ತು ಸಣ್ಣ ಮಕ್ಕಳನ್ನು ಗಮನದಲ್ಲಿರಿಸಿಕೊಳ್ಳಬೇಕು.
- ನಿಲ್ದಾಣಗಳ ವಿನ್ಯಾಸ, ವಿಶೇಷಚೇತನರ ಸ್ನೇಹಿಯಾಗಿರಬೇಕು.

- ಮಹಿಳಾ ಪ್ರಯಾಣಿಕರಿಗೆ ವಿಶೇಷವಾಗಿ ಪೀಕ್ ಹವರ್ (ಅಧಿಕ ಜನದಟ್ಟಣೆ ಸಮಯ)ನಲ್ಲಿ

ಕೋಚ್ ಗಳನ್ನು ಮೀಸಲಾಗಿಡಬೇಕು.

- ಮಹಿಳಾ ಪ್ರಯಾಣಿಕರಿಗೆ ಕಿರುಕುಳ ಆಗುವುದನ್ನು ತಪ್ಪಿಸಲು ಲಿಫ್ಟ್ ಗಳು ಪಾರದರ್ಶಕವಾಗಿರಬೇಕು.
- ಎಲ್ಲ ನಿಲ್ದಾಣಗಳಲ್ಲಿ ಮತ್ತು ಕೋಚ್ ಗಳಲ್ಲಿ ವಿಶೇಷವಾಗಿ ತಡರಾತ್ರಿ ಮತ್ತು ಬೆಳಗಿನ ಅವಧಿಯಲ್ಲಿ ಭದ್ರತಾ ಸಿಬ್ಬಂದಿಯನ್ನು ನಿಯೋಜಿಸಬೇಕು.
- ಸಹಾಯವಾಣಿ ಸಂಖ್ಯೆಗಳ ಪ್ರದರ್ಶನದಿಂದ ಮಹಿಳಾ ಪ್ರಯಾಣಿಕರು ತಮ್ಮ ದೂರುಗಳನ್ನು ಸಲ್ಲಿಸಲು ಅನುಕೂಲವಾಗುತ್ತದೆ.

## 1.5. ಲಿಂಗ ಸಂವೇದನೆ ಸಮಾಲೋಚನೆಗಳು ಮತ್ತು ಲಿಂಗ ಕ್ರಿಯಾ ಯೋಜನೆ

ಸಾಮಾನ್ಯ ಸಮಾಲೋಚನೆಗಳಲ್ಲಿ ಮಹಿಳೆಯರ ಭಾಗವಹಿಸುವಿಕೆ ಕಡಿಮೆ ಇತ್ತು ಮತ್ತು ಪುರುಷರೇ ಹೆಚ್ಚಾಗಿರುವ ಪ್ರವೃತ್ತಿ ಕಂಡುಬಂತು. ಆದ್ದರಿಂದ ಮಹಿಳೆಯರ ಪರಿಕಲ್ಪನೆಯನ್ನು ಮತ್ತು ನಿರಾಶ್ರಿತ ಮಹಿಳಾ ಸದಸ್ಯರ ಕಾಳಜಿಗಳನ್ನು ಅರ್ಥಮಾಡಿಕೊಳ್ಳಲು ಮಹಿಳೆಯರೊಂದಿಗೆ ಪ್ರತ್ಯೇಕ ಸಮಾಲೋಚನೆಗಳನ್ನು ನಡೆಸಲಾಯಿತು. ಈ ಕೆಳಗಿನ ಕೋಷ್ಟಕದಲ್ಲಿ ಲಿಂಗಸೂಕ್ಷ್ಮ ಸಮಾಲೋಚನೆಗಳನ್ನು ನಡೆಸಿರುವ ವಿವರಗಳ ಸಂಕ್ಷಿಪ್ತ ರೂಪ ಮತ್ತು ಲಿಂಗ ಕ್ರಿಯಾ ಯೋಜನೆಯನ್ನು ನೀಡಲಾಗಿದೆ. ಸಮಾಲೋಚನೆಗಳ ನಡಾವಳಿಯನ್ನು ಅಡಕ-ಇ ನಲ್ಲಿ ಲಗತ್ತಿಸಲಾಗಿದೆ.

Table 11. **ಲಿಂಗ ಸಂವೇದನೆ ಸಮಾಲೋಚನೆಗಳ ವಿವರಣೆ**

| ಸ್ಥಳ ಮತ್ತು ಪ್ರತಿವಾದಿಗಳ ವರ್ಗ | ದಿನಾಂಕ & ಸಮಯ | ಭಾಗೀದಾರರ ಸಂಖ್ಯೆ | ಚರ್ಚಿಸಲಾದ ವಿಷಯಗಳು | ಪಾಲುದಾರರಿಂದ ಪಡೆದ ಸಲಹೆಗಳು/ ಮನವಿಗಳು/ ಬೇಡಿಕೆಗಳು ಮತ್ತು ಕೈಗೊಂಡ ಕ್ರಮಗಳು |
|---|---|---|---|---|
| ಕಾರಿಡಾರ್-3<br>ಡಾನ್ ಬಾಸ್ಕೋ ಕಾಲೇಜ್ ಆಫ್ ಮ್ಯಾನೇಜ್ಮೆಂಟ್, ಬೆಂಗಳೂರು ಪೂರ್ವ. ಕಾಲೇಜು ಯುವತಿಯರು | 6th ಸೆಪ್ಟೆಂಬರ್ 2022, ಬೆಳಗ್ಗೆ 11 | 16 ಮಹಿಳೆಯರು | ಟಿಕೆಟ್ ದರ, ರೈಲು ನಿಲ್ದಾಣಗಳಲ್ಲಿ ಲಭ್ಯವಿರುವ ಅಗತ್ಯತೆಗಳು, ರಾತ್ರಿ ವೇಳೆ ಲಭ್ಯವಿರುವ ಸೇವೆಗಳು, ಮಹಿಳೆಯರಿಗಾಗಿಯೇ ಮೀಸಲಾದ ರೈಲು, ಜನದಟ್ಟಣೆ ಇರುವ ಟಿಕೆಟ್ ಕೌಂಟರ್ ಗಳು | • ಪ್ರಯಾಣದ ದರ ಸಾಧಾರಣವಾಗಿರಬೇಕು<br>• ನಿಲ್ದಾಣಗಳಲ್ಲಿ ಮೆಡಿಕಲ್ ಶಾಪ್ ಗಳಿರಬೇಕು<br>• ನಿಲ್ದಾಣಗಳಲ್ಲಿ ಬೈಸಿಕಲ್ ಅಥವಾ ಬ್ಯಾಟರಿ ಚಾಲಿತ ಬೈಸಿಕಲ್ ಗಳಿರಬೇಕು<br>• ರಾತ್ರಿ ವೇಳೆ, ಕಾಲ್ ಸೆಂಟರ್ ಮತ್ತು ಐಟಿ ಉದ್ಯಮದಲ್ಲಿ ದುಡಿಯುವ ಮಹಿಳೆಯರ ಅನುಕೂಲಕ್ಕಾಗಿ 24 ಗಂಟೆಗಳು ರೈಲು ಸೇವೆಗಳಿರಬೇಕು<br>• ರಾತ್ರಿ ವೇಳೆ ರೈಲುಗಳಲ್ಲಿ ಮಹಿಳಾ ಪೊಲೀಸರ ಲಭ್ಯತೆ ಇರಬೇಕು<br>• ವಾಹನದಟ್ಟಣೆ ಅಧಿಕವಿರುವ ಸಮಯದಲ್ಲಿ ಮಹಿಳೆಯರಿಗಾಗಿಯೇ ರೈಲುಗಳು ವ್ಯವಸ್ಥೆ ಇರಬೇಕು<br>• ಸರದಿ ಸಾಲನ್ನು ನಿರ್ವಹಿಸಬೇಕು ಮತ್ತು ರೈಲುಗಳನ್ನು ಹತ್ತಲು ಮಹಿಳೆಯರಿಗೆ ಪ್ರತ್ಯೇಕ ಸರದಿ ಇರಬೇಕು.<br>• ರೈಲು ನಿಲ್ದಾಣಗಳಲ್ಲಿ ಶುದ್ಧೀಕರಿಸಿದ ಕುಡಿಯುವ ನೀರು ಇರಬೇಕು |
| ಕಾರಿಡಾರ್-2<br>ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ ಕಾಲೋನಿ,<br>ಬಾಣಸವಾಡಿ<br>ತೃತೀಯ ಲಿಂಗಿಗಳು | 6th ಸೆಪ್ಟೆಂಬರ್ 2022, ಮಧ್ಯಾಹ್ನ 3 | 12 ತೃತೀಯ ಲಿಂಗಿಗಳು | ಲಿಂಗ ಸಂವೇದಿ/ರೈಲು ಬೋಗಿಗಳ ವಿನ್ಯಾಸ ಮತ್ತು ನಿರ್ಮಾಣ<br>ರೈಲುಗಳಲ್ಲಿ ಸೀಟುಗಳ ಲಭ್ಯತೆ<br>ಔಷಧಗಳ ಲಭ್ಯತೆ<br>ನಿಲ್ದಾಣ ಸಮೀಪ ಸುರಕ್ಷತೆ<br>ಉದ್ಯೋಗ, ಜೀವನೋಪಾಯ ನೆರವು<br>ತೃತೀಯ ಲಿಂಗಿಗಳು ಸಾರ್ವಜನಿಕರೆಡೆಗಿನ ಸೂಕ್ಷ್ಮತೆ | • ತೃತೀಯ ಲಿಂಗಿಗಳು ಸೇರಿದಂತೆ ದುರ್ಬಲರಿಗೆ ಮೀಸಲಾದ ಡಬಲ್ ಡೆಕ್ ಕೋಚ್ ಗಳ ಸಂಚಾರ<br>• ಪ್ರಮುಖ ನಿಲ್ದಾಣಗಳಲ್ಲಿ ಡಿಸ್ಪೆನ್ಸರಿಗಳ ಲಭ್ಯತೆ<br>• ಬಾಣಸವಾಡಿ ನಿಲ್ದಾಣ ಪ್ರದೇಶದಲ್ಲಿ ಪೊಲೀಸ್ ಔಟ್ ಪೋಸ್ಟ್<br>• ತೃತೀಯ ಲಿಂಗಿಗಳಿಗೆ ಉಚಿತ ಪ್ರಯಾಣ ಪಾಸ್ ಗಳು<br>• ನಿಲ್ದಾಣಗಳಲ್ಲಿ ಮಳಿಗೆಗಳನ್ನು ತೆರೆಯಲು ಹಣಕಾಸು ಸಂಸ್ಥೆಗಳಿಂದ ಸಾಲ<br>• ಸಾರ್ವಜನಿಕಲ್ಲಿ ತೃತೀಯ ಲಿಂಗಿಗಳ ಬಗ್ಗೆ ಜಾಗೃತಿ ಮೂಡಿಸಲು ಅವರ ಪೋಸ್ಟರ್ ಗಳನ್ನು ನಿಲ್ದಾಣ ಮತ್ತು ರೈಲುಗಳಲ್ಲಿ ಅಳವಡಿಕೆ<br>• ಗುತ್ತಿಗೆದಾರರು ತೃತೀಯ ಲಿಂಗಿಗಳನ್ನು ಉದ್ಯಮಕ್ಕೆ ಸೇರಿಸಿಕೊಳ್ಳಬಹುದು |

| | | | | |
|---|---|---|---|---|
| ಕಾರಿಡಾರ್ -3<br>ಎಂಸಿಟಿ ಕ್ವಾಟ್ರಸ್,<br>ಕೆಂಗೇರಿ,<br>ನಾಗರಿಕ ಸಮಾಜದ ಸದಸ್ಯರು | 7 ಸೆಪ್ಟೆಂಬರ್ 2022, ಬೆಳಗ್ಗೆ 11 | 15 ಮಹಿಳೆಯರು | ರಿಯಾಯಿತಿ ಟಿಕೆಟ್ ದರ ಜೀವನೋಪಾಯ ನೆರವು ರೈಲು ನಿಲ್ದಾಣಗಳಲ್ಲಿ ಆರೋಗ್ಯ ಮತ್ತು ಶುಚಿತ್ವ ಮಾಹಿತಿ ಪ್ರಸರಣ | • ಮಹಿಳಾ ಪ್ರಯಾಣಿಕರಿಗೆ ಶೇ. 50ರಷ್ಟು ವಿನಾಯಿತಿ<br>• ಕಾರು ಮತ್ತು ಬೈಕ್ ಗಳ ಪಾರ್ಕಿಂಗ್ ನಿಲುಗಡೆ ಪ್ರದೇಶವನ್ನು ಮಹಿಳಾ ನಾಗರಿಕ ಸಮಾಜದ ಸದಸ್ಯರಿಗೆ ಗುತ್ತಿಗೆ ನೀಡಬಹುದು.<br>• ನಿಲ್ದಾಣಗಳು ಮತ್ತು ಫ್ಲಾಟ್ ಫಾರಂಗಳ ಕಾರ್ಯಾಚರಣೆ ಹಾಗೂ ನಿರ್ವಹಣೆಯನ್ನು ಮಹಿಳಾ ನಾಗರಿಕ ಸಮಾಜದ ಸದಸ್ಯರಿಗೆ ನೀಡುವುದು<br>• ರೈಲು ನಿಲ್ದಾಣಗಳು ಮತ್ತು ರೈಲುಗಳಲ್ಲಿ ಮಹಿಳಾ ಸ್ವಸಹಾಯ ಗುಂಪುಗಳ ಸದಸ್ಯರು ತಯಾರಿಸಿದ ಉತ್ಪನ್ನಗಳನ್ನು ಮಾರಾಟ ಮಾಡುವುದು.<br>• ರೈಲು ನಿಲ್ದಾಣಗಳಲ್ಲಿನ ಮಳಿಗೆಗಳು /ಅಂಗಡಿಗಳನ್ನು ಮಹಿಳಾ ನಾಗರಿಕ ಸಮಾಜದ ಸದಸ್ಯರಿಗೆ ಹಂಚಿಕೆ ಮಾಡಬೇಕು |

| ಸ್ಥಳ ಮತ್ತು ಪ್ರತಿವಾದಿಗಳ ವರ್ಗ | ದಿನಾಂಕ & ಸಮಯ | ಭಾಗೀದಾರರ ಸಂಖ್ಯೆ | ಚರ್ಚಿಸಲಾದ ವಿಷಯಗಳು | ಪಾಲುದಾರರಿಂದ ಪಡೆದ ಸಲಹೆಗಳು/ ಮನವಿಗಳು/ ಬೇಡಿಕೆಗಳು ಮತ್ತು ಕೈಗೊಂಡ ಕ್ರಮಗಳು |
|---|---|---|---|---|
| | | | | • ದಟ್ಟಣೆ ಸಮಯದಲ್ಲಿ ಮಹಿಳಾ ಪ್ರಯಾಣಿಕರಿಗೆ ಪ್ರತ್ಯೇಕ ಬೋಗಿಗಳು<br>• ಕನ್ನಡ ಮತ್ತು ಇಂಗ್ಲೀಷ್ ನಲ್ಲಿ ಟೋಲ್ ಫ್ರೀ ತುರ್ತು ನಂಬರ್/ ಮಾಹಿತಿಯನ್ನು ಪ್ರದರ್ಶಿಸುವುದು/<br>• ಮಹಿಳೆಯರನ್ನು ಚಾಲಕರನ್ನಾಗಿ ನೇಮಕ ಮಾಡಿಕೊಳ್ಳುವುದು.<br>• ನಿಲ್ದಾಣಗಳಲ್ಲಿ ಆಟೋ ರಿಕ್ಷಾಗಳನ್ನು ಖರೀದಿಸಲು ಮತ್ತು ಚಲಾಯಿಸಲು ಮಹಿಳೆಯರಿಗೆ ಸಾಲ ಸೌಲಭ್ಯಗಳನ್ನು ಒದಗಿಸುವುದು<br>• ನಿಲ್ದಾಣಗಳ ಬಳಿ ವಾಸಿಸುವ ಮಹಿಳೆಯರಿಗೆ ತಮ್ಮ ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ ಸೇವೆಗಳನ್ನು ಕೇಂದ್ರೀಕರಿಸಲು ಗುತ್ತಿಗೆದಾರರಿಗೆ ಸೂಚಿಸಬಹುದು |
| ಕಾರಿಡಾರ್ 4 – ಥಣಿಸಂದ್ರ- ಮುಂಚೂಣಿ ಆರೋಗ್ಯ ಕಾರ್ಯಕರ್ತರು | 7 ನೇ ಸೆಪ್ಟಂಬರ್ 2022, ಸಂಜೆ 4 ಗಂಟೆಗೆ | 17 ಮಹಿಳೆಯರು | ರಿಯಾಯಿತಿ ಟಿಕೆಟ್ ದರ<br>ಉದ್ಯೋಗ/ಜೀವನೋಪಾಯ ನೆರವು<br>ತಾಯಿಯ ಆಹಾರಕ್ಕಾಗಿ ಮಕ್ಕಳ ಆರೈಕೆ ಮತ್ತು ರಕ್ಷಣೆ<br>ಸೌಲಭ್ಯಗಳು ಮೊಬೈಲ್ ಅಪ್ಲಿಕೇಶನ್ | • ಶಾಲೆಗೆ ಹೋಗುವ ಮಕ್ಕಳೊಂದಿಗೆ ಮಹಿಳೆಯರಿಗೆ ಮಾಸಿಕ ರಿಯಾಯಿತಿ ಪಾಸ್<br>• ನಿಲ್ದಾಣಗಳು ಮತ್ತು ವೇದಿಕೆಗಳನ್ನು ವಿಕಲಚೇತನರು, ಮಹಿಳೆಯರು ಮತ್ತು ಹಿರಿಯ ನಾಗರಿಕ ಸ್ನೇಹಿಯಾಗಿ ವಿನ್ಯಾಸಗೊಳಿಸಬೇಕು. ಸಾಕಷ್ಟು ಸಂಖ್ಯೆಯ ಲಿಫ್ಟ್‌ಗಳು ಮತ್ತು ಇಳಿಜಾರು ವ್ಯವಸ್ಥೆಗಳು ಲಭ್ಯವಿರಬೇಕು<br>• ಸಹಾಯಕ ಸಿಬ್ಬಂದಿಯೊಂದಿಗೆ ಅಡಚಣೆ-ಮುಕ್ತ ಎಸ್ಕಲೇಟರ್‌ಗಳು ಲಭ್ಯವಿರಬೇಕು<br>• ಗುತ್ತಿಗೆದಾರರಿಂದ ಸಮಾನ ವೇತನದೊಂದಿಗೆ ಉದ್ಯೋಗ<br>• ನಿಲ್ದಾಣ ಕೇಂದ್ರಗಳಲ್ಲಿ ಶಿಶುವಿಹಾರ ಅಥವಾ ಅಂಗನವಾಡಿ<br>• ಲಿಂಗ ಸಂವೇದಿ ಪೋಸ್ಟರ್, ಫ್ಲೈಯರ್ಸ್ ಮತ್ತು ಮಹಿಳಾ ಸಂರಕ್ಷಿತ ಕಾನೂನುಗಳ ಸಾರಾಂಶದ ಪ್ರದರ್ಶನ<br>• ಪ್ರಮುಖ ನಿಲ್ದಾಣದಲ್ಲಿ ತಾಯಿ ಮಗುವಿಗೆ ಹಾಲುಣಿಸಲು ಪ್ರತ್ಯೇಕ ಕೊಠಡಿ, ಆಂಬ್ಯುಲೆನ್ಸ್ ಸೌಲಭ್ಯ<br>• ಪ್ರಯಾಣಿಕರನ್ನು ಅವರ ಕುಟುಂಬ ಸದಸ್ಯರ ಮೂಲಕ ಟ್ರ್ಯಾಕ್ ಮಾಡಲು ಮೊಬೈಲ್ ಅಪ್ಲಿಕೇಶನ್ |

| | | | | |
|---|---|---|---|---|
| ಕಾರಿಡಾರ್ 4- ಮಹಿಳಾ ಉದ್ಯಮಿ ತರಬೇತುದಾರರು ಹೆಣ್ಣೂರು | 8 ನೇ ಸೆಪ್ಟಂಬರ್ 2022, ಬೆ. 11 ಗಂಟೆ | 11 ಮಹಿಳೆಯರು | ಆರೋಗ್ಯ ಮತ್ತು ನೈರ್ಮಲ್ಯದ ನಿರ್ವಹಣೆ -ಸುರಕ್ಷತೆ ವಿಲೇವಾರಿ ಮತ್ತು ಶುಚಿಗೊಳಿಸುವಿಕೆ ತುರ್ತು ಔಷಧಿಗಳ ಲಭ್ಯತೆ | • ಮೆಟ್ರೋ ರೈಲು ದರಕ್ಕಿಂತ ಭಿನ್ನವಾಗಿ, ಉಪನಗರ ರೈಲು ದರವು ಸಾಧಾರಣವಾಗಿರಬೇಕು<br>• ಎಲ್ಲಾ ನಿಲ್ದಾಣಗಳಲ್ಲಿ ಚೆನ್ನಾಗಿ ಸ್ವಚ್ಛಗೊಳಿಸಿದ ಶೌಚಾಲಯಗಳಿರಬೇಕು.<br>• ನಿಲ್ದಾಣಗಳ ನಿರ್ವಹಣೆಯನ್ನು ಮಹಿಳಾ ಸ್ವಸಹಾಯ ಸಂಘಗಳಿಗೆ ನೀಡಬೇಕು<br>• ಸ್ಯಾನಿಟರಿ ನ್ಯಾಪ್ಕಿನ್ ಪ್ಯಾಡ್ ಗಳ ಸುರಕ್ಷಿತ ವಿಲೇವಾರಿಗೆ ಪ್ರಮುಖ ನಿಲ್ದಾಣಗಳಲ್ಲಿ ಇನ್ಸಿನಿರೇಟರ್ ಲಭ್ಯವಿರಬೇಕು<br>• ಆಯುಧ ಪೂಜಾ ಉತ್ಸವಗಳಲ್ಲಿ ಕಾಲೇಜು ವಿದ್ಯಾರ್ಥಿಗಳಿಂದ ಸ್ವಚ್ಛತಾ ಅಭಿಯಾನ<br>• ಪ್ರಥಮ ಚಿಕಿತ್ಸಾ ಪೆಟ್ಟಿಗೆ ಮತ್ತು ಅಗ್ನಿಶಾಮಕವನ್ನು ಸಿದ್ಧವಾಗಿಟ್ಟುಕೊಳ್ಳಬೇಕು |

| ಸ್ಥಳ ಮತ್ತು ಪ್ರತಿವಾದಿಗಳ ವರ್ಗ | ದಿನಾಂಕ & ಸಮಯ | ಭಾಗೀದಾರರ ಸಂಖ್ಯೆ | ಚರ್ಚಿಸಲಾದ ವಿಷಯಗಳು | ಪಾಲುದಾರರಿಂದ ಪಡೆದ ಸಲಹೆಗಳು/ ಮನವಿಗಳು/ ಬೇಡಿಕೆಗಳು ಮತ್ತು ಕೈಗೊಂಡ ಕ್ರಮಗಳು |
|---|---|---|---|---|
| | | | | • ಮಹಿಳಾ ಪೊಲೀಸ್ ಮತ್ತು ಮಹಿಳಾ ವೈದ್ಯಕೀಯ ವೈದ್ಯರು ಲಭ್ಯವಿರಬೇಕು. |
| ಕಾರಿಡಾರ್ - 1 ಮತ್ತಿಕೇರೆ ಕೊಳಗೇರಿ,<br>ಮತ್ತಿಕೆರೆ ಬಾಧಿತ ಮಹಿಳೆಯರು | 9 ನೇ ಸೆಪ್ಟಂಬರ್ 2022, ಬೆಳಿಗ್ಗೆ 10.30 ಗಂಟೆಗೆ | 10 ಮಹಿಳೆಯರು | ಮರು ಸ್ಥಳಾಂತರದ ನಂತರ ಉದ್ಯೋಗ ನಷ್ಟ<br><br>ಹಾಲಿ ಇರುವ ಸಮುದಾಯ ಸ್ವಾಗತಿಸದೇ ಇರಬಹುದು<br><br>ಕೆಲಸದ ಸ್ಥಳಕ್ಕೆ ಸ್ಥಳಾಂತರದ ನಂತರದ ಪ್ರಯಾಣವು ಹೆಚ್ಚುವರಿ ಆರ್ಥಿಕ ಹೊರೆಯನ್ನು ಉಂಟುಮಾಡುತ್ತದೆ<br><br>ಮಕ್ಕಳ ಶಿಕ್ಷಣವನ್ನು ಸ್ಥಗಿತಗೊಳಿಸಬೇಕಾಗುತ್ತದೆ | ಮರು ಸ್ಥಳಾಂತರದ ನಂತರ ಅವರು ಎಲ್ಲೋ ದೂರದ ಪ್ರದೇಶಗಳಿಗೆ ವಲಸೆ ಹೋದರೆ, ಅವರು ಉದ್ಯೋಗವನ್ನು ಪಡೆಯಲು ಸಾಧ್ಯವಾಗುವುದಿಲ್ಲ, ಅದು ಅವರ ಜೀವನೋಪಾಯದ ಮೇಲೆ ತೀವ್ರವಾಗಿ ಪರಿಣಾಮ ಬೀರುತ್ತದೆ. ಹಾಗಾಗಿ ಸಮೀಪದ ಸರ್ಕಾರಿ ಖಾಲಿ ಜಾಗದಲ್ಲಿ ಪರ್ಯಾಯ ನಿವೇಶನಗಳನ್ನು ಮಂಜೂರು ಮಾಡುವಂತೆ ಸೂಚಿಸಿದರು.<br><br>ತಮ್ಮ ಸದ್ಯದ ವಸತಿ ಸಮುದಾಯವನ್ನು ಅದೇ ಪ್ರದೇಶಕ್ಕೆ ಸ್ಥಳಾಂತರಿಸಬೇಕೆಂದು ಅವರು ಬಯಸುತ್ತಾರೆ ಮತ್ತು ಕರ್ನಾಟಕ ಕೊಳೆಗೇರಿ ಅಭಿವೃದ್ಧಿ ಮಂಡಳಿಯ ಮೂಲಕ ಸಂತ್ರಸ್ತ ಕುಟುಂಬಗಳಿಗೆ ಮನೆಗಳನ್ನು ಹಂಚಿಕೆ ಮಾಡಬಹುದು.<br><br>ಸ್ಥಳಾಂತರಗೊಂಡ ಮಹಿಳೆಯು ಉದ್ದೇಶಿತ ಉಪನಗರ ಸೌಲಭ್ಯದಲ್ಲಿ ಉಚಿತ ಪ್ರಯಾಣದ ಪಾಸ್ ಅನ್ನು ನೀಡಬಹುದು ಇದರಿಂದ ಅವರು ತಮ್ಮ ಸದ್ಯದ ಉದ್ಯೋಗವನ್ನು ಕಳೆದುಕೊಳ್ಳುವುದಿಲ್ಲ<br><br>ಮಕ್ಕಳು ಶಾಲೆಯಿಂದ ಹೊರಗುಳಿಯುವುದನ್ನು ತಡೆಗಟ್ಟಲು ಶಿಕ್ಷಣ ಹಕ್ಕು ಕಾಯ್ದೆ (ಆರ್‌ಟಿಇ) ಅಡಿಯಲ್ಲಿ ಸ್ಥಳಾಂತರಗೊಂಡ ಶಾಲೆಗಳಿಗೆ ಪ್ರವೇಶ ಪಡೆಯಲು ಮಕ್ಕಳಿಗೆ ಆದ್ಯತೆ ನೀಡಲಾಗುವುದು. |

| | | | | |
|---|---|---|---|---|
| ಕಾರಿಡಾರ್ -1 ಅಕ್ಕಯ್ಯಪ್ಪ ಹಾರ್ಡನ್ ಮೋಹನ್ ಕುಮಾರ್ ನಗರ,<br><br>ಯಶವಂತಪುರ | 9ನೇ ಸೆಪ್ಟಂಬರ್ 2022,<br><br>ಮಧ್ಯಾಹ್ನ 12 ಗಂಟೆ | 8 | ಮರು ಸ್ಥಳಾಂತರದ ನಂತರದ ಪ್ರಯಾಣ ವೆಚ್ಚಗಳು<br><br>**ಹೊಸದಾಗಿ ನಿರ್ಮಿಸಲಾದ ಕಟ್ಟಡಗಳನ್ನು ಕಳೆದುಕೊಳ್ಳುವುದರಿಂದ ಭಾರಿ ಆರ್ಥಿಕ ನಷ್ಟವಾಗುತ್ತದೆ.**<br><br>**ಮರು ಸ್ಥಳಾಂತರದ ನಂತರ ಹಾಲಿ ಉದ್ಯೋಗದ ನಷ್ಟ**<br><br>ಅಧಿಕ ದರದಿಂದ ಹಾಲಿ ಇರುವ ಸಾರ್ವಜನಿಕ ಸಾರಿಗೆ ಕಳೆದುಕೊಳ್ಳುವ ಭೀತಿ | ಭಾಗವಹಿಸುವವರ ಗಂಡಂದಿರು ಯಶವಂತಪುರ ಮತ್ತು ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲು ನಿಲ್ದಾಣಗಳಲ್ಲಿ ಹಮಾಲಿ/ಹ್ಯಾಂಗ್ ಕೂಲಿಗಳಾಗಿ ಕೆಲಸ ಮಾಡುತ್ತಿದ್ದಾರೆ. ಅವರನ್ನು ದೂರದ ಸ್ಥಳಗಳಿಗೆ ಸ್ಥಳಾಂತರಿಸಿದರೆ, ಸಾರ್ವಜನಿಕ ಸಾರಿಗೆಯಲ್ಲಿ ಉಚಿತವಾಗಿ ಪ್ರಯಾಣಿಸಲು ಅವರಿಗೆ ಅವಕಾಶ ನೀಡಬೇಕಾಗುತ್ತದೆ.<br><br>ತಮ್ಮ ಮನೆಗಳನ್ನು ನಿರ್ಮಿಸಿಕೊಳ್ಳಲು ಖಾಸಗಿ ಲೇವಾದೇವಿದಾರರಿಂದ ಸಾಲ ಪಡೆದಿದ್ದೇವೆ ಎಂದು ಭಾಗವಹಿಸುವವರು ತಮ್ಮ ದುಃಖವನ್ನು ವ್ಯಕ್ತಪಡಿಸಿದರು. ಆದ್ದರಿಂದ, ಪರಿಹಾರ ಪ್ಯಾಕೇಜ್ ಅನ್ನು ಲೆಕ್ಕಾಚಾರ ಮಾಡುವಾಗ ಅವರು ತಮ್ಮ ಎಲ್ಲಾ ಆರ್ಥಿಕ ನಷ್ಟವನ್ನು ಪರಿಗಣಿಸಲು ಮನವಿ ಮಾಡಿದರು.<br><br>ಸ್ಥಳಾಂತರಗೊಂಡ ನಂತರದ ಸ್ಥಳಗಳಲ್ಲಿ, ಕೆ-ರೈಡ್ ಸ್ಥಳಾಂತರಗೊಂಡ ಸ್ಥಳಗಳಲ್ಲಿ ಮಹಿಳೆ-ಬಾಧಿತ ಕುಟುಂಬಗಳಿಗೆ ಪ್ರತ್ಯೇಕವಾಗಿ ಉದ್ಯೋಗ ಮೇಳವನ್ನು ಆಯೋಜಿಸಬಹುದು. ಕೌಶಲ್ಯರಹಿತ ಉದ್ಯೋಗದಿಂದ ಅರೆ ಕೌಶಲ್ಯದ ಉದ್ಯೋಗಕ್ಕೆ ಸೇರಲು ಮಹತ್ವಾಕಾಂಕ್ಷೆಯ ಮಹಿಳಾ ಕುಟುಂಬಗಳಿಗೆ ಸಾಕಷ್ಟು ಮತ್ತು ಸೂಕ್ತವಾದ ತರಬೇತಿಯನ್ನು ನೀಡಬಹುದು. |

| ಸ್ಥಳ ಮತ್ತು ಪ್ರತಿವಾದಿಗಳ ವರ್ಗ | ದಿನಾಂಕ & ಸಮಯ | ಭಾಗೀದಾರ ರ ಸಂಖ್ಯೆ | ಚರ್ಚಿಸಲಾದ ವಿಷಯಗಳು | ಪಾಲುದಾರರಿಂದ ಪಡೆದ ಸಲಹೆಗಳು/ ಮನವಿಗಳು/ ಬೇಡಿಕೆಗಳು ಮತ್ತು ಕೈಗೊಂಡ ಕ್ರಮಗಳು |
|---|---|---|---|---|
| | | | | ಪ್ರಸ್ತುತ ಸಾರಿಗೆ ವ್ಯವಸ್ಥೆಯ ಅತಿಯಾದ ದರದ ಕಾರಣದಿಂದಾಗಿ ಲಭ್ಯವಿರುವ ಎಲ್ಲಾ ನಗರ ಸೌಕರ್ಯಗಳನ್ನು ಪಡೆಯುವುದು ಕಷ್ಟಕರವಾಗಿದೆ ಆದ್ದರಿಂದ, ಸಾಧಾರಣ ದರದ ಉಪನಗರ ಸೌಲಭ್ಯವು ಲಭ್ಯವಿರುವ ಎಲ್ಲಾ ನಗರ ಸೌಕರ್ಯಗಳನ್ನು ಪಡೆಯಲು ಅವರಿಗೆ ಅನುವು ಮಾಡಿಕೊಡುತ್ತದೆ. |

**ಕೋಷ್ಟಕ 12. ಬಿಎಸ್ ಆರ್ ಪಿ ಲಿಂಗ ಕ್ರಿಯಾ ಯೋಜನೆ (GAP)**

| ಚಟುವಟಿಕೆ | ಮಾನದಂಡ/ಗುರಿ | ಜವಾಬ್ದಾರಿ | ಕಾಲಮಿತಿ(ವರ್ಷ) | ಬಜೆಟ್ (ರೂ.ಗಳಲ್ಲಿ) |
|---|---|---|---|---|
| **ಔಟ್ ಪುಟ್ -1 : ಬೆಂಗಳೂರು ಉಪನಗರ ರೈಲು ಯೋಜನೆ – 4 ಕಾರಿಡಾರ್ ಗಳನ್ನು ಪೂರ್ಣಗೊಳಿಸುವುದು** | | | | |
| 1ಎ. ಕೆ-ರೈಡ್ ನ ಉಪನಗರ ರೈಲು ಯೋಜನೆ ನಿರ್ಮಾಣ ವಿನ್ಯಾಸದಲ್ಲಿ ವಯೋವೃದ್ಧರು, ಮಹಿಳೆಯರು, ಮಕ್ಕಳು, ದಿವ್ಯಾಂಗರು, ವಿಶೇಷಚೇತನರು ಮತ್ತು ತೃತೀಯ ಲಿಂಗಿಗಳ ಅಗತ್ಯತೆಗಳಿಗೆ ಒತ್ತು ನೀಡಿ, | 1. (i) ಒಂದು ಬೋಗಿಯನ್ನು ಮಹಿಳೆಯರಿಗಾಗಿ ಮೀಸಲಿಡುವುದು (ii) 8 ಆಸನಗಳು (4 ಮುಂದೆ ಮತ್ತು 4 ಹಿಂದೆ) ಪ್ರತಿ ಕೋಚ್ ನಲ್ಲಿ ಮಹಿಳೆಯರು, ವೃದ್ಧರು, ವಿಶೇಷಚೇತನರು ಮತ್ತು ಆರೈಕೆದಾರರಿಗಾಗಿ ಮೀಸಲಿಡುವುದು.ಕೋವಿಡ್-19 ಮುನ್ನೆಚ್ಚರಿಕೆ ರಾಷ್ಟ್ರೀಯ / ರಾಜ್ಯದ ಅಗತ್ಯತೆಗಳ ಸ್ಥಿರ ಸೂಚನೆಗಳನ್ನು ಪ್ರಚುರಪಡಿಸುವುದು. ; (iii) ಪ್ರತಿಯೊಂದು ರೈಲಿನ ಮೊದಲ ಹಾಗೂ ಕೊನೆಯ ಬೋಗಿಯಲ್ಲಿ ಗಾಲಿ ಕುರ್ಚಿಗೆ(ವ್ಹೀಲ್ ಚೇರ್) ನಿರ್ದಿಷ್ಟ ಸ್ಥಳಾವಕಾಶ ಒದಗಿಸುವುದು. ;(iv) ಎಲ್ಲಾ ನಿಲ್ದಾಣಗಲ್ಲಿ ಪ್ಲಾಟ್ ಫಾರ್ಮ್ ಮಟ್ಟದಲ್ಲೇ ಬೋರ್ಡಿಂಗ್ ವ್ಯವಸ್ಥೆ ಕಲ್ಪಿಸುವುದು. | ಕೆ-ರೈಡ್ ಮೂಲಕ ಲಿಂಗ ಕೇಂದ್ರಿತ ಮತ್ತು ಲಿಂಗ ತಜ್ಞರು | 1-5 ವರ್ಷ | ಯೋಜನೆ ವೆಚ್ಚದಲ್ಲಿ ಸೇರಿದೆ |

| | | | | |
|---|---|---|---|---|
| ಲಿಂಗ ಕೇಂದ್ರಿತ ಸುರಕ್ಷತಾ ಮತ್ತು ಸಾರ್ವಜನಿಕ ಆರೋಗ್ಯ ಕಾಳಜಿಗಳನ್ನು ಒಗ್ಗೂಡಿಸುವುದು.<br><br>1ಬಿ. ಹೊರ ವಲಯದ ನಿಲ್ದಾಣಗಳನ್ನು ಬಹುಮಾದರಿ ಸೌಕರ್ಯ ಮತ್ತು ಇಡಬ್ಲ್ಯೂಸಿಟಿಡಿ ಪ್ರತಿಸ್ಪಂದನಾತ್ಮಕ ಅಂಶಗಳು ಒಳಗೊಂಡಂತೆ ನಿರ್ಮಿಸುವುದು. | 2. (i) ಮಹಿಳೆಯರಿಗೆ ಮೀಸಲಿಟ್ಟ ಬೋಗಿಗೆ ಹೊಂದಿಕೊಂಡಂತೆ ಮಹಿಳೆಯರಿಗಾಗಿ ಸೂಕ್ತ ಸಂಕೇತಗಳಿರುವಂತೆ ಉತ್ತಮ ಗಾಳಿ ಬೆಳಕಿನ ನಿರ್ದಿಷ್ಟ ಕಾಯ್ದಿರಿಸಿದ ಪ್ರದೇಶವಿರಬೇಕು. (ii) ಮಹಿಳಾ ಭದ್ರತಾ ಸಿಬ್ಬಂದಿ.<br>, (iii) ಸೂಕ್ತ ಸಂಕೇತಗಳೊಂದಿಗೆ ನಿಲ್ದಾಣದ ವ್ಯವಸ್ಥಾಪಕರೊಂದಿಗೆ ಸಂವಾದ ನಡೆಸಲು ಒನ್-ವೇ, ವಾಯ್ಸ್ ಇಂಟರ್ ಕಾಮ್, ಸಂವಹನ ವ್ಯವಸ್ಥೆ<br>,(iv) ಮಹಿಳೆಯರ ಬೋಗಿ ಸೇರಿದಂತೆ ಪ್ರತಿ ಬೋಗಿಯಲ್ಲಿ ಪ್ರಯಾಣಿಕರ ತುರ್ತು ಅಲಾರಾಂ (ಪಿಇಎ)ಗಳನ್ನು ಅಳವಡಿಸಬೇಕು. (v) ಎಲ್ಲ ನಿಲ್ದಾಣಗಳಲ್ಲಿ ಸಹಾಯವಾಣಿ ದೂರವಾಣಿ ಸಂಖ್ಯೆಗಳು ಮತ್ತು ತುರ್ತು ದೂರವಾಣಿ ಸಂಖ್ಯೆಗಳು ಹಾಗೂ ಮಾಹಿತಿಯನ್ನು ಕನ್ನಡ, ಹಿಂದಿ ಮತ್ತು ಇಂಗ್ಲಿಷ್ ನಲ್ಲಿ ಪ್ರದರ್ಶಿಸಬೇಕು. (i) ಗಾಲಿ ಕುರ್ಚಿಯಲ್ಲಿ ಒಡಾಡುವವರಿಗೆ ಮೆಟ್ಟಿಲು ರಹಿತ ಸಾರ್ವತ್ರಿಕವಾಗಿ ಲಭ್ಯವಿರುವಂತಹ ಮಾರ್ಗ ; (ii) ಇತರ ಬಳಕೆದಾರರಿಗೆ ಟ್ರ್ಯಾಕ್ ಟೈಲ್ ಪೇವರ್ಸ್ ಒಳಗೊಂಡ ಸಾರ್ವತ್ರಿಕವಾಗಿ ಲಭ್ಯವಿರುವ ಮಾರ್ಗ; (iii) ಸ್ಪಷ್ಟ ಮತ್ತು ಅಚ್ಚುಕಟ್ಟಾದ ಸಂಕೇತಗಳನ್ನು ಒದಗಿಸುವುದು. (iv) ಪ್ಲಾಟ್ ಫಾರ್ಮ್ ಗಳ ಪ್ರವೇಶಕ್ಕೆ ಅನುಕೂಲವಾಗುವಂತೆ ಸ್ಯಾರಿಗಾರ್ಡ್ ಒಳಗೊಂಡ ಕನಿಷ್ಠ ಒಂದು ಎಸ್ಕಲೇಟರ್ ಇರಬೇಕು. ಅದಕ್ಕೆ ಅನುಗುಣವಾಗಿ ಎಲ್ಲ ನಿಲ್ದಾಣಗಳಲ್ಲಿ ಮಲ್ಟಿ ಮಾಡಲ್ ಮತ್ತು ಟರ್ಮಿನಲ್ ನಿಲ್ದಾಣಗಳು ಇರಬೇಕು. | | | |

| ಚಟುವಟಿಕೆ | ಮಾನದಂಡ/ಗುರಿ | ಜವಾಬ್ದಾರಿ | ಕಾಲಮಿತಿ(ವರ್ಷ ) | ಬಜೆಟ್ (ರೂ.ಗಳಲ್ಲಿ) |
|---|---|---|---|---|
| 1ಸಿ.ನಿರ್ಮಾಣ ಕಾಮಗಾರಿಯಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆಯನ್ನು ಬೆಂಬಲಿಸುವುದು | 4. ಎಲ್ಲ ನಿಲ್ದಾಣಗಳಲ್ಲಿ ಸ್ಪಷ್ಟ ಹಾಗೂ ಅಚ್ಚುಕಟ್ಟಾದ ಸಂಕೇತಗಳನ್ನೊಳಗೊಂಡಂತೆ ಮಹಿಳೆಯರು ಮತ್ತು ಪುರುಷರಿಗಾಗಿ ಪ್ರತ್ಯೇಕ ಉಚಿತ ಸ್ವಚ್ಛ ಸಾರ್ವಜನಿಕ ಶೌಚಾಲಯಗಳು ಮತ್ತು ಸಾರ್ವತ್ರಿಕವಾಗಿ ಲಭ್ಯವಿರುವ ಉಭಯ ಲಿಂಗಿ[17] ಶೌಚಾಲಯಗಳು<br>5. ನರ್ಸಿಂಗ್ ಕೋಣೆಗಳು,[18] ಮಗುವಿಗೆ ಹಾಲುಣಿಸುವ ಜಾಗ, ಲಿಫ್ಟ್ ಮತ್ತು ಕಾಯುವಿಕೆ ಪ್ರದೇಶ (ಹವಾಮಾನ ಶೆಲ್ಟರ್ )ಗಳನ್ನು ಎಲ್ಲಾ ನಿಲ್ದಾಣಗಳಲ್ಲಿ ಒದಗಿಸುವುದು.<br>6.<br>. ಎಲ್ಲಾ ನಿಲ್ದಾಣಗಳಲ್ಲಿ ಉಪನಗರ ರೈಲ್ವೆ ಸಿಬ್ಬಂದಿಗೆ ಲಿಂಗ-ಬೇರ್ಪಡಿಸಿದ ವಿಶ್ರಾಂತಿ ಕೊಠಡಿಗಳು ಮತ್ತು ಶೌಚಾಲಯಗಳು<br>. 7. 2 ಮುಖ್ಯ ನಿಲ್ದಾಣಗಳಲ್ಲಿ ಉಪನಗರ ರೈಲ್ವೆ ಸಿಬ್ಬಂದಿಗೆ 1 ಶಿಶುವಿಹಾರ<br>. 8. ಬೋಗಿಗಳ ಮೇಲ್ವಿಚಾರಣೆ ಮಾಡಲು ಅಳವಡಿಸಲಾಗಿರುವ ಸಿಸಿಟಿವಿ ಕ್ಯಾಮೆರಾಗಳು, ಪಾರ್ಕಿಂಗ್ ಸ್ಥಳಗಳು ಸೇರಿದಂತೆ ಎಲ್ಲಾ ನಿಲ್ದಾಣಗಳ ಸಾರ್ವಜನಿಕವಾಗಿ ಲಭ್ಯವಾದ ಪ್ರದೇಶಗಳು, ಸಾರ್ವತ್ರಿಕವಾಗಿ ಪ್ರವೇಶಿಸಬಹುದಾದ ಫುಟ್‌ಪಾತ್‌ಗಳೊಂದಿಗೆ ಎಲ್ಲಾ ಉಪನಗರ ರೈಲು ನಿಲ್ದಾಣಗಳ ಸುತ್ತಲೂ ಚೆನ್ನಾಗಿ ಬೆಳಕಿನ ವ್ಯವಸ್ಥೆ ಇರುವ ಪಿಕ್-ಅಪ್ ಮತ್ತು ಡ್ರಾಪ್-ಆಫ್ ಪ್ರದೇಶಗಳು.<br>10. (i) ಸಂಯೋಜಿತ ಇಡಬ್ಲ್ಯುಸಿಡಿಟಿ-ಸ್ನೇಹಿ ಸಂಕೇತ ವ್ಯವಸ್ಥೆ: ಎಲ್ಲಾ ಕೋಚ್‌ಗಳು ಮತ್ತು ಎಲ್ಲಾ ನಿಲ್ದಾಣಗಳಲ್ಲಿ ದ್ವಿಭಾಷಾ ದೃಶ್ಯ, ಮುದ್ರಣ ಮತ್ತು ಮಲ್ಟಿಮೀಡಿಯಾ ಸಾರ್ವಜನಿಕ ಆರೋಗ್ಯ/ಸುರಕ್ಷತೆ, ಸಾಂಕ್ರಾಮಿಕ ರೋಗಗಳ ತಡೆಗಟ್ಟುವಿಕೆ, ಕೋವಿಡ್-19 [19]ನಿಯಂತ್ರಣಕ್ಕೆ ಸಂಬಂಧಿಸಿದವುಗಳನ್ನು ಒಳಗೊಂಡಂತೆ ಲೈಂಗಿಕ ಕಿರುಕುಳಕ್ಕೆ ಶೂನ್ಯ ಸಹಿಷ್ಣುತೆ ವಿಧಾನ, ಸಹಾಯವಾಣಿ ಸಂಖ್ಯೆ ಅರಿವು ಮತ್ತಿತರ ಸಾರ್ವಜನಿಕ ಶಿಕ್ಷಣ ಸಂದೇಶಗಳನ್ನು ಉತ್ತೇಜಿಸುತ್ತದೆ.<br>11. ನಿಲ್ದಾಣಗಳ ಒಳ ಪ್ರವೇಶ ಮತ್ತು ನಿರ್ಗಮನ ಅತ್ಯಂತ ಪರಿಣಾಮಕಾರಿ ಲಭ್ಯತೆ ಒಳಗೊಂಡಿರುವ ಎಲ್ಲಾ ಬಳಕೆದಾರರಿಗಾಗಿ ನಕ್ಷೆಗಳನ್ನು ಒಳಗೊಂಡ ಬಿವಿವರ BSRP ವೆಬ್‌ಸೈಟ್ ನಲ್ಲಿ ಲಭ್ಯ<br>12. (i) ಮಹಿಳಾ ಬೋಗಿಗಾಗಿ ಪಿಂಕ್ ಬಣ್ಣದ ಡಿಮಾರ್ಕೇಶನ್ | | | |

| | | | | |
|---|---|---|---|---|
| | ಮತ್ತು ಮಹಿಳಾ ಪ್ರಯಾಣಿಕರ ಸುಲಭ ಗುರುತಿಸುವಿಕೆ ಮತ್ತು ಅನುಕೂಲಕ್ಕಾಗಿ ಅದೇ ಬಣ್ಣದಲ್ಲಿ ಪ್ಲಾಟ್‌ಫಾರ್ಮ್‌ನಲ್ಲಿ ಅದರ ಸ್ಥಾನ ನಿಗದಿಪಡಿಸುವುದು.<br>(ii) ಮಹಿಳಾ ಪ್ರಯಾಣಿಕರಿಗೆ ಮೀಸಲಾದ ಬೋಗಿಯ ದಿಕ್ಕನ್ನು ಸೂಚಿಸುವ ಸಹಾಯವಾಣಿ ಸಂಖ್ಯೆಗಳು ಮತ್ತು ಬಣ್ಣ- ಸಂಕೇತದ ದಿಕ್ಸೂಚಿ (ಡೈರೆಕ್ಷನಲ್) ಚಿಹ್ನೆಗಳನ್ನು ಹೊಂದಿರುವ ಸೂಚನಾ ಫಲಕಗಳನ್ನು ಪ್ರತಿ ಉಪನಗರ ನಿಲ್ದಾಣದ ಆಯಕಟ್ಟಿನ ಸ್ಥಳಗಳಲ್ಲಿ ಇರಿಸಲಾಗುವುದು. | | | |

[17] *Toilet facilities will be provided in paid area. The key aspects include a manual flush, handless dust bins, diaper changing stations, and exclusive sanitary pad disposal bins*

[18] *The nursing rooms will include a comfortable chair with supportive arms, a small table, electrical outlet/s, diaper changing station, and a lock for privacy. Nursing rooms will be provided to stations based on need survey.*

[19] *Consistent with national and state requirements.*

| ಚಟುವಟಿಕೆ | ಮಾನದಂಡ/ಗುರಿ | ಜವಾಬ್ದಾರಿ | ಕಾಲಮಿತಿ(ವರ್ಷ) | ಬಜೆಟ್ (ರೂ.ಗಳಲ್ಲಿ) |
|---|---|---|---|---|
| | (iii) ಮಹಿಳಾ ಪ್ರಯಾಣಿಕರು ಯಾವುದೇ ಅನಪೇಕ್ಷಿತ ಘಟನೆಯ ಸಂದರ್ಭದಲ್ಲಿ ತಮ್ಮ ದೂರನ್ನು ಸಲ್ಲಿಸಲು ಮತ್ತು ದಾಖಲಾದ ಪ್ರಕರಣಗಳ ಸರಿಯಾದ ದಾಖಲಾತಿಗಳ ಸಲ್ಲಿಸುವ ವೇಳೆ ತರಬೇತಿ ಪಡೆದ ಮಹಿಳೆಯರು ಮತ್ತು ಪುರುಷರಿಂದ ಕಾರ್ಯನಿರ್ವಹಿಸುವ ಮೇಜುಗಳು/ಕೋಣೆಗಳು.<br>(iv) ಪೊಲೀಸ್ ಸಹಾಯಕ್ಕಾಗಿ ತಕ್ಷಣದ ವಿನಂತಿಗಾಗಿ ಹತ್ತಿರದ ಪೊಲೀಸ್ ಠಾಣೆಗಳಿಗೆ ನೇರ ಮಾರ್ಗಗಳು<br>1. ಯೋಜನೆಯ ಜಿಇಎಸ್ ಐ ಅಂಶಗಳ ಬಗ್ಗೆ ಹೆಚ್ಚಿನ ಜ್ಞಾನವಿರುವ ಶೇಕಡ 50ರಷ್ಟು ಸಿವಿಲ್ ಕಾಮಗಾರಿ ಗುತ್ತಿಗೆದಾರ ಸಿಬ್ಬಂದಿ ಇರಬೇಕು, ಅವರಲ್ಲಿ<br>(i) ನಿರ್ಮಾಣ ಕಾಮಗಾರಿಯಲ್ಲಿ ಪುರುಷರು ಮತ್ತು ಮಹಿಳೆಯರಿಗೆ ಸಮಾನ ಅವಕಾಶಗಳ ಉತ್ತೇಜನ ;<br>(ii) ರಾಷ್ಟ್ರೀಯ ಪ್ರಮುಖ ಮಾನದಂಡಗಳ ಪಾಲನೆ (ಉದಾ., ಬಿಡ್ಡಿಂಗ್ ದಾಖಲೆಗಳು, ಪೋಸ್ಟರ್ ಮತ್ತು ಹೋರ್ಡಿಂಗ್ ಗಳಲ್ಲಿ ಸಮಾನ ಪಾವತಿ ಮತ್ತು ಸಮಾನ ಅವಕಾಶಗಳ ಪ್ರದರ್ಶನಗಳನ್ನು ಸೇರ್ಪಡೆ ಮಾಡಬೇಕು ಮತ್ತು<br>(iii) ಎಲ್ಲಾ ಸಿವಿಲ್ ಕಾಮಗಾರಿ ಗುತ್ತಿಗೆದಾರರು ಕಾರ್ಮಿಕರ ಹೆಸರು, ಲಿಂಗ ವಿವರಗಳುಳ್ಳ ದಾಖಲೆಗಳನ್ನು ಹೊಂದಿರಬೇಕು.<br>2. ಎಲ್ಲಾ ಕಾಲದಲ್ಲಿ ಶಿಬಿರಗಳಲ್ಲಿ, ಕಾಮಗಾರಿ ಸ್ಥಳಗಳಲ್ಲಿ ,ಮಹಿಳೆಯರಿಗೆ ಅಗತ್ಯ ಸೌಕರ್ಯಗಳನ್ನು ಕಲ್ಪಿಸಿಕೊಡುವುದು.<br>20<br>. 3. ಸಿಬ್ಬಂದಿ ಮತ್ತು ಗುತ್ತಿಗೆದಾರರಿಗೆ ನಡವಳಿಕೆ ಮಾರ್ಗಸೂಚಿಗಳನ್ನು ತಯಾರಿಸಿ ಮತ್ತು ಇಡಬ್ಲ್ಯೂಸಿಡಿಟಿ ಪ್ರತಿಸ್ಪಂದನೆಯಲ್ಲಿ ಲೈಂಗಿಕ ಕಿರುಕುಳದ ಸಂದರ್ಭಗಳನ್ನು ಹೇಗೆ ತಡೆಯುವುದು ಮತ್ತು ಪರಿಹರಿಸುವುದು ಎಂಬುದರ ಕುರಿತು ಕೆ ರೈಡ್ ಮೂಲಕ ಪ್ರಮಾಣಿತ ಕಾರ್ಯಾಚರಣಾ ಕಾರ್ಯವಿಧಾನಗಳನ್ನು ಅಭಿವೃದ್ಧಿಪಡಿಸಲಾಗಿದೆ. | | | |
| **ಔಟ್ ಪುಟ್ 2 ಬೆಂಗಳೂರು ಉಪನಗರ ರೈಲ್ವೆ ಸಾಮರ್ಥ್ಯ (ಕೆರೈಡ್) ಮತ್ತು ಸೂಕ್ತ ರಾಜ್ಯ ಸರ್ಕಾರದ ಸಂಸ್ಥೆಗಳ ಸುಧಾರಣೆ(ಸಾಂಸ್ಥಿಕ ಅಭಿವೃದ್ಧಿಯ ಭಾಗ)** | | | | |

| | | | | |
|---|---|---|---|---|
| ಕೆ-ರೈಡ್ ನ ಕಾರ್ಯ ವಿಧಾನದಲ್ಲಿ ಜಿಇಎಸ್ಐ ಕ್ರಮಗಳನ್ನು ಸೇರ್ಪಡೆ ಮಾಡಿಕೊಳ್ಳಬೇಕು | 1. ಕೆ-ರೈಡ್ ಕಚೇರಿಯಲ್ಲಿ ಅಗತ್ಯ ಸಿಬ್ಬಂದಿಯೊಂದಿಗೆ ಲಿಂಗ ಕೇಂದ್ರಿತ ಅಂಶಕ್ಕೆ ಒತ್ತು ನೀಡಿ ಹಿರಿಯ ಸಲಹೆಗಾರರು/ಸಿಬ್ಬಂದಿ (ಮಹಿಳೆಯರನ್ನು) ನಿಯೋಜಿಸುವುದು.<br>2. ಮೊದಲ ವರ್ಷ ಕೆ-ರೈಡ್ ನಲ್ಲಿ ಜಿಇಎಸ್ ಐ ಸಮಿತಿ ರಚಿಸಲಾಗಿದೆ ಮತ್ತು ತ್ರೈಮಾಸಿಕ ಸಭೆಗಳನ್ನು ನಡೆಸಲಾಗಿದೆ ಹಾಗೂ ನಡಾವಳಿಗಳನ್ನು ದಾಖಲಿಸಲಾಗಿದೆ.<br>3. ಮೊದಲ ವರ್ಷದೊಳಗೆ ಕೆ-ರೈಡ್ ಲಿಂಗ ಸ್ನೇಹಿ ದುಡಿಯುವ ಸ್ಥಳದ ನೀತಿಯನ್ನು ರೂಪಿಸಿದೆ, ಈಗಾಗಲೇ ಶೇ.10ರಷ್ಟು ಸಿಬ್ಬಂದಿಗೆ ತರಬೇತಿ ನೀಡಲಾಗಿದೆ.<br>4. ಎಲ್ಲಾ ಜಿಇಎಸ್ ಐ-ಸಂಬಂಧಿತ ಸೂಚಕಗಳು/ಗುರಿಗಳನ್ನು ಯೋಜನೆಯಲ್ಲಿ ಸೇರಿಸಲಾಗಿದ್ದು, ಆ ಚಟುವಟಿಕೆಗಳ ಸಮಯೋಚಿತ ಮತ್ತು ಪರಿಣಾಮಕಾರಿ ಮೇಲ್ವಿಚಾರಣೆಗಾಗಿ ಕೆ-ರೈಡ್ ಮಟ್ಟದಲ್ಲಿ ಪ್ರಾಜೆಕ್ಟ್ ಕಾರ್ಯಕ್ಷಮತೆ ಮಾನಿಟರಿಂಗ್ ವ್ಯವಸ್ಥೆಯನ್ನು ಸ್ಥಾಪಿಸಲಾಗಿದೆ. | ವ್ಯವಸ್ಥಾಪಕ ನಿರ್ದೇಶಕರು ಕೆ-ರೈಡ್ | ಯೋಜನೆಯ ಅವಧಿಯುದ್ದಕ್ಕೂ | 50,00,000.00 |

[20] *Separate toilets, creche facilities, accommodation and rest areas for women, wherever needed.*

| ಚಟುವಟಿಕೆ | ಸೂಚಕಗಳು/ಗುರಿ | ಜವಾಬ್ದಾರಿ | ಕಾಲಮಿತಿ (ವರ್ಷ) | ಬಜೆಟ್ (ರೂ.ಗಳಲ್ಲಿ) |
|---|---|---|---|---|
| **ಔಟ್‌ಪುಟ್-3: ಸಬಲೀಕರಣ** | | | | |
| ಸ್ಥಳಾಂತರಗೊಂಡವರ ಪುನರ್ವಸತಿ | 1. ನಿವೇಶನ/ಮನೆಯ ಪುನರ್ವಸತಿ ನೆರವನ್ನು ಪತಿ ಮತ್ತು ಪತ್ನಿಯ ಜಂಟಿ ಖಾತೆಯಲ್ಲಿ ಪಾವತಿಸಲಾಗುತ್ತದೆ.<br>2. ಸ್ಥಳಾಂತರಗೊಂಡ ಮಹಿಳಾ ಪ್ರಧಾನದ ಎಲ್ಲಾ ಕುಟುಂಬಗಳಿಗೆ ಹೆಚ್ಚುವರಿ ಪುನರ್ವಸತಿ ನೆರವು ನೀಡಲಾಗುವುದು.<br>3. ಮಹಿಳಾ ಪ್ರಧಾನ ಕುಟುಂಬಗಳು ಮತ್ತು ಇತರ ದುರ್ಬಲ ಕುಟುಂಬಗಳ ಒಬ್ಬ ಮಹಿಳಾ ಸದಸ್ಯರಿಗೆ ಕೌಶಲ್ಯ ಅಭಿವೃದ್ಧಿ ತರಬೇತಿ (ಅಗತ್ಯ ಮೌಲ್ಯಮಾಪನ ಅಧ್ಯಯನದ ಆಧಾರದ ಮೇಲೆ) ನೀಡಲಾಗುತ್ತದೆ.<br>4. ಮಹಿಳಾ ಉದ್ಯಮಿಗಳು/ಮಹಿಳಾ ಸ್ವಸಹಾಯ ಸಂಘಗಳಿಗೆ ವಾಣಿಜ್ಯ ಸ್ಥಳ/ಕಿಯೋಸ್ಕ್‌ಗಳಿಗಾಗಿ ಮೀಸಲಾತಿ (ಸಂಖ್ಯೆಯನ್ನು ಕೆಆರ್‌ಐಡಿಇ ನಿರ್ಧರಿಸುತ್ತದೆ) | ವ್ಯವಸ್ಥಾಪಕ ನಿರ್ದೇಶಕರು, ಕೆಆರ್‌ಐಡಿಇ | 1- 5 ವರ್ಷಗಳು | ಇಎಂನಲ್ಲಿ ಸೇರಿಸಲಾಗಿದೆ |

## 1.6. ಪಾಲುದಾರರ ತೊಡಗಿಸುಕೊಳ್ಳುವ ಯೋಜನೆ

ಪರಿಣಾಮಕಾರಿ ಸಂವಹನ ಕಾರ್ಯತಂತ್ರವನ್ನು ಯೋಜಿಸಲು ಪ್ರಾರಂಭದಲ್ಲೇ ಪಾಲುದರರೊಂದಿಗೆ ವಿಶ್ಲೇಷಣೆ ಮಾಡಲಾಗಿದೆ. ಇದುವರೆಗೆ ನಡೆದ ಸಮಾಲೋಚನೆ ಹಾಗೂ ವಿಶ್ಲೇಷಣೆಯ ಆಧಾರದ ಮೇಲೆ ಪಾಲುದಾರರನ್ನು ತೊಡಗಿಸಿಕೊಳ್ಳುವ ಯೋಜನೆಯನ್ನು ಅಭಿವೃದ್ಧಿಪಡಿಸಲಾಗಿದೆ. ಕಾರಿಡಾರ್‌ಗಳ ಹಂತಹಂತದ ಅಭಿವೃದ್ಧಿಯಿಂದಾಗಿ, ನಿರ್ಮಾಣ ಪೂರ್ವ ಮತ್ತು ಅನುಷ್ಠಾನದ ಹಂತಗಳಲ್ಲಿನ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಪ್ರತಿ ಕಾರಿಡಾರ್‌ಗೆ ಎಸ್‌ಇಪಿ ಚಟುವಟಿಕೆಗಳು ಭಿನ್ನ ಕಾಲಮಿತಿ ಹೊಂದಿರುತ್ತವೆ ಎಂಬುದನ್ನು ಗಮನಿಸಬೇಕು.

**Table 13. ಬಿಎಸ್‌ಆರ್‌ಪಿ ಪಾಲುದಾರರ ತೊಡಗಿಸಿಕೊಳ್ಳುವ ಯೋಜನೆ (ಎಸ್‌ಇಪಿ)**

| ಉದ್ದೇಶಿತ ಪಾಲುದಾರರು | ಬಹಿರಂಗಪಡಿಸಬೇಕಾದ ಮಾಹಿತಿ | ಮಾಹಿತಿ ಪ್ರಸಾರಕ್ಕೆ ಬಳುಸವ ಮಾಧ್ಯಮ ಮತ್ತು ವಿಧಾನ | ಆವರ್ತನ | ಜವಾಬ್ದಾರಿಗಳು |
|---|---|---|---|---|
| ನಿರ್ಮಾಣ ಪೂರ್ವ ಹಂತ (ಯೋಜನೆ ಮತ್ತು ಸಮೀಕ್ಷೆ) | | | | |
| ಯೋಜನೆಯ ಪ್ರದೇಶಗಳಲ್ಲಿ ವಾಸಿಸುವ ದುರ್ಬಲರು ಸೇರಿದಂತೆ ಇತರರು | ✓ ಯೋಜನಾ ವ್ಯಾಪ್ತಿ ಮತ್ತು ವಿನ್ಯಾಸದ ವಿವರಗಳು, ಪರಿಣಾಮ ಕಡಿಮೆ ಮಾಡುವ ಪರ್ಯಾಯ ವಿನ್ಯಾಸಗಳು<br>✓ ಕುಂದುಕೊರತೆ ಯಾಂತ್ರಿಕ ಪ್ರಕ್ರಿಯೆ<br>✓ ಯೋಜನೆಯ ಅನುಷ್ಠಾನದ ಸಮಯದಲ್ಲಿ ಸಮುದಾಯ ಸುರಕ್ಷತಾ ಕ್ರಮಗಳು<br>✓ ಸಾಮಾನ್ಯ ಆಸ್ತಿ ಸಂಪನ್ಮೂಲಗಳ (CRPs) ಸ್ಥಳಾಂತರ<br>✓ ಹಾನಿ (ಬಿರುಕುಗಳು, ಭೂಕುಸಿತಗಳು, ಇತ್ಯಾದಿ) ನಿರ್ಮಾಣದ ಸಮಯದಲ್ಲಿ ಆಸ್ತಿಗಳು/ಕಟ್ಟಡಗಳು (ಮುಖ್ಯವಾಗಿ ಯೋಜನಾ ಪ್ರದೇಶದ ಹತ್ತಿರವಿರುವ ಕಟ್ಟಡಗಳಿಗೆ)<br>✓ ಕಟ್ಟಡ/ಸ್ಥಳ ಪ್ರವೇಶಕ್ಕೆ ತಾತ್ಕಾಲಿಕ ತೊಡಕು | ✓ ಸಮಾಲೋಚನೆ, ಗುಂಪು ಚರ್ಚೆಗಳನ್ನು ಕೇಂದ್ರೀಕರಿಸಿ<br>✓ ಲಿಖಿತ ಮಾಹಿತಿ (ಒಂದು ಪುಟದ ಬರಹ/ಟಿಪ್ಪಣಿ)<br>✓ ಯೋಜನಾ ಪ್ರದೇಶಗಳಲ್ಲಿ ಜಿಆರ್‌ಎಂ ಸಹಾಯವಾಣಿ ಸಂಖ್ಯೆಯ ಪ್ರದರ್ಶನ | ✓ ಕನಿಷ್ಠ ಎರಡು ಬಾರಿ<br>✓ ಪೂರ್ವಭಾವಿ ಸ್ಕ್ರೀನಿಂಗ್,<br>✓ ಕೌಟುಂಬಿಕ ಮಟ್ಟದ ಜನಗಣತಿ- ಸಾಮಾಜಿಕ ಆರ್ಥಿಕ ಸಮೀಕ್ಷೆ ಮತ್ತು ಎಸ್‌ಐಎ ತಯಾರಿಕೆಗೆ ಸಮಾಲೋಚನೆ | ಕೆಆರ್‌ಐಡಿಇ ಮೂಲಕ ಎಸ್‌ಐಎ, ಡಿಪಿಆರ್ ಮತ್ತು ಆರ್‌ಎಪಿ ಅನುಷ್ಠಾನ ಸಂಸ್ಥೆ/ಅಧಿಕಾರಿಗಳು |

| ಉದ್ದೇಶಿತ ಪಾಲುದಾರರು | ಬಹಿರಂಗಪಡಿಸಬೇಕಾದ ಮಾಹಿತಿ | ಮಾಹಿತಿ ಪ್ರಸಾರಕ್ಕೆ ಬಳಸುವ ಮಾಧ್ಯಮ ಮತ್ತು ವಿಧಾನ | ಆವರ್ತನ | ಜವಾಬ್ದಾರಿಗಳು |
|---|---|---|---|---|
| | | | ಗಮನಿಸಿ: *2024*ರ ಏಪ್ರಿಲ್-ಜೂನ್‌ನಲ್ಲಿ ಪೀಡಿತ ಜನರಿಗೆ ಎಸ್‌ಐಎ/ಆರ್‌ಪಿಎಫ್‌ಅನ್ನು ಬಹಿರಂಗಪಡಿಸಲಾಗುತ್ತದೆ | |
| ದುರ್ಬಲರು ಸೇರಿದಂತೆ ಸಾಮಾನ್ಯ ಸಮುದಾಯಗಳು | ✓ ಯೋಜನಾ ವ್ಯಾಪ್ತಿ ಮತ್ತು ವಿನ್ಯಾಸದ ವಿವರಗಳು, ಪರಿಣಾಮ ಕಡಿಮೆ ಮಾಡುವ ಪರ್ಯಾಯ ವಿನ್ಯಾಸಗಳು<br>✓ ಕುಂದುಕೊರತೆ ಯಾಂತ್ರಿಕ ಪ್ರಕ್ರಿಯೆ<br>✓ ಯೋಜನೆಯ ಅನುಷ್ಠಾನದ ಸಮಯದಲ್ಲಿ ಸಮುದಾಯ ಸುರಕ್ಷತಾ ಕ್ರಮಗಳು<br>✓ ಸಾಮಾನ್ಯ ಆಸ್ತಿ ಸಂಪನ್ಮೂಲಗಳ (CRPs) ಸ್ಥಳಾಂತರ<br>✓ ಹಾನಿ (ಬಿರುಕುಗಳು, ಭೂಕುಸಿತಗಳು, ಇತ್ಯಾದಿ) ನಿರ್ಮಾಣದ ಸಮಯದಲ್ಲಿ ಆಸ್ತಿಗಳು/ಕಟ್ಟಡಗಳು (ಮುಖ್ಯವಾಗಿ ಯೋಜನಾ ಪ್ರದೇಶದ ಹತ್ತಿರವಿರುವ ಕಟ್ಟಡಗಳಿಗೆ)<br>ಕಟ್ಟಡ/ಸ್ಥಳ ಪ್ರವೇಶಕ್ಕೆ ತಾತ್ಕಾಲಿಕ ತೊಡಕು | ✓ ಸಮಾಲೋಚನೆ, ಗುಂಪು ಚರ್ಚೆಗಳನ್ನು ಕೇಂದ್ರೀಕರಿಸಿ<br>✓ ಲಿಖಿತ ಮಾಹಿತಿ (ಒಂದು ಪುಟದ ಬರಹ/ಟಿಪ್ಪಣಿ)<br>✓ ಯೋಜನಾ ಪ್ರದೇಶಗಳಲ್ಲಿ ಜಿಆರ್‌ಎಂ ಸಹಾಯವಾಣಿ ಸಂಖ್ಯೆಯ ಪ್ರದರ್ಶನ | ✓ ಕನಿಷ್ಠ ಎರಡು ಬಾರಿ<br>✓ ಪೂರ್ವಭಾವಿ ಸ್ಕ್ರೀನಿಂಗ್,<br>✓ ಕೌಟುಂಬಿಕ ಮಟ್ಟದ ಜನಗಣತಿ- ಸಾಮಾಜಿಕ ಆರ್ಥಿಕ ಸಮೀಕ್ಷೆ ಮತ್ತು ಎಸ್‌ಐಎ ತಯಾರಿಕೆಗೆ ಸಮಾಲೋಚನೆ | ಕೆಆರ್‌ಐಡಿಇ ಮೂಲಕ ಎಸ್‌ಐಎ, ಡಿಪಿಆರ್ ಮತ್ತು ಆರ್‌ಎಪಿ ಅನುಷ್ಠಾನ ಸಂಸ್ಥೆ/ಅಧಿಕಾರಿಗಳು |
| ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ | ✓ ಕೊಳಗೇರಿ ನಿವಾಸಿಗಳ ಪುನರ್ವಸತಿ | ತ್ರಿಪಕ್ಷೀಯ ಸಭೆ (ಕೆಆರ್‌ಐಡಿಇ, ಕೆಎಸ್‌ಡಿಬಿ ಮತ್ತು ಕೊಳಗೇರಿ ನಿವಾಸಿಗಳು) | ಕೊಳಗೇರಿ ನಿವಾಸಿಗಳ ಪುನರ್ವಸತಿ ಪೂರ್ಣಗೊಳ್ಳುವವರೆಗೆ ಎರಡು ತಿಂಗಳಿಗೊಮ್ಮೆ. | ಕೆಆರ್‌ಐಡಿಇ |
| ಭೂಸ್ವಾಧೀನಾಧಿಕಾರಿ, ಕೆಐಎಡಿಬಿ | ✓ ಭೂ ಸ್ವಾಧೀನ | ಸಭೆ: ಜಂಟಿ ಕ್ಷೇತ್ರ ಸಮೀಕ್ಷೆ, ಮುಖಾಮುಖಿ ಸಭೆಗಳು | ಕಾಯಿದೆಯ ನಿಬಂಧನೆಗಳ ಪ್ರಕಾರ, ಕಳೆದುಕೊಂಡ ಸ್ವತ್ತುಗಳಿಗೆ ಮರುನಿಯೋಜನೆ ಮೌಲ್ಯದ ವಿತರಣೆಯನ್ನು | ಕೆಆರ್‌ಐಡಿಇ ಮತ್ತು ಕೆಐಎಡಿಬಿ |

| | | | | |
|---|---|---|---|---|
| | | | ಪೂರ್ಣಗೊಳಿಸುವವರೆಗೆ. | |
| ಇತರ ಸಂಬಂಧಪಟ್ಟವರು (ಬಾಹ್ಯ) - ಸರ್ಕಾರಿ ಇಲಾಖೆಗಳು<br>✓ ಅರಣ್ಯ ಇಲಾಖೆ<br>✓ ಕಂದಾಯ ಇಲಾಖೆ<br>✓ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ<br>✓ ಪೊಲೀಸ್ ಇಲಾಖೆ<br>✓ ಜಿಲ್ಲಾಡಳಿತ | ✓ ಯೋಜನೆಯ ವ್ಯಾಪ್ತಿ ಮತ್ತು ವಿನ್ಯಾಸ ವಿವರಗಳು<br>✓ ಭೂ ಸ್ವಾಧೀನ ಮತ್ತು ಪರಿಹಾರ ಪ್ರಕ್ರಿಯೆ<br>✓ ಪರಿಸರ ಮತ್ತು ಸಾಮಾಜಿಕ ಅಂಶಗಳ ಮೇಲೆ ದ್ವಿತೀಯ ಮೂಲ ಮಾಹಿತಿ;<br>✓ ಯೋಜನೆಯ ಪ್ರೇರಿತ ಪರಿಸರ ಮತ್ತು ಸಾಮಾಜಿಕ ಅಪಾಯಗಳು;<br>✓ ಪರಿಣಾಮ ತಗ್ಗಿಸುವಿಕೆ ಮತ್ತು ವರ್ಧನೆ ಕ್ರಮಗಳು;<br>✓ ಪುನರ್ವಸತಿ<br>✓ ಕುಂದುಕೊರತೆ ಯಾಂತ್ರಿಕ ಪ್ರಕ್ರಿಯೆ<br>✓ ಕಾರ್ಮಿಕರ ವಲಸೆಯಿಂದಾಗಿ ಲಿಂಗ-ಸಂಬಂಧಿತ ಸಮಸ್ಯೆಗಳು | ಮುಖಾಮುಖಿ ಸಭೆಗಳು | ಅವಶ್ಯಕತೆಗೆ ಅನುಗುಣವಾಗಿ ನಿರಾಕ್ಷೇಪಣೆ/ಅನುಮತಿಗಳನ್ನು ಪಡೆಯುವುದು | ಕೆಆರ್ಐಡಿಇ ಮೂಲಕ ಎಸ್ಐಎ, ಡಿಪಿಆರ್ ಮತ್ತು ಆರ್ಎಪಿ ಅನುಷ್ಠಾನ ಸಂಸ್ಥೆ/ಅಧಿಕಾರಿಗಳು |

| ಉದ್ದೇಶಿತ ಪಾಲುದಾರರು | ಬಹಿರಂಗಪಡಿಸಬೇಕಾದ ಮಾಹಿತಿ | ಮಾಹಿತಿ ಪ್ರಸಾರಕ್ಕೆ ಬಳಸುವ ಮಾಧ್ಯಮ ಮತ್ತು ವಿಧಾನ | ಆವರ್ತನ | ಜವಾಬ್ದಾರಿಗಳು |
|---|---|---|---|---|
| | ✓ ವಿಶೇಷ ಚೇತನರಿಗೆ ವಿನ್ಯಾಸ ಬದಲಾವಣೆ | | | |
| ಹಕ್ಕುದಾರರಲ್ಲದವರು ಮತ್ತು ಇತರರನ್ನು ಮೇಲಿನ ಪಟ್ಟಿಗೆ ಸೇರಿಸಲಾಗಿಲ್ಲ | ✓ ಯೋಜನೆಯ ವ್ಯಾಪ್ತಿ ಮತ್ತು ವಿನ್ಯಾಸ ವಿವರಗಳು<br>✓ ಭೂ ಸ್ವಾಧೀನ ಮತ್ತು ಪರಿಹಾರ ಪ್ರಕ್ರಿಯೆ<br>✓ ಪರಿಸರ ಮತ್ತು ಸಾಮಾಜಿಕ ಅಂಶಗಳ ಮೇಲೆ ದ್ವಿತೀಯ ಮೂಲ ಮಾಹಿತಿ;<br>✓ ಯೋಜನೆಯ ಪ್ರೇರಿತ ಪರಿಸರ ಮತ್ತು ಸಾಮಾಜಿಕ ಅಪಾಯಗಳು;<br>✓ ಪರಿಣಾಮ ತಗ್ಗಿಸುವಿಕೆ ಮತ್ತು ವರ್ಧನೆ ಕ್ರಮಗಳು;<br>✓ ಪುನರ್ವಸತಿ<br>✓ ಕುಂದುಕೊರತೆ ಯಾಂತ್ರಿಕ ಪ್ರಕ್ರಿಯೆ<br>✓ ಕಾರ್ಮಿಕರ ವಲಸೆಯಿಂದಾಗಿ ಲಿಂಗ-ಸಂಬಂಧಿತ ಸಮಸ್ಯೆಗಳು<br>✓ ವಿಶೇಷ ಚೇತನರಿಗೆ ವಿನ್ಯಾಸ ಬದಲಾವಣೆ | ಮುಖಾಮುಖಿ ಸಭೆಗಳು | ಅವಶ್ಯಕತೆಗೆ ಅನುಗುಣವಾಗಿ ನಿರಾಕ್ಷೇಪಣೆ/ಅನುಮತಿಗಳನ್ನು ಪಡೆಯುವುದು | ಕೆಆರ್ಐಡಿಇ ಮೂಲಕ ಎಸ್ಐಎ, ಡಿಪಿಆರ್ ಮತ್ತು ಆರ್ಎಪಿ ಅನುಷ್ಠಾನ ಸಂಸ್ಥೆ/ಅಧಿಕಾರಿಗಳು |
| **ಅನುಷ್ಠಾನ ಹಂತ** | | | | |
| ಯೋಜನಾ ಪ್ರದೇಶಗಳಲ್ಲಿ ವಾಸಿಸುವ ದುರ್ಬಲರು ಸೇರಿದಂತೆ, ಸಾಮಾನ್ಯ ಸಮುದಾಯದ ಜನರು<br><br>ಸರ್ಕಾರಿ ಸಂಸ್ಥೆಗಳು<br><br>ಕಂದಾಯ ಇಲಾಖೆ<br>ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ<br>ಪೊಲೀಸ್ ಇಲಾಖೆ<br>ಜಿಲ್ಲಾಡಳಿತ | ✓ ಯೋಜನೆಯ ವ್ಯಾಪ್ತಿ ಮತ್ತು ವಿನ್ಯಾಸ ವಿವರಗಳು,<br>✓ ಗುತ್ತಿಗೆದಾರರ ವಿವರಗಳು ಅಂದರೆ ಕಾರ್ಮಿಕ ಶಿಬಿರಗಳು, ಗಿಡ, ಮರಗಳಿರುವ ಪ್ರದೇಶ ಇತ್ಯಾದಿ,<br>✓ ಕುಂದುಕೊರತೆ ಯಾಂತ್ರಿಕ ಪ್ರಕ್ರಿಯೆ<br>✓ ಸಾರ್ವಜನಿಕ ಸ್ವತ್ತುಗಳ ಸ್ಥಳಾಂತರ<br>✓ ವರದಿಯಾದ ಹಾನಿಗಳ ಮೌಲ್ಯಮಾಪನಕ್ಕಾಗಿ ನಿಬಂಧನೆಗಳು, ನಿರ್ಮಾಣ ಮತ್ತು ಪಾವತಿಯ ಸಮಯದಲ್ಲಿ ಸ್ವತ್ತು/ಕಟ್ಟಡಗಳಿಗೆ ಆದ ಹಾನಿ | ✓ ಸಮಾಲೋಚನೆಗಳು, ಎಫ್‌ಜಿಡಿಗಳು ಮತ್ತು ಸಮುದಾಯದೊಂದಿಗೆ ಸಭೆಗಳು<br>✓ ಯೋಜನಾ ಸ್ಥಳಗಳಲ್ಲಿ ಜಿಆರ್ಎಂ ಸಹಾಯವಾಣಿ ಸಂಖ್ಯೆ ಮತ್ತು ಟಿಪ್ಪಣಿ ಪ್ರದರ್ಶನ | ✓ ದ್ವೈಮಾಸಿಕ<br>✓ ವರದಿ ಮಾಡಿದಂತೆ | ಕೆಆರ್ಐಡಿಇ ಮೂಲಕ<br>✓ ಜಿಲ್ಲಾಡಳಿತ<br>✓ ಕಟ್ಟಡ ಕಾಮಗಾರಿ ಗುತ್ತಿಗೆದಾರರು |

| | | | | |
|---|---|---|---|---|
| | (ಬಿರುಕುಗಳು, ಭೂಕುಸಿತಗಳು, ಇತ್ಯಾದಿ) | | | |
| ಕಟ್ಟಡ ಕಾಮಗಾರಿ ಗುತ್ತಿಗೆದಾರರು | ✓ ಇಎಸ್‌ಹೆಚ್‌ಎಸ್ ನಿಬಂಧನೆಗಳ ಮೇಲೆ ದೃಷ್ಟಿಕೋನ;<br>✓ ಲೈಂಗಿಕ ಕಿರುಕುಳದ ನಿಬಂಧನೆಗಳು<br>✓ ಕಾರ್ಮಿಕ ನಿರ್ವಹಣಾ ಕಾರ್ಯವಿಧಾನಗಳಲ್ಲಿ ಒದಗಿಸಿದಂತೆ ಕಾರ್ಮಿಕ ಸಂಬಂಧಿತ ಅಂಶಗಳು | ✓ ಬಿಡ್/ಕಾಂಟ್ರ್ಯಾಕ್ಟ್ ದಾಖಲೆಗಳಲ್ಲಿನ ನಿಬಂಧನೆಗಳು ಮತ್ತು ಬಿಡ್ - ಪೂರ್ವ ಕಾನ್ಫರೆನ್ಸ್ ಮೂಲಕ | ✓ ಒಪ್ಪಂದದ ಸಹಿ ಸಮಯದಲ್ಲಿ<br>✓ ಕಾರ್ಮಿಕರ ಸೇರ್ಪಡೆಯ ಭಾಗವಾಗಿ ಆವರ್ತಕ | ಕೆಆರ್‌ಐಡಿಇ ಮತ್ತು ಕಟ್ಟಡ ಕಾಮಾಗರಿ ಗುತ್ತಿಗೆದಾರ |
| ಇತರ ಆಸಕ್ತರು (ಆಂತರಿಕ)<br>✓ ಜನರಲ್ ಕನ್ಸಲ್ಟೆಂಟ್<br>✓ ಮೇಲ್ವಿಚಾರಣೆ ಸಲಹೆಗಾರರು | ✓ ಯೋಜನೆ ಮಾಹಿತಿ: ವ್ಯಾಪ್ತಿ ಮತ್ತು ತಾರ್ಕಿಕತೆ ಮತ್ತು ಇ&ಎಸ್ ತತ್ತ್ವಗಳು<br>✓ ಆರ್‌ಡಿಎಫ್ ಮತ್ತು ಆರ್ ಎಪಿ ಅವಶ್ಯಕತೆಗಳು ಮತ್ತು ಇತರ ನಿರ್ವಹಣಾ ಯೋಜನೆಗಳಲ್ಲಿ ತರಬೇತಿ<br>✓ ಕುಂದುಕೊರತೆ ಯಾಂತ್ರಿಕ ಪ್ರಕ್ರಿಯೆ | ✓ ಮುಖಾಮುಖಿ ಸಭೆಗಳು<br>✓ ತರಬೇತಿಗಳು/ಕಾರ್ಯಾಗಾರಗಳು | ಅಗತ್ಯಕ್ಕೆ ಅನುಗುಣವಾಗಿ | ಕೆಆರ್‌ಐಡಿಇ |

| ಉದ್ದೇಶಿತ ಪಾಲುದಾರರು | ಬಹಿರಂಗಪಡಿಸಬೇಕಾದ ಮಾಹಿತಿ | ಮಾಹಿತಿ ಪ್ರಸಾರಕ್ಕೆ ಬಳುಸವ ಮಾಧ್ಯಮ ಮತ್ತು ವಿಧಾನ | ಆವರ್ತನ | ಜವಾಬ್ದಾರಿಗಳು |
|---|---|---|---|---|
| ✓ ಗುತ್ತಿಗೆದಾರರು, ಉಪ ಗುತ್ತಿಗೆದಾರರು, ಸೇವಾ ಪೂರೈಕೆದಾರರು, ಪೂರೈಕೆದಾರರು ಮತ್ತು ಅವರ ಕೆಲಸಗಾರರು. | ✓ ಸಲಹೆಗಾರ/ಗುತ್ತಿಗೆದಾರರ ವರದಿಗಳ ಕುರಿತು ಪ್ರತಿಕ್ರಿಯೆ | | | |

## 1.7. ಭೂಸ್ವಾಧೀನ, ಪರಿಹಾರ ಮತ್ತು ಪುನರ್ವಸತಿ ಮತ್ತು ಪುನರ್ವಸತಿಯ ಚೌಕಟ್ಟು

## 1.8. ಪ್ರಸ್ತಾವಿತ ಬೆಂಗಳೂರು ಉಪನಗರ ರೈಲು ಯೋಜನೆಗಾಗಿ ಭೂಸ್ವಾಧೀನ, ಪುನರ್ವಸತಿಗೆ ಅನ್ವಯವಾಗುವ ಕಾನೂನುಗಳು, ನಿಯಮಗಳು ಮತ್ತು ನೀತಿಗಳು ಮತ್ತು ಮಾನದಂಡಗಳು ಕೆಳಕಂಡಂತಿವೆ:

1.ಪುನರ್ವಸತಿ (RFCTLARR) ಕಾಯಿದೆ, 2013ರಡಿ ಭೂಸ್ವಾಧೀನ, ಭೂಸ್ವಾಧೀನದಲ್ಲಿ ಪಾರದರ್ಶಕತೆ ಮತ್ತು ನ್ಯಾಯಯುತ ಪರಿಹಾರದ ಹಕ್ಕು

2. ಕರ್ನಾಟಕ ಕೈಗಾರಿಕಾ ಪ್ರದೇಶಗಳ ಅಭಿವೃದ್ಧಿ ಕಾಯಿದೆ 1966 (KIADA)

3. ಬೀದಿ ಬದಿ ವ್ಯಾಪಾರಿಗಳ (ಜೀವನದ ರಕ್ಷಣೆ ಮತ್ತು ಬೀದಿ ಮಾರಾಟದ ನಿಯಂತ್ರಣ) ಕಾಯಿದೆ, 2014

4. ಕೆ-ರೈಡ್‌ನ ಪರಿಹಾರ ಮತ್ತು ಪುನರ್ವಸತಿ ಪ್ಯಾಕೇಜ್ (ಪುನರ್ವಸತಿ ನೀತಿಯ ಚೌಕಟ್ಟು)

5. ಇತರ ಅನ್ವಯವಾಗುವ ಕಾನೂನುಗಳು

6. ಇಐಬಿ ಪರಿಸರ ಮತ್ತು ಸಾಮಾಜಿಕ ಸುಸ್ಥಿರತೆಯ ಚೌಕಟ್ಟು (ESSF) ಇಐಬಿ ಪರಿಸರ ಮತ್ತು ಸಾಮಾಜಿಕ ಮಾನದಂಡಗಳನ್ನು ವ್ಯಾಖ್ಯಾನಿಸುತ್ತದೆ (2 ಫೆಬ್ರುವರಿ 2022)

7. ಕೆಎಫ್‌ಡಬ್ಲ್ಯು ಸುಸ್ಥಿರತೆ ಮಾರ್ಗಸೂಚಿ (ಕೊನೆಯ ನವೀಕರಣ 30 ಜೂನ್ 2023) (ವಿಶ್ವ ಬ್ಯಾಂಕ್‌ನ ಇಎಸ್‌ಎಸ್ ಸೇರಿದಂತೆ)

8. ಸಾಲದಾತರ E&S ಮಾನದಂಡಗಳು ಮತ್ತು ನೀತಿಗಳ ನಡುವಿನ ಅಂತರವನ್ನು ಪರಿಹರಿಸಲು ಪೂರಕ ನಿಬಂಧನೆಗಳು

ಯೋಜನೆಗೆ ಅಗತ್ಯವಿರುವ ಭೂಮಿಯನ್ನು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಕಾಯ್ದೆ 1966 (KIADA) ಅಡಿ ಸ್ವಾಧೀನಪಡಿಸಿಕೊಳ್ಳಲಾಗುತ್ತಿದೆ. ಈ ಕಾಯ್ದೆಯು ಕೈಗಾರಿಕಾ ಮೂಲಸೌಕರ್ಯ, ಸಂವಹನ, ಸಾರಿಗೆ, ತಂತ್ರಜ್ಞಾನ ಪಾರ್ಕ್ ಗಳು ಮತ್ತು ಟೌನ್‌ಶಿಪ್‌ಗಳ ಅಭಿವೃದ್ಧಿಗೆ ಸಂಬಂಧಿಸಿದ್ದಾಗಿದ್ದು, ಪ್ರಕ್ರಿಯೆಯನ್ನು ಸುಗಮಗೊಳಿಸುತ್ತದೆ. KIADA ಅಡಿಯಲ್ಲಿ, ಮೂಲಸೌಕರ್ಯ ಸೌಲಭ್ಯಗಳನ್ನೊಳಗೊಂಡಿರುವ ಕೈಗಾರಿಕಾ ಪ್ರದೇಶಕ್ಕಾಗಿ ಭೂಮಿ ಸ್ವಾಧೀನಪಡಿಸಿಕೊಳ್ಳಬಹುದು. "ಕೈಗಾರಿಕಾ ಮೂಲಸೌಕರ್ಯ ಸೌಲಭ್ಯಗಳು" ಎಂದರೆ ವ್ಯಾಪಾರ ಮತ್ತು ಪ್ರವಾಸೋದ್ಯಮಕ್ಕೆ ನೆರವಾಗುವ ಕೈಗಾರಿಕಾ ಪ್ರದೇಶಗಳಲ್ಲಿ ಸ್ಥಾಪಿಸಲಾಗುವ ಮತ್ತು ಕೈಗಾರಿಕೆಗಳಿಗೆ ಅನುಕೂಲವಾಗು ವ "ಸಂಶೋಧನೆ ಮತ್ತು ಅಭಿವೃದ್ಧಿ, ಸಂವಹನ, ಸಾರಿಗೆ, ಬ್ಯಾಂಕಿಂಗ್, ಮಾರ್ಕೆಟಿಂಗ್, ತಂತ್ರಜ್ಞಾನ ಪಾರ್ಕ್ ಗಳು ಮುಂತಾದ ಸೌಲಭ್ಯಗಳು. ಉಪನಗರ ರೈಲ್ವೆ ಜಾಲದ ಸ್ಥಾಪನೆಯು ನಗರದ ಒಳಗೆ ಮತ್ತು ನಗರದ ಹೊರವಲಯದ ನಡುವೆ ಇರುವ ವಾಣಿಜ್ಯ ಮತ್ತು ಕೈಗಾರಿಕಾ ಕೇಂದ್ರಗಳಿಗೆ ಸಮರ್ಥ ಮತ್ತು ಸೂಕ್ತ ರೀತಿಯಲ್ಲಿ ವಿವಿಧ ಕೈಗಾರಿಕೆಗಳ ವೃತ್ತಿಪರರು ಮತ್ತು ಕಾರ್ಮಿಕರನ್ನು ಕರೆದೊಯ್ಯಲು ಸಹಾಯ ಮಾಡುತ್ತದೆ.

ರಾಷ್ಟ್ರೀಯ ಕಾನೂನುಗಳು ಮತ್ತು ಹೂಡಿಕೆ ಏಜೆನ್ಸಿಗಳ ಪರಿಸರ ಮತ್ತು ಸಾಮಾಜಿಕ ಸುರಕ್ಷತಾ ತತ್ವಗಳ ನಡುವಿನ ಅಂತರ ಕಡಿಮೆ ಮಾಡಲು ಈ ಯೋಜನೆಗೆ ಪರಿಹಾರ ಮತ್ತು ಪುನರ್ವಸತಿ

ಪ್ಯಾಕೇಜ್ ಸಿದ್ಧಪಡಿಸಲಾಗಿದೆ. ರಾಷ್ಟ್ರೀಯ ಕಾನೂನುಗಳು ಮತ್ತು ಹೂಡಿಕೆ ಏಜನ್ಸಿಗಳು ಪರಿಸರ ಮತ್ತು ಸಾಮಾಜಿಕ ಸುರಕ್ಷತಾ ನೀತಿಯ ಅಗತ್ಯತೆಗಳ ನಡುವಿನ ಹೋಲಿಕೆಯನ್ನು ಅಧ್ಯಾಯ 10 ರಲ್ಲಿ ನೀಡಲಾಗಿದೆ. CR ಪ್ಯಾಕೇಜ್ ಆಗಿರುವ ಅರ್ಹತಾ ಮ್ಯಾಟ್ರಿಕ್ಸ್ (EM) ನಷ್ಟಗಳು/ ಪರಿಣಾಮಗಳ ವಿಧ ಮತ್ತು ಅನುಗುಣವಾದ ಸ್ವರೂಪ ಮತ್ತು ವ್ಯಾಪ್ತಿಯನ್ನು PAP ಅರ್ಹತೆಗಳು ಸಂಕ್ಷಿಪ್ತಗೊಳಿಸುತ್ತದೆ; ಇರುವ ಅಂತರವನ್ನು ಸರಿಪಡಿಸಲು ಪೂರಕ ನಿಬಂಧನೆಗಳು ರಾಷ್ಟ್ರೀಯ/ರಾಜ್ಯ ಕಾನೂನುಗಳು ಮತ್ತು ಸಾಲದಾತರ ಮಾನದಂಡಗಳು (EIB ES6 / ವಿಶ್ವ ಬ್ಯಾಂಕ್ ನ EES5) ಅನುಸರಣೆಯಲ್ಲಿವೆ. ಪ್ರವರ್ತಕರ ಪರಿಹಾರ ಮತ್ತು ಪುನರ್ವಸತಿ ಪ್ಯಾಕೇಜ್ ಅನ್ನು ಅನುಬಂಧ F ನಲ್ಲಿ ಲಗತ್ತಿಸಲಾಗಿದೆ. ಈ ಮ್ಯಾಟ್ರಿಕ್ಸ್ ಎಲ್ಲಾ ವರ್ಗದ ಜನರು ಮತ್ತು ಯೋಜನೆಯ ಪರಿಣಾಮಗಳ ಎಲ್ಲಾ ವಿಧಾನಗಳನ್ನು ತಿಳಿಸುತ್ತದೆ. ಇದನ್ನು ಮೂರು ಪ್ರಮುಖ ವರ್ಗಗಳ ಪ್ರಭಾವದ ಅಡಿಯಲ್ಲಿ ಅಂದರೆ ಪ್ರಭಾವದ ಅಡಿಯಲ್ಲಿ ಅಂದರೆ, ಭೂಮಿಯ ನಷ್ಟ, ನಿವಾಸದ ನಷ್ಟ ಮತ್ತು ವಾಣಿಜ್ಯ ರಚನೆಗಳ ನಷ್ಟ ಅಥವಾ ಪೀಡಿತ ಜನಸಂಖ್ಯೆಯ ಸಂಪೂರ್ಣ ವ್ಯಾಪ್ತಿಯನ್ನು ಒಳಗೊಂಡಿರುವ ಇತರ ಆಸ್ತಿಗಳ ನಷ್ಟ ಎಂದು ವರ್ಗೀಕರಿಸಬಹುದು.

(i) ಸಂಪೂರ್ಣವಾಗಿ ಅಥವಾ ಭಾಗಶಃ ಕಳೆದುಕೊಂಡ ಭೂಮಿಗೆ ವಿದ್ಯುಕ್ತ ಕಾನೂನಿನ ಹಕ್ಕುಗಳನ್ನು ಹೊಂದಿರುವವರು;
(ii) ಸಂಪೂರ್ಣವಾಗಿ ಅಥವಾ ಭಾಗಶಃ ಆಕ್ರಮಿಸಿಕೊಂಡಿರುವ ಭೂಮಿಯನ್ನು ಕಳೆದುಕೊಂಡವರು ಮತ್ತು ಅಂತಹ ಭೂಮಿಗೆ ಯಾವುದೇ ವಿದ್ಯುಕ್ತ ಕಾನೂನು ಹಕ್ಕುಗಳನ್ನು ಹೊಂದಿರುವುದಿಲ್ಲ. ಆದರೆ ರಾಷ್ಟ್ರೀಯ/ರಾಜ್ಯ ಕಾನೂನುಗಳ ಅಡಿಯಲ್ಲಿ ಗುರುತಿಸಲ್ಪಟ್ಟ ಅಥವಾ ಗುರುತಿಸಬಹುದಾದ ಭೂಮಿಯ ಹಕ್ಕುಗಳನ್ನು ಹೊಂದಿರುವವರು; ಮತ್ತು
(iii) ಸ್ವಾಧೀನಪಡಿಸಿಕೊಂಡಿರುವ ಭೂಮಿಯನ್ನು ಸಂಪೂರ್ಣವಾಗಿ ಅಥವಾ ಭಾಗಶಃ ಕಳೆದುಕೊಂಡವರು ಮತ್ತು ಅಂತಹ ಭೂಮಿಗೆ ವಿದ್ಯುಕ್ತ ಕಾನೂನು ಹಕ್ಕುಗಳು ಅಥವಾ ಮಾನ್ಯತೆ ಇಲ್ಲವೇ ಮಾನ್ಯ ಮಾಡಿದ ಹಕ್ಕುಗಳನ್ನು ಹೊಂದಿರುವುದಿಲ್ಲ.

## 1.9. ಜೀವನೋಪಾಯದ ಮರುಸ್ಥಾಪನೆಗಾಗಿ ಯೋಜನೆ

ಯೋಜನಾಪೂರ್ವ ಜೀವನಮಟ್ಟವನ್ನು ಪರಿಗಣನೆಗೆ ತೆಗೆದುಕೊಳ್ಳದೆ ಎಲ್ಲಾ ಕುಟುಂಬಗಳಿಗೆ ಸಹಾಯ ಮಾಡುವುದು ಜೀವನೋಪಾಯದ ಮರುಸ್ಥಾಪನೆಯ ಉದ್ದೇಶ. ಜೀವನೋಪಾಯಗಳ ಮರುಸ್ಥಾಪನೆ ಕಾರ್ಯಕ್ರಮವು ಪರಿಣಾಮಗಳ ತೀವ್ರತೆಯನ್ನು ಪರಿಗಣಿಸುತ್ತದೆ ಮತ್ತು ಫಲಾನುಭವಿಗಳನ್ನು ಗುರುತಿಸಲು ಅವರ ಯೋಜನಾಪೂರ್ವ ದುರ್ಬಲತೆಯನ್ನು ಮಾತ್ರ ಮಾನದಂಡವಾಗಿ ಪರಿಗಣಿಸುತ್ತದೆ. ದುರ್ಬಲವಲ್ಲದ ಕುಟುಂಬವು ತನ್ನ ಎಲ್ಲಾ ಆದಾಯವನ್ನು ಕಳೆದುಕೊಂಡಾಗ ಮ್ಯಾಟ್ರಿಕ್ಸ್ ಪ್ರಕಾರ ನಗದು ಪರಿಹಾರದೊಂದಿಗೆ ಜೀವನೋಪಾಯವನ್ನು ಮರುಸ್ಥಾಪಿಸಲು ಸಾಧ್ಯವಿಲ್ಲ

ಫಲಾನುಭವಿಗಳು ಆದಾಯ ಮರುಸ್ಥಾಪನೆ ಬೆಂಬಲ ಪಡೆಯಲು ಅರ್ಹರಾಗಿರಬೇಕು. ಭೂಮಿಗೆ ಸಂಬಂಧಿಸಿದಂತೆ ಎಲ್ಲಾ ಅಗತ್ಯ ಚಟುವಟಿಕೆಗಳನ್ನು ಪೂರ್ಣಗೊಳಿಸಿದ ನಂತರ, RAPPIC ತನ್ನ ಕ್ಷೇತ್ರ ಪರಿವೀಕ್ಷಣೆ ಮತ್ತು ಸಮೀಕ್ಷೆಯ ಫಲಿತಾಂಶದ ಆಧಾರದ ಮೇಲೆ PAP ಗಳಿಗೆ ಆದಾಯ ಮರುಸ್ಥಾಪನೆ ಯೋಜನೆಯನ್ನು ಸಿದ್ಧಪಡಿಸುತ್ತದೆ. ಆದಾಯ ಮರುಸ್ಥಾಪನೆ ಯೋಜನೆಯನ್ನು ಕಾರ್ಯಗತಗೊಳಿಸುವ ಮೊದಲು ಸಂಬಂಧಿತ PAP, K-RIDE ಅಧಿಕಾರಿಗಳು ಮತ್ತು ಸಂಬಂಧಪಟ್ಟ ಸರ್ಕಾರಿ ಇಲಾಖೆಗಳೊಂದಿಗೆ ಚರ್ಚಿಸಬೇಕು.

ಸಂಭಾವ್ಯ ಪ್ರಶಿಕ್ಷಣಾರ್ಥಿಗಳ ಗುರುತಿಸುವಿಕೆ ಮತ್ತು ದುರ್ಬಲ ಕುಟುಂಬಗಳಿಗೆ ತರಬೇತಿ ಅಗತ್ಯಗಳ ಕುರಿತ ಮೌಲ್ಯಮಾಪನಕ್ಕೆ ವಿವರವಾದ ಸಮೀಕ್ಷೆ ಮತ್ತು ಸಾಕ್ಷರತೆ/ ಶೈಕ್ಷಣಿಕ ಮಟ್ಟ ಅಥವಾ ಕೌಶಲ ತರಬೇತಿಗಾಗಿ ಮನೆಯಿಂದ ನಾಮನಿರ್ದೇಶನಗೊಂಡ ಒಬ್ಬ ಸದಸ್ಯರೊಂದಿಗೆ ಲಭ್ಯವಿರುವ ಕೌಶಲ್ಯ

ಕುರಿತಂತೆ ಮೌಲ್ಯಮಾಪನ ಅಗತ್ಯವಿರುತ್ತದೆ. ಈ ಅಗತ್ಯಗಳ ಮೌಲ್ಯಮಾಪನವು ಪ್ರಸ್ತುತ ಮನೆಯವರು ಬಳಸುತ್ತಿರುವ ವಿವಿಧ ಮೂಲಗಳು, ಆಸ್ತಿಗಳು, ಸಂಪನ್ಮೂಲಗಳು ಮತ್ತು ನಿಭಾಯಿಸುವ ತಂತ್ರಗಳನ್ನು ಆಧರಿಸಿ ಆದಾಯವನ್ನು ದಾಖಲಿಸುತ್ತದೆ. ಈ ಕಾರ್ಯತಂತ್ರವು ಕುಟುಂಬದ ಪ್ರಧಾನ ಗಳಿಕೆಯ ಸದಸ್ಯರ ಪ್ರಸ್ತುತ ಉದ್ಯೋಗದಿಂದ ಆದಾಯ ಸುಧಾರಣೆ ಅಥವಾ ಗರಿಷ್ಠಗೊಳಿಸುವುದು ಅಥವಾ ಹೊಸ ಇಲ್ಲವೇ ಪೂರಕ ಉದ್ಯೋಗ ಸಂಪಾದಿಸುವ ಗುರಿ ಹೊಂದಿದ್ದು, ಕುಟುಂಬವು ತನ್ನ ಜೀವನ ಮಟ್ಟ ಸುಧಾರಿಸಲು ಇಲ್ಲವೇ ನಿರ್ವಹಿಸಲು ಅಗತ್ಯ ಚಟುವಟಿಕೆಗಳನ್ನು ಹೊಂದಾಣಿಕೆ ಮೂಲಕ ಸಾಧಿಸುವ ಗುರಿಯನ್ನು ಹೊಂದಿದೆ. KRIDE ನಿಂದ ಬೆಂಬಲಿತವಾದ RAPPIC ನಿಂದ ತರಬೇತಿ ಅಗತ್ಯಗಳ ಮೌಲ್ಯಮಾಪನ ಕೈಗೊಳ್ಳಲಾಗುತ್ತದೆ. ತರಬೇತಿಯ ನಂತರದ ಪರಿಣಾಮಗಳ ಕುರಿತ ಮೌಲ್ಯಮಾಪನವನ್ನು ಸಕ್ರಿಯಗೊಳಿಸಲು ಮನೆಗಳಿಂದ ಪ್ರತ್ಯೇಕವಾಗಿ ಸಂಗ್ರಹಿಸಲಾದ ಮೂಲ ವಿವರಗಳನ್ನು ಎಚ್ಚರಿಕೆಯಿಂದ ಸಂರಕ್ಷಿಸಬೇಕಾಗುತ್ತದೆ;
PIU ನಿಂದ ಸ್ಥಳೀಯ ತರಬೇತುದಾರರು/ಸಂಪನ್ಮೂಲ ವ್ಯಕ್ತಿಗಳು ಅಥವಾ ತರಬೇತಿ ಸಂಸ್ಥೆಗಳನ್ನು ಗುರುತಿಸುವುದು ಅಗತ್ಯವಿರುವ ಕೌಶಲ್ಯ ತರಬೇತಿಯ ಪ್ರವಿಧಾನವನ್ನು ಅವಲಂಬಿಸಿರುತ್ತದೆ (ಅಗತ್ಯಗಳ ಮೌಲ್ಯಮಾಪನ ಸಮೀಕ್ಷೆಯ ಮೂಲಕ ಗುರುತಿಸಿದಂತೆ); KRIDE ನಿಂದ ಜೀವನೋಪಾಯ ಕೌಶಲ್ಯ ತರಬೇತಿ ಸಂಯೋಜಿಸಲಾಗುವುದು. ಗುರುತಿಸಲಾದ ಪ್ರಶಿಕ್ಷಣಾರ್ಥಿಗಳ ಅರ್ಹತೆಗೆ ತಕ್ಕಂತೆ ತರಬೇತಿ ನೀಡಲಾಗುವುದು. ತರಬೇತಿಗಾಗಿ ಗರಿಷ್ಠ ಮೂರು ತಿಂಗಳ ಕಾಲಾವಕಾಶ ಕಲ್ಪಿಸಲಾಗಿದೆ.

KRIDE ನಿಂದ ತರಬೇತಿಯ ಆಂತರಿಕ ಮೇಲ್ವಿಚಾರಣೆ ಮತ್ತು ಪ್ರಗತಿ ವರದಿಗಳನ್ನು ಸಲ್ಲಿಕೆ ಮಾಡಲಾಗುತ್ತದೆ. ಯೋಜನೆಯ ಅನುಷ್ಠಾನದ ಒಂದು ವರ್ಷದ ನಂತರ ಸ್ವತಂತ್ರ ಏಜೆನ್ಸಿಯಿಂದ ತರಬೇತಿಯ ನಂತರದ ಪ್ರಭಾವದ ಮೌಲ್ಯಮಾಪನ ನಡೆಸುವ ಬಗ್ಗೆ ಪ್ರಸ್ತಾಪಿಸಲಾಗಿದೆ. ಮನೆಯ ಆಸ್ತಿ ಆಧಾರ ಮತ್ತು ಸಾಮಾಜಿಕ-ಆರ್ಥಿಕ ಸ್ಥಿತಿಯನ್ನು ಯೋಜನಾಪೂರ್ವ ಸನ್ನಿವೇಶದೊಂದಿಗೆ ಹೋಲಿಸಲಾಗುತ್ತದೆ. ವಿವರವಾದ ವಿನ್ಯಾಸ ಹಂತದಲ್ಲಿ ದಾಖಲೆ ಸೂಚಕಗಳನ್ನು ಅಭಿವೃದ್ಧಿಪಡಿಸಲಾಗುವುದು.

ಎಲ್ಲಾ ವರ್ಗದ ಅರ್ಹ PAP ಗಳಿಗೆ ಈ ಕೆಳಗಿನ ಬೆಂಬಲ ಲಭ್ಯವಿರುತ್ತದೆ

- ಅಸ್ತವ್ಯಸ್ತಗೊಂಡ ಜೀವನೋಪಾಯದ ಮರುಸ್ಥಾಪನೆಗೆ ಸಂಬಂಧಿಸಿದ ಕ್ರಮಗಳು ಈ ಅಧ್ಯಾಯದಲ್ಲಿ ಲಭ್ಯವಿರುತ್ತದೆ
- ಸಮಾಲೋಚನೆ, ಸೂಕ್ಷ್ಮ ಯೋಜನೆ ತಯಾರಿಕೆ, ಆರ್ಥಿಕ ಸಾಕ್ಷರತೆ, ಸರ್ಕಾರಿ ಯೋಜನೆಗಳು ಮತ್ತು ಬ್ಯಾಂಕ್‌ಗಳೊಂದಿಗಿನ ಸಂಪರ್ಕ ಇತ್ಯಾದಿ ನಿಧಿ ನಿರ್ವಹಣೆ ಬೆಂಬಲ.
- ಪರ್ಯಾಯ ವಸತಿ ಗುರುತಿಸುವಿಕೆ
- ಇಬ್ಬರೂ ಸಂಗಾತಿಗಳ ಹೆಸರಿನಲ್ಲಿ ಅಧಿಕಾರಾವಧಿಯ ಭದ್ರತೆ ಮತ್ತು ನೋಂದಣಿ. ತರಬೇತಿ ಮತ್ತು ಕೌಶಲ್ಯ ಅಭಿವೃದ್ಧಿ
- ಉದ್ಯೋಗ ಏಜೆನ್ಸಿಗಳು/ಸಂಸ್ಥೆಗಳೊಂದಿಗೆ ಸಂಪರ್ಕ

## 1.10. ವೆಚ್ಚದ ಅಂದಾಜು ಮತ್ತು ನಿಧಿಯ ಮೂಲ

ಆದಾಯ ಮರುಸ್ಥಾಪನೆ ಯೋಜನೆಯ ಅನುಷ್ಠಾನಕ್ಕೆ ತಾತ್ಕಾಲಿಕ ವೆಚ್ಚವು 15 ಮಿಲಿಯನ್ ರೂಪಾಯಿಗಳಾಗಿದೆ. ಆದಾಗ್ಯೂ, RAPPIC ನಿಂದ RAP ಸಿದ್ಧಪಡಿಸುವ ಸಮಯದಲ್ಲಿ, KRIDE ನೊಂದಿಗೆ ಸಮಾಲೋಚಿಸಿ ಜೀವನೋಪಾಯ ಮರುಸ್ಥಾಪನೆ ಯೋಜನೆಯನ್ನು ಅನುಷ್ಠಾನಗೊಳಿಸಲು ವಿವರವಾದ ಬಜೆಟ್ ಅಂದಾಜು ತಯಾರಿಸಲಾಗುತ್ತದೆ. ಬಜೆಟ್ ಪರಿವರ್ತನಾ ಬೆಂಬಲ (ಭತ್ಯೆಗಳು, ಸಲಹೆ ಮತ್ತು ಸಮಾಲೋಚನೆ), ಕೌಶಲ್ಯ ಅಭಿವೃದ್ಧಿ, ತರಬೇತಿ ಕಾರ್ಯಕ್ರಮಗಳು, ಉದ್ಯೋಗ

ನಿಯೋಜನೆಗಳು (PAP ಗಳು ಲಭ್ಯವಿರುವ ಅವಕಾಶಗಳ ಅವಶ್ಯಕತೆಗಳನ್ನು ಪೂರೈಸಿದರೆ) ಇತ್ಯಾದಿ ಕಾರ್ಯಕ್ರಮಗಳನ್ನು ಒಳಗೊಂಡಿರುತ್ತದೆ. ಮರುಸ್ಥಾಪನೆ ಯೋಜನೆಯಡಿ KRIDE ಜೀವನೋಪಾಯದ ಅನುಷ್ಠಾನಕ್ಕೆ ಸಾಕಷ್ಟು ಬಜೆಟ್ ಒದಗಿಸುತ್ತದೆ.

## 1.11. ಅನುಷ್ಠಾನ ವ್ಯವಸ್ಥೆಗಳು

ಪ್ರತಿ ಕಾರಿಡಾರ್‌ಗೆ, ಪುನರ್ವಸತಿ ಕ್ರಿಯಾ ಯೋಜನೆಯನ್ನು (RAP) RAPPIC ಅಂತಿಮಗೊಳಿಸಿ, ಕಾರ್ಯಗತಗೊಳಿಸುತ್ತದೆ. ಇದಕ್ಕಾಗಿ ಯೋಜನೆ ಅನುಷ್ಠಾನದ ವಿವಿಧ ಹಂತಗಳಲ್ಲಿ ವಿವಿಧ ಸಂಸ್ಥೆಗಳ ಒಳಗೊಳ್ಳುವಿಕೆ ಅಗತ್ಯವಿರುತ್ತದೆ. ಈ ವಿಭಾಗವು RAP ಯ ಯಶಸ್ವಿ ಅನುಷ್ಠಾನದ ವಿವಿಧ ಸಂಸ್ಥೆಗಳ ಪಾತ್ರಗಳು ಮತ್ತು ಜವಾಬ್ದಾರಿಗಳ ಬಗ್ಗೆ ಗಮನಹರಿಸುತ್ತದೆ.. RFCTLARR ಕಾಯ್ದೆಯ ಪ್ರಕಾರ, ಪುನರ್ವ್ಯವಸ್ಥೆ ಮತ್ತು ಪುನರ್ವಸತಿ ಅನುಷ್ಠಾನವು ಯೋಜನೆಯ ಪ್ರತಿಪಾದಕರ (ಅಂದರೆ, ಕೆ-ರೈಡ್) ಜವಾಬ್ದಾರಿಯಾಗಿದೆ. ಆದಾಗ್ಯೂ, ಯೋಜನಾ ಮಟ್ಟದಲ್ಲಿ ಪುನರ್ವ್ಯವಸ್ಥೆ ಮತ್ತು ಪುನರ್ವಸತಿ ಪ್ರಕ್ರಿಯೆಯ ಅನುಷ್ಠಾನದ ಬಗ್ಗೆ ಕಾಯ್ದೆ ಸ್ಪಷ್ಟವಾಗಿ ಉಲ್ಲೇಖಿಸಿಲ್ಲ. RAP ಅನ್ನು ಪರಿಣಾಮಕಾರಿಯಾಗಿ ಕಾರ್ಯಗತಗೊಳಿಸಲು ಮತ್ತು ಮೇಲ್ವಿಚಾರಣೆ ಮಾಡಲು ವಿಶೇಷ ಉಪ ಆಯುಕ್ತರ (ಕರ್ನಾಟಕ ಆಡಳಿತ ಸೇವಾ ಅಧಿಕಾರಿ) ನೇತೃತ್ವದಲ್ಲಿ KRIDE ನಲ್ಲಿ ಸಾಮಾಜಿಕ ನಿರ್ವಹಣಾ ಘಟಕವನ್ನು (SMU) ರಚಿಸಲಾಗುತ್ತದೆ. RAP ಅನುಷ್ಠಾನ ತಂಡಕ್ಕೆ ಸಂಬಂಧಿಸಿದ ಕಾರ್ಯಭಾರ, ಜವಾಬ್ದಾರಿಗಳು ಮತ್ತು ಇತರೆ ವಿವರಗಳನ್ನು ವರದಿಯ ಆಯಾ ಅಧ್ಯಾಯದಲ್ಲಿ ವಿವರಿಸಲಾಗಿದೆ.

### **1.11.1.** ಯೋಜನೆ ಅನುಷ್ಠಾನ ಏಜನ್ಸಿ (PEA)


K-RIDE ಎಂಬುದು ಕರ್ನಾಟಕ ಸರ್ಕಾರ ಮತ್ತು ರೈಲ್ವೆ ಸಚಿವಾಲಯದ ಜಂಟಿ ಉದ್ಯಮವಾಗಿದೆ. ಸಹಕಾರಿ ಒಕ್ಕೂಟ ವ್ಯವಸ್ಥೆಯ ತತ್ವದ ಮೇಲೆ ಕರ್ನಾಟಕ ರಾಜ್ಯದಲ್ಲಿ "ರೈಲು ಮೂಲಸೌಕರ್ಯ ಯೋಜನೆಗಳನ್ನು" ಉತ್ತೇಜಿಸಲು ಇದನ್ನು ರಚಿಸಲಾಗಿದೆ. ಪ್ರಸ್ತುತ, ಪ್ರಮುಖವಾಗಿ ಬೆಂಗಳೂರು ಉಪನಗರ ರೈಲು ಯೋಜನೆ (BSRP) ಮತ್ತು ಎರಡು ದೊಡ್ಡ ಡಬ್ಲಿಂಗ್ ಯೋಜನೆಗಳನ್ನು ಕಾರ್ಯಗತಗೊಳಿಸುವ ನಿರ್ಣಾಯಕ ಜವಾಬ್ದಾರಿಯ ನಿರ್ವಹಣೆಗೆ ಈ ಜಂಟಿ ಉದ್ಯಮವನ್ನು ಕಡ್ಡಾಯಗೊಳಿಸಲಾಗಿದೆ. ಇದು ಬೆಂಗಳೂರಿನಲ್ಲಿ ಪ್ರಧಾನ ಕಚೇರಿ ಹೊಂದಿರುವ K-RIDE, ರೈಲು ಆಧಾರಿತ ಮೂಲಸೌಕರ್ಯ ಯೋಜನೆಗಳನ್ನು ಲವಲವಿಕೆಯುಳ್ಳ, ನೂತನ ಮತ್ತು ಗುಣಾತ್ಮಕ ರೀತಿಯಲ್ಲಿ ಕಾರ್ಯಗತಗೊಳಿಸುವಲ್ಲಿ ಮಾನದಂಡವಾಗುವ ಗುರಿ ಹೊಂದಿದೆ.

KRIDE ಅಧ್ಯಕ್ಷರ ನೇತೃತ್ವದಲ್ಲಿ ಪೂರ್ಣ ಪ್ರಮಾಣದ ವ್ಯವಸ್ಥಾಪಕ ನಿರ್ದೇಶಕರು (MD) ಇರುತ್ತಾರೆ. MD ಅವರು ಒಟ್ಟಾರೆ ಯೋಜನಾ ಚಟುವಟಿಕೆಗಳ ಮೇಲ್ವಿಚಾರಣೆ ಮಾಡುತ್ತಾರೆ ಮತ್ತು ಭೂಸ್ವಾಧೀನ, ಸಾಮರ್ಥ್ಯ ವೃದ್ಧಿ ಮತ್ತು RAP ಯ ಅನುಷ್ಠಾನವನ್ನು ಸುಗಮಗೊಳಿಸುತ್ತಾರೆ. KRIDE, ಇತರೆ ಸಂಬಂಧಪಟ್ಟ ಸರ್ಕಾರಿ ಇಲಾಖೆಗಳು, RAP ತಯಾರಿ ಮತ್ತು ಅನುಷ್ಠಾನ ಸಲಹೆಗಾರ (RAPPIC), ಮತ್ತು RAP ಯ ಭೂಸ್ವಾಧೀನ, ಯೋಜನೆ ಮತ್ತು ಅನುಷ್ಠಾನಕ್ಕಾಗಿ ಸ್ವತಂತ್ರ ಪರಿಸರ ಮತ್ತು ಸಾಮಾಜಿಕ ಮೇಲ್ವಿಚಾರಣಾ ಸಲಹೆಗಾರರೊಂದಿಗೆ ಸಮನ್ವಯದಿಂದ ಕಾರ್ಯನಿರ್ವಹಿಸುವ ಜವಾಬ್ದಾರಿಯನ್ನು ಅವ ರು ನಿರ್ವಹಿಸುತ್ತಾರೆ. ಇದರಲ್ಲಿ ಪರಿಹಾರ ವಿತರಣೆ, ನೆರವು, ಸಂತ್ರಸ್ತರ ಸ್ಥಳಾಂತರ ಮತ್ತು ಅವರಿಗೆ ಪುನಸ್ಥಾನ ಕಲ್ಪಿಸುವ ಕೆಲಸ ಮಾಡುತ್ತಾರೆ. KRIDE (ಅಂದರೆ PEA), RAP ಅನುಷ್ಠಾನಕ್ಕಾಗಿ ಭಾರತ ಸರ್ಕಾರ ಮತ್ತು ಕರ್ನಾಟಕ ಸರ್ಕಾರ ಎರಡಕ್ಕೂ ಜವಾಬ್ದಾರನಾಗಿರುತ್ತದೆ.

### **1.11.2.** ಭೂಸ್ವಾಧೀನ ಘಟಕ (KIADB)

ಯೋಜನೆಗೆ ಅಗತ್ಯವಿರುವ ಭೂಮಿಯನ್ನು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಕಾಯ್ದೆಯಡಿ ಸ್ವಾಧೀನಪಡಿಸಿಕೊಳ್ಳಲಾಗುತ್ತದೆ. ಖಾಸಗಿ ಭೂಸ್ವಾಧೀನವನ್ನು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ (KIADB) ವಿಶೇಷ ಭೂಸ್ವಾಧೀನ ಅಧಿಕಾರಿ (SLAO)ಗಳು KRIDE ಅನುಮೋದಿಸಿದ ಮತ್ತು ಹಸ್ತಾಂತರಿಸುವ ಎಂಜಿನಿಯರಿಂಗ್ ವಿನ್ಯಾಸದ ರೇಖಾಚಿತ್ರಗಳ ಆಧಾರದ ಮೇಲೆ ಮಾಡುತ್ತಾರೆ. ಕಿಯೋಸ್ಕ್‌ಗಳು, ವಾಣಿಜ್ಯ ಮತ್ತು ವಸತಿ ಒತ್ತುವರಿದಾರರು ಸೇರಿದಂತೆ ಶೀರ್ಷಿಕೆದಾರರು ಮತ್ತು ಶೀರ್ಷಿಕೆದಾರರಲ್ಲದವರಿಗೆ KIADA ಪ್ರಕಾರ SLAO ಅವರು ಪರಿಹಾರ ನಿಗದಿಪಡಿಸುತ್ತಾರೆ. ಹಾನಿಗೊಳಗಾದ ಕಟ್ಟಡಗಳು/ರಚನೆಗಳ ಬದಲಿ ವೆಚ್ಚವನ್ನು KIADB ಯ ಇಂಜಿನಿಯರಿಂಗ್ ವಿಭಾಗದಿಂದ ಅಂದಾಜಿಸಲಾಗುವುದು. ಕೃಷಿ ಮತ್ತು ತೋಟಗಾರಿಕೆಯ ನಷ್ಟದ ವೆಚ್ಚವನ್ನು SLAO ಕೋರಿಕೆಯ ಮೇರೆಗೆ ಆಯಾ ಇಲಾಖೆಗಳು ನಿಗದಿಪಡಿಸುತ್ತವೆ.


ವ್ಯವಸ್ಥಾಪಕರು, ಕೇಸ್ ವರ್ಕರ್‌ಗಳು, ಭೂಸ್ವಾಧೀನ ಸಿಬ್ಬಂದಿ ಮುಂತಾದವರ ಬೆಂಬಲದೊಂದಿಗೆ ವಿಶೇಷ ಭೂಸ್ವಾಧೀನಾಧಿಕಾರಿ ಕಾರ್ಯನಿರ್ವಹಿಸುತ್ತಾರೆ. ವಿಶೇಷ ಭೂಸ್ವಾಧೀನಾಧಿಕಾರಿಯು KIADA ಪ್ರಕಾರ ಭೂಸ್ವಾಧೀನ ಪರಿಹಾರ ಮಂಜೂರು ಮಾಡುತ್ತಾರೆ. ಪರಿಹಾರ ಮತ್ತು ಪುನರ್ವಸತಿ ನೆರವನ್ನು RPF ನ ಅರ್ಹತೆಯ ಮ್ಯಾಟ್ರಿಕ್ಸ್‌ನಲ್ಲಿ KRIDE ಸಾಮಾಜಿಕ ನಿರ್ವಹಣಾ ಘಟಕದಿಂದ ಪಾವತಿಸಲಾಗುತ್ತದೆ. K-RIDE ಪರವಾಗಿ KIADB ವಿಶೇಷ ಭೂಸ್ವಾಧೀನಾಧಿಕಾರಿಯು ಭೂಮಿ ಮತ್ತು ನಿರ್ಮಾಣಗಳಿಗೆ ಪರಿಹಾರ ಕುರಿತು ಅನುಮೋದನೆ ನೀಡುತ್ತಾರೆ. KIADB ಯಲ್ಲಿ ಭೂ ಸ್ವಾಧೀನ ಘಟಕಕ್ಕಾಗಿ ಸಂಸ್ಥೆಯ ಸೆಟಪ್‌ನ ಫ್ಲೋ ಚಾರ್ಟ್ ಅನ್ನು ಕೆಳಗಿನ ಚಿತ್ರದಲ್ಲಿ ತೋರಿಸಲಾಗಿದೆ.




*ಚಿತ್ರ* 7: KIADB *ಭೂಸ್ವಾಧೀನ ಘಟಕದ ಸಂಘಟನಾ ವ್ಯವಸ್ಥೆ*


### 1.11.3. ಸಾಮಾಜಿಕ ನಿರ್ವಹಣಾ ಘಟಕ (KRIDE)

KRIDE ಸಾಮಾಜಿಕ ನಿರ್ವಹಣಾ ಘಟಕವನ್ನು (SMU) ಸ್ಥಾಪಿಸುತ್ತದೆ, ಇದು SLAO- KIADB ನೊಂದಿಗೆ ಭೂಸ್ವಾಧೀನ ಮತ್ತು ಪುನರ್ವ್ಯವಸ್ಥೆ ಮತ್ತು ಪುನರ್ವಸತಿ ಚಟುವಟಿಕೆಗಳನ್ನು ಹಾಗೂ ಮಧ್ಯಸ್ಥಗಾರರ ಸಮಾಲೋಚನೆ ಮತ್ತು ಪಾಲ್ಗೊಳ್ಳುವಿಕೆಯನ್ನು ನೋಡಿಕೊಳ್ಳುತ್ತದೆ ಕೈಗೊಳ್ಳುತ್ತದೆ. SMU ಅಧಿಸೂಚಿತ ಕೊಳಗೇರಿ ನಿವಾಸಿಗಳ ಪುನರ್ವಸತಿ ಕುರಿತು, ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ (KSDB) ಸೇರಿದಂತೆ ಇತರ ಪಾಲುದಾರರೊಂದಿಗೆ ಸಮನ್ವಯ ಸಾಧಿಸುತ್ತದೆ. K-RIDE ತಿಳುವಳಿಕೆ ಒಪ್ಪಂದ (MOU) (ಫ್ರೇಮ್‌ವರ್ಕ್ ಅಗ್ರಿಮೆಂಟ್, ಇದು BSRP ಯಿದ ಪ್ರಭಾವಿತವಾಗಿರುವ ಕೊಳಗೇರಿ ನಿವಾಸಿಗಳ ಪುನರ್ವ್ಯವಸ್ಥೆ ಮತ್ತು ಪುನರ್ವಸತಿಗಾಗಿ ಉತ್ತಮವಾಗಿ ವ್ಯಾಖ್ಯಾನಿಸಲಾದ ಚೌಕಟ್ಟನ್ನು ಒಳಗೊಂಡಿರುತ್ತದೆ). KSDB ಯೊಂದಿಗೆ ಅಧಿಸೂಚಿತ ಕೊಳಗೇರಿ ನಿವಾಸಿಗಳನ್ನು ಪುನರ್ವ್ಯವಸ್ಥೆ ಮತ್ತು ಪುನರ್ವಸತಿಗಾಗಿ ಗುರುತಿಸಲು, ಎಣಿಕೆ, ಮೌಲ್ಯಮಾಪನ, ಸ್ಥಳಾಂತರ (ಶಾಶ್ವತ ಮತ್ತು ತಾತ್ಕಾಲಿಕ ಎರಡೂ) ಮಾಡಲಾಗುತ್ತದೆ. MOU ಅಡಿಯಲ್ಲಿ K-RIDE ನಿಂದ ಬಜೆಟ್ ಅನ್ನು ಭರಿಸಲಾಗುವುದು. ಈ MOU ,ರಾಷ್ಟ್ರೀಯ ಮತ್ತು ರಾಜ್ಯ ಕಾನೂನುಗಳು, K-RIDE ನ CRP, ಮತ್ತು EIB ಮತ್ತು KfW ನ ಪರಿಸರ ಮತ್ತು ಸಾಮಾಜಿಕ ನೀತಿಗಳನ್ನು ಅನುಸರಿಸುತ್ತದೆ. ಈ SMU ಅನ್ನು RAP ತಯಾರಿ ಮತ್ತು ಅನುಷ್ಠಾನ ಸಲಹೆಗಾರರು (RAPPIC) ಬೆಂಬಲಿಸುತ್ತಾರೆ. SMU ಗಾಗಿ ಸಂಸ್ಥೆಯ ಸೆಟಪ್‌ನ ಗತಿನಕ್ಷೆಯನ್ನು (ಫ್ಲೋ ಚಾರ್ಟ್) ಅನ್ನು ಕೆಳಗಿನ ಚಿತ್ರದಲ್ಲಿ ತೋರಿಸಲಾಗಿದೆ.


Managing Director K RIDE
General Manager Civil (L&PC)
(Head of ESMU)
Civil Engineer
Special Deputy Commissioner
(Head of SMU)
Senior Social Development Expert
R&R Officer
RAPPIC Staff Positions
Team Leader cum Resettlement Expert
Livelihood Restoration Expert (Intermit-tent)
Gender Development Expert (Intermit-tent)

### 1.11.4. ಪುನರ್ವ್ಯವಸ್ಥೆ ಮತ್ತು ಪುನರ್ವಸತಿ ನಿರ್ಣಯ

ಪ್ರಾರಂಭದಲ್ಲಿ RAPIC ಯೋಜನೆಯ ಅರ್ಹತೆಯ ಮ್ಯಾಟ್ರಿಕ್ಸ್‌ಗೆ ಅನುಗುಣವಾಗಿ ಶೀರ್ಷಿಕೆದಾರರು ಮತ್ತು ಶೀರ್ಷಿಕೆದಾರರಲ್ಲದವರಿಗೆ ಸೂಕ್ಷ್ಮ ಯೋಜನೆ21 ಅನ್ನು ಅಭಿವೃದ್ಧಿಪಡಿಸುತ್ತದೆ. RAPIC ಸಲ್ಲಿಸಿದ ಕರಡು ಸೂಕ್ಷ್ಮ ಯೋಜನೆಯನ್ನು SMU ಪರಿಶೀಲಿಸುತ್ತದೆ. ಸೂಕ್ಷ್ಮ ಯೋಜನೆಯು PAP ಗಳ ಹೆಸರು ಮತ್ತು ವಿಳಾಸ, ಪ್ರಭಾವದ ಪ್ರಕಾರ, R&R ಪ್ರಯೋಜನ ಇತ್ಯಾದಿಗಳನ್ನು ಒಳಗೊಂಡಿರುತ್ತದೆ. 15 ದಿನಗಳ ಪರಿಶೀಲನೆಯ ನಂತರ, PAP ಗಳನ್ನು ವಿಶೇಷ DC ಯಿಂದ ವಿಚಾರಣೆಗೆ ಕರೆಯಲಾಗುತ್ತದೆ. PAP ಗಳು ಪುರಾವೆಗಳನ್ನು (ದಾಖಲೆಗಳನ್ನು ಸಲ್ಲಿಸಬೇಕು. ) ವಿಚಾರಣೆಯ ಸಮಯದಲ್ಲಿ ಅವರ ಹಕ್ಕನ್ನು ದೃಢೀಕರಿಸುವ ಅಗತ್ಯವಿದೆ. ವಿಚಾರಣೆಯ ಆಧಾರದ ಮೇಲೆ ವಿಶೇಷ DC ಸೂಕ್ಷ್ಮ ಯೋಜನೆಯನ್ನು ಅಂತಿಮಗೊಳಿಸಿ ಅನುಮೋದನೆಗಾಗಿ MD, KRIDE ಗೆ ಸಲ್ಲಿಸುತ್ತಾರೆ. ವಿಶೇಷ ಉಪ ಆಯುಕ್ತರು ಯೋಜನೆಯ ಅರ್ಹತೆಯ ಮ್ಯಾಟ್ರಿಕ್ಸ್‌ಗೆ ಅನುಗುಣವಾಗಿ ಸ್ಥಳಾಂತರಗೊಂಡ ವ್ಯಕ್ತಿಗಳ ಹೆಸರುಗಳು ಮತ್ತು ಅವರ ಅರ್ಹತೆಗಳನ್ನು ಪಟ್ಟಿ ಮಾಡುವ ಪ್ರತ್ಯೇಕ ಪುನರ್ವ್ಯವಸ್ಥೆ ಮತ್ತು ಪುನರ್ವಸತಿ ಅವಾರ್ಡ್ ಅನ್ನು ರವಾನಿಸುತ್ತಾರೆ. ಸೂಕ್ಷ್ಮ ಯೋಜನೆಗೆ MD KRIDE ನಿಂದ ಅನುಮೋದನೆಯ ಬಳಿಕ ಎಲೆಕ್ಟ್ರಾನಿಕ್ ಕ್ಲಿಯರೆನ್ಸ್ ಸಿಸ್ಟಮ್ (ECS) ಮೂಲಕ PAP ಗಳ ಬ್ಯಾಂಕ್ ಖಾತೆಗೆ ಅದನ್ನು ಪಾವತಿ ಮಾಡುತ್ತಾರೆ. ಪುನರ್ವಸತಿ ಪ್ರಕ್ರಿಯೆಯ ಫ್ಲೋ ಚಾರ್ಟ್ ಅನ್ನು ಕೆಳಗೆ ತೋರಿಸಲಾಗಿದೆ:




***ಚಿತ್ರ 8:*** *ಪುನರ್ವಸತಿ ಪ್ರಕ್ರಿಯೆಯ ಫ್ಲೋ ಚಾರ್ಟ್*

### 1.11.5. ಪುನರ್ವ್ಯವಸ್ಥೆ ಮತ್ತು ಪುನರ್ವಸತಿ ಹಕ್ಕು ಚೌಕಟ್ಟಿನ ಸಾರಾಂಶ (R&REF)

i. ಸರ್ಕಾರದ ನಿಬಂಧನೆಗಳು ಮತ್ತು KfW ಸುರಕ್ಷತಾ ನೀತಿಯ ಕುರಿತಾಗಿ ವಿಶ್ಲೇಷಣೆಯ ಆಧಾರದ ಮೇಲೆ, ಈ ಯೋಜನೆಗೆ ಕೆಳಗಿನ ಮರುಹೊಂದಿಸುವ ತತ್ವಗಳನ್ನು ಅಳವಡಿಸಿಕೊಳ್ಳಲಾಗಿದೆ.

   ಇದು R&REF KfW ಯೋಜನೆಗೆ ಅನ್ವಯಿಸುತ್ತದೆ ಮತ್ತು R&REF ಪ್ರಕಾರ ಎಲ್ಲಾ ನಿರೀಕ್ಷಿತ/ಅನಿರೀಕ್ಷಿತ ಪರಿಣಾಮಗಳು ಮತ್ತು ಸಮಸ್ಯೆಗಳನ್ನು ಸರಿದೂಗಿಸಲಾಗುತ್ತದೆ.

ii. ಸಾಮಾನ್ಯವಾಗಿ, ಔಪಚಾರಿಕ ಶೀರ್ಷಿಕೆಯೊಂದಿಗೆ ಅಥವಾ ಯಾವುದೇ ಯೋಜನಾ ಸಂತ್ರಸ್ತ ವ್ಯಕ್ತಿಗೆ ಭೂಸ್ವಾಧೀನದ ನಂತರ ಹಾನಿಯಾಗದ ರೀತಿಯಲ್ಲಿ ಭೂಸ್ವಾಧೀನವನ್ನು ಕೈಗೊಳ್ಳಲಾಗುತ್ತದೆ;

iii. K RIDE ಸಂಪೂರ್ಣ ಬದಲಿ ವೆಚ್ಚದ ತತ್ವಗಳ ಆಧಾರದ ಮೇಲೆ ಸ್ವಾಧೀನಪಡಿಸಿಕೊಳ್ಳುತ್ತಿರುವ ಭೂಮಿ ಮತ್ತು ನಿರ್ಮಾಣಗಳಿಗೆ ಪರಿಹಾರವನ್ನು ಪಾವತಿಸುತ್ತದೆ;

iv. ಎಲ್ಲಾ ಚಟುವಟಿಕೆಗಳು ಮತ್ತು ಕಾರ್ಯವಿಧಾನಗಳನ್ನು ಔಪಚಾರಿಕವಾಗಿ ದಾಖಲಿಸಲಾಗುತ್ತದೆ;

v. ಯೋಜನೆಯ ಬಾಧಿತ ವ್ಯಕ್ತಿಗಳ ಆಸ್ತಿ ಮತ್ತು ಪಿತ್ರಾರ್ಜಿತ ಹಕ್ಕುಗಳನ್ನು ಗೌರವಿಸಲಾಗುತ್ತದೆ;

vi. ಔಪಚಾರಿಕ ಶೀರ್ಷಿಕೆಯಿಲ್ಲದ ಯೋಜನಾ ಬಾಧಿತ ವ್ಯಕ್ತಿಗಳ ಜೀವನೋಪಾಯವು ಅವರು

ಬಳಸುತ್ತಿರುವ ಸಾರ್ವಜನಿಕ ಭೂಮಿಯ ಮೇಲೆ ಅವಲಂಬಿತವಾಗಿದ್ದರೆ, ಅವರ ಜೀವನೋಪಾಯ ಮತ್ತು ಜೀವನ ಮಟ್ಟವನ್ನು ಸುಧಾರಿಸುವ ಪ್ರಯತ್ನದಲ್ಲಿ ಅವರನ್ನು ಸ್ಥಳಾಂತರದ ಪೂರ್ವ ಮಟ್ಟದಲ್ಲಿ ಇದ್ದ ರೀತಿ ಪುನಃಸ್ಥಾಪಿಸಲು ಸಹಾಯ ಮಾಡಲಾಗುತ್ತದೆ;;

---

[21] ಈ ಸೂಕ್ಷ್ಮ ಯೋಜನೆಯು ಎಲ್ಲಾ ಅಂಶಗಳ ಪರಿಹಾರ, ಪುನರ್ವ್ಯವಸ್ಥೆ ಮತ್ತು ಪುನರ್ವಸತಿ ನೆರವು, ಜೀವನೋಪಾಯಗಳ ಮರುಸ್ಥಾಪನೆ ನೆರವು, ಕೌಶಲ ಅಭಿವೃದ್ಧಿ ನೆರವು ಇತ್ಯಾದಿಗಳನ್ನು ಒಂದು ಮನೆಯಲ್ಲಿರುವ PAP ಗಳಿಗೆ ಸಮಯದ ಪ್ರಮಾಣದಲ್ಲಿ ಒಳಗೊಂಡಿರುತ್ತದೆ.

vii. ಯೋಜನೆಯಿಂದ ಬಾಧಿತ ವ್ಯಕ್ತಿಯು ಕಾನೂನು ಶೀರ್ಷಿಕೆ ಇಲ್ಲದೆ, ಮೇಲಿನ ನಿರ್ಧಾರಗಳಿಂದ ತೃಪ್ತರಾಗದಿದ್ದರೆ ಅವರು ಕುಂದುಕೊರತೆ ಪರಿಹಾರ ಸಮಿತಿಯನ್ನು ಸಂಪರ್ಕಿಸಬಹುದು;

viii. ತಾತ್ಕಾಲಿಕವಾಗಿ ಭೂಮಿ ಅಗತ್ಯವಿರುವ ಸಂದರ್ಭಗಳಲ್ಲಿ ಯೋಜನೆಯಿಂದ ಬಾಧಿತ ವ್ಯಕ್ತಿಗಳಿಗೆ ಔಪಚಾರಿಕ ಟೈಟಲ್ ಹೊಂದಿರುವ ಭೂಮಿಯನ್ನು ಬಳಸಿದ ಅವಧಿಗೆ ಮೌಲ್ಯಮಾಪನ ಮಾಡಿದ ನ್ಯಾಯಯುತ ಬಾಡಿಗೆ ಬೆಲೆಗೆ ಪರಿಹಾರ ನೀಡಲಾಗುತ್ತದೆ. ಮತ್ತು ಭೂಮಿಯನ್ನು ಅದೇ ಸ್ಥಿತಿಯಲ್ಲಿ ಅಥವಾ ಮೊದಲಿನಂತೆಯೇ ಹಿಂತಿರುಗಿಸಲಾಗುತ್ತದೆ.

ix. ಎಲ್ಲಾ ಭೂಮಿ ಮತ್ತು ಸ್ಥಿರ ಆಸ್ತಿಗೆ ನ್ಯಾಯಯುತ ಮಾರುಕಟ್ಟೆ ಮೌಲ್ಯದ ಪರಿಹಾರ ಪಾವತಿಸಿದ ಬಳಿಕ ಹೆಚ್ಚುವರಿಯಾಗಿ ಪುನರ್ವಸತಿ ಅನಿವಾರ್ಯವಾಗಿದ್ದರೆ, ಯೋಜನೆಯ ಬಾಧಿತ ವ್ಯಕ್ತಿಗಳಿಗೆ ಸ್ಥಳಾಂತರ ಮತ್ತು ಇತರ ಸಂಬಂಧಿತ (ಅಂದರೆ ಸಂಚಾರ ವೆಚ್ಚ, ಸಾರಿಗೆ, ಆಡಳಿತಾತ್ಮಕ ವೆಚ್ಚಗಳು ಇತ್ಯಾದಿ) ವೆಚ್ಚಗಳಲ್ಲಿ ಸಹಾಯ ಒದಗಿಸಲಾಗುತ್ತದೆ;

x. ಯೋಜನೆಯ ಅಂತಿಮ ದಿನಾಂಕದ ನಂತರ ಯಾವುದೇ ಚಟುವಟಿಕೆಗಳನ್ನು ಪ್ರಾರಂಭಿಸುವ ವ್ಯಕ್ತಿಗಳಿಗೆ ಈ ಹಕ್ಕುಗಳು ಅನ್ವಯವಾಗುವುದಿಲ್ಲ;

xi. ನಿರ್ಮಾಣ ಉದ್ದೇಶಗಳಿಗಾಗಿ ಭೂಮಿ ಮತ್ತು ಇತರ ಸ್ವತ್ತುಗಳನ್ನು ಸ್ವಾಧೀನಪಡಿಸಿಕೊಳ್ಳುವ ಮೊದಲು ಪರಿಹಾರ ಮತ್ತು ಸೂಕ್ತ ಪುನರ್ವ್ಯವಸ್ಥೆ ಮತ್ತು ಪುನರ್ವಸತಿ ನೆರವು ಒದಗಿಸಲಾಗುತ್ತದೆ;

xii. ಯೋಜನೆಯಿಂದ ಬಾಧಿತ ಎಲ್ಲಾ ವ್ಯಕ್ತಿಗಳು (ಖಾಸಗಿ ಮತ್ತು ಸಾರ್ವಜನಿಕ, ವೈಯಕ್ತಿಕ ಮತ್ತು ವ್ಯವಹಾರ) ಸ್ವಾಧೀನಪಡಿಸಿಕೊಂಡ ಭೂಮಿಗೆ ಪರಿಹಾರ ಪಡೆಯಲು ಅರ್ಹರಾಗಿರುತ್ತಾರೆ; R&REF ನ ನಿಬಂಧನೆಗಳಿಗೆ ಅನುಗುಣವಾಗಿ ನಷ್ಟಗಳು ಅಥವಾ ಹಾನಿಗಳಿಗೆ ಪರಿಹಾರ ಮತ್ತು ನೆರವು ನೀಡಲಾಗುತ್ತದೆ. ಭೂಮಿ ಅಥವಾ ಆಸ್ತಿಯನ್ನು ಸ್ವಾಧೀನಪಡಿಸಿಕೊಳ್ಳುವ ಮೊದಲು ಪರಿಹಾರದ ಮೊತ್ತವನ್ನು ಅವರಿಗೆ ಪಾವತಿಸಲಾಗುತ್ತದೆ. ಅದನ್ನು ಸ್ವೀಕರಿಸದಿರುವವರು ತಮ್ಮ ಕುಂದುಕೊರತೆಗಳನ್ನು ಕುಂದುಕೊರತೆ ಪರಿಹಾರ ಸಮಿತಿ (GRC) / ನ್ಯಾಯಾಲಯಗಳ ಮುಂದೆ ನೋಂದಾಯಿಸುತ್ತಾರೆ;

xiii. ಸಮುದಾಯ ಸ್ವತ್ತುಗಳನ್ನು ಎಲ್ಲೇ ಸ್ವಾಧೀನಪಡಿಸಿಕೊಂಡರೂ, ಸಂಬಂಧಪಟ್ಟ ಏಜೆನ್ಸಿಗಳು/ಇಲಾಖೆಗಳ ಸಮನ್ವಯದೊಂದಿಗೆ K RIDE ಮೂಲಕ ಅದನ್ನು ಮರುಸ್ಥಾಪಿಸಲಾಗುತ್ತದೆ

### **1.11.6.** RAPPIC (ಅನುಷ್ಠಾನ ಮತ್ತು ನಂತರದ ಪುನರ್ವಸತಿ ಸಂದರ್ಭದಲ್ಲಿ)

ಪುನರ್ವ್ಯವಸ್ಥೆ ಮತ್ತು ಪುನರ್ವಸತಿ ಚಟುವಟಿಕೆಗಳ ಅನುಷ್ಠಾನದಲ್ಲಿ RAP ತಯಾರಿ ಮತ್ತು ಅನುಷ್ಠಾನ ಸಲಹೆಗಾರ (RAPPIC) ನಿರ್ಣಾಯಕ ಪಾತ್ರ ವಹಿಸುತ್ತಾರೆ. RAPIC ಯು RAP ಗಳನ್ನು ಅಭಿವೃದ್ಧಿಪಡಿಸುತ್ತದೆಯಲ್ಲದೆ ಸ್ಥಳಾಂತರದ ಸಮಯದಲ್ಲಿ ಪೀಡಿತ ಕುಟುಂಬಗಳು/ವ್ಯಕ್ತಿಗಳಿಗೆ ನೆರವು ನೀಡುವಲ್ಲಿ KRIDE ಗೆ ಅನುಷ್ಠಾನ ಬೆಂಬಲವನ್ನು ವಿಸ್ತರಿಸುತ್ತದೆ. RAPPIC ನ ಜವಾಬ್ದಾರಿಗಳು, (x) ಕಾರಿಡಾರ್ ಪ್ರಕಾರ RAP ಗಳನ್ನು ಸಿದ್ಧಪಡಿಸುವಲ್ಲಿ IA ಗೆ ಸಹಾಯ ಮಾಡುವುದು, (i) ನಿಯಮಿತ ಸಮಾಲೋಚನೆಗಳನ್ನು ನಡೆಸುವುದು, (i) ಬಾಧಿತ ನಿರ್ಮಾಣಗಳು, ಕುಟುಂಬಗಳು, ವ್ಯಕ್ತಿಗಳ ಡೇಟಾ ಬೇಸ್ ತಯಾರಿಕೆ, (ii) ಕ್ಷೇತ್ರ ಸಮೀಕ್ಷೆಯ ಮೂಲಕ ಡೇಟಾಬೇಸ್ ಪರಿಶೀಲನೆ, (iii) ಹಕ್ಕುದಾರರಲ್ಲದವರ ಕಳೆದುಹೋದ ಸ್ವತ್ತುಗಳ ಬದಲಿ ವೆಚ್ಚ ಸೇರಿದಂತೆ ಸೂಕ್ಷ್ಮ ಯೋಜನೆ ತಯಾರಿ, (iv) ಗುರುತಿನ ಚೀಟಿಗಳ ವಿತರಣೆ, (v) ಆದಾಯ ಮರುಸ್ಥಾಪನೆಯ ಯೋಜನೆ ಸಿದ್ಧಪಡಿಸುವುದು (vi) ಮೇಲ್ವಿಚಾರಣಾ ವ್ಯವಸ್ಥೆಯನ್ನು ಸುಧಾರಿಸುವುದು, (vii) ಅನುಷ್ಠಾನ ಸಿಬ್ಬಂದಿಯ ಸಾಮರ್ಥ್ಯ ವೃದ್ಧಿ, (viii) ಕೊಳಗೇರಿ ನಿವಾಸಿಗಳು, ಸರ್ಕಾರಿ ಜಮೀನಿನ ಅತಿಕ್ರಮಣದಾರರು, ದುರ್ಬಲ PAP ಗಳು, ಇತ್ಯಾದಿಗಳ ನಿರ್ದಿಷ್ಟ ಅಗತ್ಯಗಳಿಗೆ ಸ್ಪಂದಿಸುವುದು, (ix) ಅನುಷ್ಠಾನ ಚಟುವಟಿಕೆಗಳು ಮತ್ತು ಇತರ ಸಂಬಂಧಿತ ಚಟುವಟಿಕೆಗಳ ನಿಯಮಿತ ಅನುಸರಣೆ. RAPIC ಅನ್ನು Sr. SDO, SMU ಮೂಲಕ ಮೇಲ್ವಿಚಾರಣೆ ಮಾಡಲಾಗುತ್ತದೆ. ಕರಡು TOR incl. RAPPIC ಗಾಗಿ ಕಾರ್ಯಗಳ ವ್ಯಾಪ್ತಿಯನ್ನು ಅಮುಬಂಧ J ನಲ್ಲಿ ಲಗತ್ತಿಸಲಾಗಿದೆ.
ಪುನರ್ವಸತಿ ಅನುಸರಣೆ ಸಮಯದಲ್ಲಿ RAPIC ನ ಸೇವೆಗಳು ಸಹ ಅಗತ್ಯವಿದೆ.

### **1.11.7.** BSRP ಯೋಜನೆಯಲ್ಲಿ ಕುಂದುಕೊರತೆಗಳ ಪರಿಹಾರದ ಕಾರ್ಯವಿಧಾನ

ಮೇಲೆ ವಿವರಿಸಿದಂತೆ ಒಪ್ಪಿಗೆಯಾದ ಪರಿಹಾರ ಮತ್ತು ಪುನರ್ವಸತಿ ನೀತಿಯ ಪ್ರಕಾರ ಭೂಸ್ವಾಧೀನ ಮಾಡಲಾಗುತ್ತದೆ. ಎಲ್ಲಾ ಕುಂದುಕೊರತೆಗಳಿಗೆ ಸಂಬಂಧಿಸಿದ ಪರಿಸರ ಮತ್ತು ಸಾಮಾಜಿಕ


ಸಮಸ್ಯೆಗಳನ್ನು (EMP ಕ್ರಮಗಳ ಅನುಷ್ಠಾನ ಮತ್ತು ಭೂಮಿ ಮತ್ತು ಪುನರ್ವಸತಿ ನೆರವಿಗೆ ಪರಿಹಾರ) SMU ಯು ಮುಖ್ಯಸ್ಥರಾಗಿರುವ ಕೆ-ರೈಡ್‌ನ ಪ್ರಧಾನ ವ್ಯವಸ್ಥಾಪಕರು (ಭೂಮಿ ಮತ್ತು ಯೋಜನಾ ಸಮನ್ವಯ) ಮೂಲಕ ಪರಿಹರಿಸಲಾಗುತ್ತದೆ. K-RIDE ನ ಕಾರ್ಪೊರೇಟ್ ಕಚೇರಿ ಅಥವಾ ಇತರ ಯಾವುದೇ ಒಳಗೊಂಡಿರುವ ಏಜೆನ್ಸಿಯಲ್ಲಿ ಸ್ವೀಕರಿಸಿದ PAP ಗಳು ಅಥವಾ ಇತರ ಸಾರ್ವಜನಿಕ ಸದಸ್ಯರ ಕುಂದುಕೊರತೆಗಳನ್ನು ವಿಷಯಾಧಾರಿತವಾಗಿ ವಿಂಗಡಿಸಲಾಗುತ್ತದೆ. ಅಲ್ಲದೆ, ಅವುಗಳನ್ನು ಬಗೆಹರಿಸಲು ಆಯಾ ಕಚೇರಿಗಳು/ಏಜೆನ್ಸಿಗಳಿಗೆ ತಿಳಿಸಲಾಗುತ್ತದೆ.

ಕುಂದುಕೊರತೆ ಪರಿಹಾರವನ್ನು ಎರಡು ಹಂತಗಳಲ್ಲಿ ಕೈಗೊಳ್ಳಲಾಗುತ್ತದೆ: ಅವುಗಳೆಂದರೆ ಮೊದಲ ಹಂತ ಮತ್ತು ಮೇಲ್ಮನವಿ ಹಂತ. ಬಾಧಿತ ವ್ಯಕ್ತಿಗಳ ಕುಂದುಕೊರತೆಗಳನ್ನು ಮೊದಲು ಕೆ-ರೈಡ್ (PAP ಗಳು, ಗುತ್ತಿಗೆದಾರರು, ಕೆ-ರೈಡ್‌ನ ಪರಿಸರ ಮತ್ತು ಸಾಮಾಜಿಕ ಕ್ಷೇತ್ರಾಧಿಕಾರಿಗಳ ಮೂಲಕ, ಪರಿಸರ ಮೇಲ್ವಿಚಾರಣಾ ಸಲಹೆಗಾರರು, ಪುನರ್ವಸತಿ ಯೋಜನೆ ಅನುಷ್ಠಾನ ಸಲಹೆಗಾರರು ಇತ್ಯಾದಿ) ಮತ್ತು ಭೂ ಸ್ವಾಧೀನ ಕಚೇರಿ, ಕೆಐಎಡಿಬಿ ಅವರ ಗಮನಕ್ಕೆ ತರಲಾಗುತ್ತದೆ. ಈ ಹಂತದಲ್ಲಿ, ವಿಷಯದ ಆಧಾರದ ಮೇಲೆ ಸಮಸ್ಯೆ ಪರಿಹರಿಸಲು ತೆಗೆದುಕೊಳ್ಳುವ ಸಮಯವು 15 ದಿನಗಳಿಂದ ಒಂದು ತಿಂಗಳವರೆಗೆ ಬದಲಾಗಬಹುದು.

ಭೂಮಿಗೆ ಸಂಬಂಧಿಸಿದ ಪ್ರಕರಣಗಳು ಒಂದು ವಾರಕ್ಕಿಂತ ಹೆಚ್ಚು ಸಮಯ ತೆಗೆದುಕೊಳ್ಳುತ್ತದೆ ಏಕೆಂದರೆ ಇದರಲ್ಲಿ ಕಾನೂನು ದಾಖಲೆಗಳನ್ನು ಒದಗಿಸುವುದು, ಹೊಂದಾಣಿಕೆಯ ಬದಲಾವಣೆ ಅಥವಾ ಸ್ವಾಧೀನದಿಂದ ಆಸ್ತಿಗಳನ್ನು ಕೈಬಿಡುವುದು ಇತ್ಯಾದಿ ಅಂಶಗಳಿರುತ್ತವೆ. ಈ ಎಲ್ಲಾ ವಿಷಯಗಳಿಗೆ ಕುಂದುಕೊರತೆ ಪರಿಹಾರವನ್ನು ಪ್ರಸ್ತಾಪಿಸುವ ಮೊದಲು ಯೋಜನೆ ಮತ್ತು ವಿನ್ಯಾಸ ವಿಭಾಗದೊಂದಿಗೆ ಸಮಾಲೋಚನೆ ಅಗತ್ಯವಿರುತ್ತದೆ. ಹೀಗಾಗಿ ಪ್ರಕ್ರಿಯೆಯು ಒಂದು ತಿಂಗಳವರೆಗೆ ವಿಸ್ತರಿಸಬಹುದು.

ಬಾಧಿತ ವ್ಯಕ್ತಿಯು ಭೂಸ್ವಾಧೀನ ಕಚೇರಿ ಅಥವಾ K-RIDE ನ ಕ್ಷೇತ್ರ ಮಟ್ಟದ ಕಚೇರಿ/ಕಾರ್ಪೊರೇಟ್ ಕಚೇರಿಯ ಪ್ರಸ್ತಾವಿತ ನಿರ್ಣಯದಿಂದ ತೃಪ್ತನಾಗದೇ ಇದ್ದಲ್ಲಿ ಕುಂದುಕೊರತೆ ಪರಿಹಾರ ಸಮಿತಿಯನ್ನು (GRC) ಸಂಪರ್ಕಿಸಬಹುದು. ವಿಷಯ ಸ್ವೀಕರಿಸಿದ 15 ದಿನಗಳಲ್ಲಿ ಜಿಆರ್‌ಸಿ ಸಭೆ ಸೇರುತ್ತದೆ. ಕುಂದುಕೊರತೆ ಪರಿಹಾರ ಪ್ರಕ್ರಿಯೆಯನ್ನು ಕೆಳಗಿನ ಚಿತ್ರದಲ್ಲಿ ನೀಡಲಾಗಿದೆ. GRC ಯ ಸಂಯೋಜನೆಯು:

- ಕೆ-ರೈಡ್ ನಿರ್ದೇಶಕರು (ಪ್ರಾಜೆಕ್ಟ್ಸ್ ಮತ್ತು ಪ್ಲಾನಿಂಗ್), ಅಧ್ಯಕ್ಷರು
- ಕೆ-ರೈಡ್ ಪ್ರಧಾನ ವ್ಯವಸ್ಥಾಪಕರು (F & A), ಸದಸ್ಯರು
- ಕೆ-ರೈಡ್ ಮುಖ್ಯ ಸಾರ್ವಜನಿಕ ಸಂಪರ್ಕಾಧಿಕಾರಿ, ಸದಸ್ಯರು
- KSDB ಪ್ರತಿನಿಧಿ – ಸದಸ್ಯರು
- KIADB ಪ್ರತಿನಿಧಿ- ಸದಸ್ಯರು
- ತಹಸೀಲ್ದಾರ್, ಸದಸ್ಯರು
- ಸಮುದಾಯದ ಪ್ರತಿನಿಧಿ (PAP – ಪುರುಷ), ಸದಸ್ಯರು
- ಸಮುದಾಯದ ಪ್ರತಿನಿಧಿ (PAP – ಮಹಿಳೆ), ಸದಸ್ಯರು
- RAPPIC ಯ ಟೀಮ್ ಲೀಡರ್, ಸದಸ್ಯರು




***ಚಿತ್ರ* 9:** *ಕುಂದುಕೊರತೆ ಪರಿಹಾರ ಪ್ರಕ್ರಿಯೆ*

GRC ಯ ಮುಖ್ಯ ಜವಾಬ್ದಾರಿಗಳು:

- ಅರ್ಹತೆ ಆಧಾರದ ಮೇಲೆ ಪರಿಹಾರ ಮತ್ತು ನೆರವು ನೀಡುವಲ್ಲಿ ಸಮಸ್ಯೆಗಳು ಉದ್ಭವವಾದರೆ ಬಾಧಿತ ವ್ಯಕ್ತಿಗಳಿಗೆ ಬೆಂಬಲವನ್ನು ಒದಗಿಸುವುದು;
- ತೊಂದರೆಗೊಳಗಾದ ಸಮುದಾಯ ಮತ್ತು PAP ಗಳ ಕುಂದುಕೊರತೆಗಳನ್ನು ದಾಖಲಿಸುವುದು ಮತ್ತು ಅವುಗಳನ್ನು ನಿಗದಿತ ಸಮಯಾವಕಾಶದೊಳಗೆ ಪರಿಹರಿಸುವುದು;
- ಅಭಿವೃದ್ಧಿಗೆ ಸಂಬಂಧಿಸಿದಂತೆ ಮತ್ತು K RIDE ನ ನಿರ್ಧಾರದ ಕುರಿತಾಗಿ ಕುಂದುಕೊರತೆಗಳ ಬಗ್ಗೆ ಬಾಧಿತ ವ್ಯಕ್ತಿಗಳು ವರದಿ ಮಾಡಲು;
- ಭೂಸ್ವಾಧೀನ ಮತ್ತು ಸೌಲಭ್ಯಗಳ ಸ್ಥಳಾಂತರದಿಂದ ಉಂಟಾಗುವ ಸಮಸ್ಯೆಗಳು ಮತ್ತು ದೂರುಗಳನ್ನು ಪರಿಹರಿಸುವುದು;

## 1.12. ಪುನರ್ವ್ಯವಸ್ಥೆ ಮತ್ತು ಪುನರ್ವಸತಿ ಬಜೆಟ್

ಖಾಸಗಿ ಭೂಮಿ ಮತ್ತು ಕಟ್ಟಡಗಳ ಹಾನಿಗೆ ಸಂಬಂಧಿಸಿದಂತೆ ಪರಿಹಾರದ ಕುರಿತು ಅಂದಾಜು ಮೊತ್ತದ ಬಜೆಟ್ ಮಂಡಿಸಲಾಗಿದೆ.

ಕೋಷ್ಟಕ 14 ರಲ್ಲಿ ಮಂಡಿಸಲಾದ ಬಜೆಟ್ ನಲ್ಲಿ ಇಡೀ ಯೋಜನೆಗೆ ಸಂಬಂಧಿಸಿದಂತೆ ಭೂ ಪರಿಹಾರ, ಹೆಚ್ಚುವರಿ ಪುನರ್ವಸತಿ ಮತ್ತು ಯೋಜನೆಯ ಸ್ಥಳಾಂತರಗೊಂಡ ಕುಟುಂಬಗಳಿಗೆ ಪುನರ್ವಸತಿ ನೆರವು, SEP ಅನುಷ್ಠಾನಕ್ಕೆ ವೆಚ್ಚ, GAP ಮತ್ತು RR ಅನುಷ್ಠಾನ ಮತ್ತು ಮೇಲ್ವಿಚಾರಣೆಗೆ ಸಲಹೆಗಾರರನ್ನು ತೊಡಗಿಸಿಕೊಳ್ಳುವ ವೆಚ್ಚವನ್ನು ಪ್ರಸ್ತಾಪಿಸಲಾಗಿದೆ. ಇಡೀ ಯೋಜನೆಯ ಎಲ್ಲಾ ಕಾರಿಡಾರ್ ಗಳನ್ನು ಒಳಗೊಂಡಂತೆ ಬಜೆಟ್ ಸಿದ್ಧಪಡಿಸಲಾಗಿದೆ. ಸಮೀಕ್ಷೆಗಳನ್ನು ಇಂದೀಕರಿಸಿದ ನಂತರ ಅಂತಾರಾಷ್ಟ್ರೀಯ ಮಾನದಂಡಗಳೊಂದಿಗೆ ಪರಿಹಾರ ನಿಯಮಗಳ ಅನುಸಾರ ದೃಢೀಕರಣದ ಮೇಲೆ ಈ ಬಜೆಟ್ ತಯಾರಿಸಲಾಗಿದೆ. ಪ್ರಾಥಮಿಕ R&R ಬಜೆಟ್ ಅನ್ನು ಕೆಳಗಿನ ಕೋಷ್ಟಕದಲ್ಲಿ ನೀಡಲಾಗಿದೆ.

**ಟೇಬಲ್ 14. ಪುನರ್‌ಸ್ಥಾಪನೆ ಮತ್ತು ಪುನರ್ವಸತಿ ಬಜೆಟ್**

| ಕ್ರ.ಸಂ. | ವಿವರಣೆ | ಪ್ರಮಾಣ | ದರ, ₹ | ಮೊತ್ತ, ದಶಲಕ್ಷ ₹ |
|---|---|---|---|---|
| | **ಪರಿಹಾರ** | | | |
| 1 | ಭೂಮಿ ಮತ್ತು ಕಟ್ಟಡ ಪರಿಹಾರ (ಖಾಸಗಿ ಭೂಮಿ) | 1 | LS | 250 |
| 2 | ಪಿಎಹೆಚ್‌ಎಸ್-ವಸತಿ (ಟಿಹೆಚ್&ಎನ್‌ಟಿಹೆಚ್) | 270 | | |
| ಎ | ಸ್ಥಳಾಂತರ ಭತ್ಯೆ | 270 | 30000 | 8.1 |
| ಬಿ | ಅನಾನುಕೂಲತೆ ಭತ್ಯೆ | 270 | 70000 | 18.9 |
| ಸಿ | ಬದಲಾವಣೆಯ ಭತ್ಯೆ | 270 | 170000 | 45.9 |
| ಡಿ | ಬಾಡಿಗೆ ಆದಾಯದ ನಷ್ಟ | 166 | 170000 | 28.22 |
| 3 | ಪಿಎಹೆಚ್‌ಎಸ್-ವಸತಿ (ಟಿಹೆಚ್&ಎನ್‌ಟಿಹೆಚ್) | 66 | | 0 |
| ಎ | ಸ್ಥಳಾಂತರ ಭತ್ಯೆ | 66 | 35000 | 2.31 |
| ಬಿ | ವಹಿವಾಟು ನಷ್ಟದ ಭತ್ಯೆ | 66 | 170000 | 11.22 |
| ಸಿ | ಉದ್ದಿಮೆ ಮುಂಗಟ್ಟು ಮರುಸ್ಥಾಪನೆ ಭತ್ಯೆ | 66 | 100000 | 6.6 |
| ಡಿ | ವಾಣಿಜ್ಯ ಬಾಡಿಗೆ ಆದಾಯ | 62 | 340000 | 21.08 |
| 4 | ಪಿಎಹೆಚ್‌ಎಸ್-ವಸತಿ (ಟಿಹೆಚ್&ಎನ್‌ಟಿಹೆಚ್) | 35 | | 0 |
| ಎ | ಸ್ಥಳಾಂತರ ಭತ್ಯೆ | 35 | 35000 | 1.225 |
| ಬಿ | ಅನಾನುಕೂಲತೆ ಭತ್ಯೆ | 35 | 70000 | 2.45 |
| ಸಿ | ವಹಿವಾಟು ನಷ್ಟದ ಭತ್ಯೆ | 35 | 170000 | 5.95 |
| ಡಿ | ಉದ್ದಿಮೆ ಮುಂಗಟ್ಟು ಮರುಸ್ಥಾಪನೆ ಭತ್ಯೆ | 66 | 100000 | 6.6 |
| 5 | ಪಿಎಹೆಚ್‌ಎಸ್-ವಸತಿ (ಟಿಹೆಚ್&ಎನ್‌ಟಿಹೆಚ್) | 165 | | 0 |
| ಎ | ಸ್ಥಳಾಂತರ ಭತ್ಯೆ | 165 | 30000 | 4.95 |
| ಬಿ | ಅನಾನುಕೂಲತೆ ಭತ್ಯೆ | 165 | 70000 | 11.55 |
| ಸಿ | ಬದಲಾವಣೆಯ ಭತ್ಯೆ | 165 | 170000 | 28.05 |
| ಡಿ | ಸಮೀಕ್ಷೆ ಮಾಡದ ಪಿಎಹೆಚ್‌ಗಳಿಗೆ ಯಾವುದೇ ಇತರ ಭತ್ಯೆ | 1 | LS | 25 |
| 6 | ಪಿಎಹೆಚ್‌ಎಸ್ - ಬಾಡಿಗೆದಾರರು – ವಸತಿ | 166 | | 0 |
| ಎ | ಸ್ಥಳಾಂತರ ಭತ್ಯೆ | 166 | 30000 | 4.98 |
| ಬಿ | ಅನಾನುಕೂಲತೆ ಭತ್ಯೆ | 166 | 70000 | 11.62 |
| 7 | ಪಿಎಹೆಚ್‌ಎಸ್ - ಬಾಡಿಗೆದಾರರು – ವಾಣಿಜ್ಯ | 62 | | 0 |
| ಎ | ಸ್ಥಳಾಂತರ ಭತ್ಯೆ | 62 | 35000 | 2.17 |
| ಬಿ | ಉದ್ಯಮ ನಷ್ಟದ ಭತ್ಯೆ | 62 | 170000 | 10.54 |
| ಸಿ | ಉದ್ದಿಮೆ ಮುಂಗಟ್ಟು ಮರುಸ್ಥಾಪನೆ ಭತ್ಯೆ | 62 | 100000 | 6.2 |
| 8 | ಪಿಎಹೆಚ್‌ಎಸ್ - ಉದ್ಯೋಗಿಗಳು | 64 | 100000 | 6.4 |
| 9 | ಕೊಳೆಗೇರಿ ನಿವಾಸಿಗಳು | | | 0 |
| ಎ | ವಸತಿ ನೆರವು ಅನುದಾನ | 110 | 500000 | 55 |

| | | | | |
|---|---|---|---|---|
| ಬಿ | ಸ್ಥಳಾಂತರ ಭತ್ಯೆ | 110 | 35000 | 3.85 |
| ಸಿ | ಬದಲಾವಣೆ ಭತ್ಯೆ | 110 | 170000 | 18.7 |
| ಡಿ | ಬಾಡಿಗೆ ಭತ್ಯೆ | 110 | 100000 | 11 |
| ಇ | ಹೆಚ್ಚುವರಿ ವಸತಿ ನೆರವು ಅನುದಾನ | 110 | 500000 | 55 |
| 10 | ಪಿಎಹೆಚ್ಎಸ್ - ದುರ್ಬಲ ಕುಟುಂಬಗಳು | 217 | 50000 | 10.85 |
| 11 | ಸಾರ್ವಜನಿಕ ಆಸ್ತಿ ಸಂಪನ್ಮೂಲಗಳ ಪುನರ್ಸ್ಥಾಪನೆ | 27 | 500000 | 13.5 |
| | **ಲಿಂಗ ಕ್ರಿಯಾ ಯೋಜನೆ** | | | |
| 12 | ಲಿಂಗ ಕ್ರಿಯಾ ಯೋಜನೆಯ ಅನುಷ್ಠಾನ | 1 | LS | 5 |
| | ಜೀವನೋಪಾಯ ಮರುಸ್ಥಾಪನೆ ಯೋಜನೆ | | | |
| 13 | ಜೀವನೋಪಾಯ ಅನುಷ್ಠಾನ ಯೋಜನೆ | 1 | LS | 15 |
| 14 | ಕೌಶಲ ಅಭಿವೃದ್ಧಿ ತರಬೇತಿ | 1 | LS | 5 |
| | ಕಾರ್ಯಾಚರಣೆಯ ವೆಚ್ಚಗಳು | | | |
| 15 | ಆರ್ಎಪಿಪಿಐಸಿ ತೊಡಗುವಿಕೆ (4 ಆರ್ಎಪಿ ಗಳ ಅಭಿವೃದ್ಧಿ ಮತ್ತು ಅನುಷ್ಠಾನದ ಬೆಂಬಲ) | 1 | LS | 75 |
| 16 | ಎಂ&ಇ ಕನ್ಸಲ್ಟೆಂಟ್‌ಗಳ (ಬಾಹ್ಯ) ತೊಡಗಿಸಿಕೊಳ್ಳುವಿಕೆ | 1 | LS | 15 |
| 17 | ಮಧ್ಯಾವಧಿ ಮತ್ತು ಹಿರಿಯ ಲೆಕ್ಕಪರಿಶೋಧಕ ಸಲಹೆಗಾರರ ತೊಡಗಿಸಿಕೊಳ್ಳುವಿಕೆ | 1 | LS | 10 |
| 18 | ಅನಿರೀಕ್ಷಿತ ಪರಿಣಾಮಗಳು | 1 | LS | 50 |
| | **ಅನಿರೀಕ್ಷಿತ ಪರಿಸ್ಥಿತಿ** | | | |
| 19 | ಅನಿರೀಕ್ಷಿತ ಪರಿಸ್ಥಿತಿ/ ಅನಿರೀಕ್ಷಿತ ಅಗತ್ಯಗಳು | 1 | LS | 85 |
| | **ಒಟ್ಟು** | | | **697.915** |
| | **Say** | | | **700** |

ಈ ಬಜೆಟ್ ಸೂಚಕವಾಗಿದೆ ಮತ್ತು ಆರ್ಎಪಿಅನ್ನು ಅಭಿವೃದ್ಧಿಪಡಿಸಿದಂತೆ ಪರಿಣಾಮಗಳ ಪ್ರಮಾಣಕ್ಕೆ ಅನುಗುಣವಾಗಿ ಬದಲಾಗುತ್ತದೆ. ಭೂಮಿ ಮತ್ತು ಆಸ್ತಿಗಳಿಗೆ ಪರಿಹಾರ ವೆಚ್ಚವನ್ನು ಈ ಬಜೆಟ್‌ನಲ್ಲಿ ಸೇರಿಸಲಾಗಿದೆ; ಕೆ-ರೈಡ್‌ನ ಕಂದಾಯ ಇಲಾಖೆ/ ಭೂಸ್ವಾಧೀನ ಅಧಿಕಾರಿಯಿಂದ ವಾಸ್ತವಾಂಶಗಳನ್ನು ಲೆಕ್ಕ ಹಾಕಲಾಗುತ್ತದೆ.

## 1.13. ಅನುಷ್ಠಾನ ವೇಳಾಪಟ್ಟಿ

**ಆರ್ಎಪಿನ ಅಭಿವೃದ್ಧಿ ಮತ್ತು ಅನುಷ್ಠಾನದ ಅವಧಿಯು ಅಂತಿಮಗೊಂಡ ವಿನ್ಯಾಸಕ್ಕೆ ಅನುಗುಣವಾಗಿರುತ್ತದೆ. ಆದ್ಯತೆಯ ಕಾರಿಡಾರ್ ವಿಧಾನವನ್ನು ಅನುಸರಿಸುತ್ತಿರುವುದರಿಂದ, ಆರ್ಎಪಿ ತಯಾರಿಕೆ ಮತ್ತು ಅನುಷ್ಠಾನವು ಅದೇ ವಿಧಾನವನ್ನು ಅನುಸರಿಸಬೇಕಾಗುತ್ತದೆ. ಎಲ್ಲಾ ಪ್ಯಾಕೇಜ್‌ಗಳನ್ನು ಏಕಕಾಲದಲ್ಲಿ ತೆಗೆದುಕೊಳ್ಳದ ಕಾರಣ, ಆರ್ಎಪಿ ತಯಾರಿಕೆ ಮತ್ತು ಅನುಷ್ಠಾನವು ಸುಮಾರು 2 ರಿಂದ 3 ವರ್ಷಗಳನ್ನು ತೆಗೆದುಕೊಳ್ಳಬಹುದು.ಇದರರ್ಥ ಆರ್ಎಪಿ ಹೆಚ್ಚು ಕಡಿಮೆ ವಿನ್ಯಾಸ ಅಂತಿಮಗೊಳಿಸುವ ವೇಳಾಪಟ್ಟಿಗೆ ಅನುಗುಣವಾಗಿರುತ್ತದೆ. ಆದಾಗ್ಯೂ, ಸಮಾಲೋಚನೆಗಳು, ಕುಂದುಕೊರತೆ ಪರಿಹಾರ ಕಾರ್ಯವಿಧಾನಗಳು, ಮೇಲ್ವಿಚಾರಣೆ ಮತ್ತು ಮೌಲ್ಯಮಾಪನವು ಯೋಜನೆಯ ಅವಧಿಯ ಉದ್ದಕ್ಕೂ ಮುಂದುವರಿಯುತ್ತದೆ.ಪ್ರಸ್ತಾವಿತ ಯೋಜನೆಯ R&R ಚಟುವಟಿಕೆಗಳನ್ನು ಕೆಲಸದ ಹಂತಗಳು ಮತ್ತು ಅನುಷ್ಠಾನದ ಪ್ರಕ್ರಿಯೆಯ ಆಧಾರದ ಮೇಲೆ ಮೂರು ಪ್ರಮುಖ ವರ್ಗಗಳಾಗಿ ವಿಂಗಡಿಸಲಾಗಿದೆ. ಈ ನಾಲ್ಕು ಹಂತಗಳಲ್ಲಿ ಒಳಗೊಂಡಿರುವ ಚಟುವಟಿಕೆಗಳ ವಿವರಗಳೆಂದರೆ ಯೋಜನಾ ತಯಾರಿ ಹಂತ, ಆರ್ಎಪಿ ತಯಾರಿ, ಆರ್ಎಪಿ ಅನುಷ್ಠಾನ ಹಂತ, ಮತ್ತು ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ (M&E) ಹಂತ.**

**ಟೇಬಲ್ 15. ನಿರೀಕ್ಷಿತ ಅನುಷ್ಠಾನ ವೇಳಾಪಟ್ಟಿ**

| ಚಟುವಟಿಕೆಯ ವಿವರಣೆ | **ಆರಂಭವಾಗುವ ದಿನಾಂಕಗಳು** |
|---|---|

| | **ಕಾರಿಡಾರ್ – 1** | **ಕಾರಿಡಾರ್ – 2** | **ಕಾರಿಡಾರ್ – 3** | **ಕಾರಿಡಾರ್ – 4** |
|---|---|---|---|---|
| ಎಸ್ಐಎ/ ಆರ್ಎಫ್ಪಿ ಬಹಿರಂಗಪಡಿಸುವಿಕೆ | ಏಪ್ರಿಲ್-ಜೂನ್ 2024 | | | |
| ಆರ್ಎಪಿಐ ಆನ್‌ಬೋರ್ಡಿಂಗ್ | August 24 | | | |
| ಪಿಎಪಿಎಸ್ ಹಾಗೂ ಸಮುದಾಯಗಳ ಜತೆ ಸಮಾಲೋಚನೆ | ಜನವರಿ 25 | ಸೆಪ್ಟೆಂಬರ್ - 24 | ಮಾರ್ಚ್ 25 | ಅಕ್ಟೋಬರ್ 24 |
| ಯೋಜನಾ ಸಂತ್ರಸ್ತರು (PAPs) ಜನಗಣತಿ ಮತ್ತು ಸಾಮಾಜಿಕ-ಆರ್ಥಿಕ ಸಮೀಕ್ಷೆ | ಮಾರ್ಚ್ 25 | ಅಕ್ಟೋಬರ್ 24 | ಜೂನ್ -26 | ನವೆಂಬರ್ 24 |

| | | | | |
|---|---|---|---|---|
| ಆರ್‌ಎಪಿ ತಯಾರಿಕೆ | ಜುಲೈ 25 | ಡಿಸೆಂಬರ್ 24 | ಸೆಪ್ಟೆಂಬರ್ 26 | ಜನವರಿ 25 |
| ಇಐಬಿ ಮತ್ತು ಕೆಎಫ್‌ಡಬ್ಲ್ಯು ಮೂಲಕ ಆರ್‌ಎಪಿ ಅನುಮೋದನೆ | ನವೆಂಬರ್ 25 | ಜೂನ್ 25 | ಜನವರಿ -26 | ಜುಲೈ– 25 |
| ಯೋಜನೆಯ ಸಂತ್ರಸ್ತರಿಗೆ ಗುರುತಿನ ಚೀಟಿ ವಿತರಣೆ | ಜನವರಿ 26 | ಸೆಪ್ಟೆಂಬರ್ 25 | ಮಾರ್ಚ್ 26 | ಅಕ್ಟೋಬರ್ 25 |
| ಪರಿಹಾರ ಪಾವತಿಗಳ ವಿತರಣೆ | ಏಪ್ರಿಲ್ 26 | ಆಗಸ್ಟ್ 25 | ಜೂನ್-26 | ಜನವರಿ 26 |
| ಯೋಜನೆಯ ಸಂತ್ರಸ್ತರ ಸ್ಥಳಾಂತರ (ಅಗತ್ಯವಾದರೆ) | ಜೂನ್ 26 | ಅಕ್ಟೋಬರ್ 25 | ಸೆಪ್ಟೆಂಬರ್ 26 | ಏಪ್ರಿಲ್ 26 |
| ಆರ್‌ಎಪಿ ಅನುಷ್ಠಾನದ ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ | ಸ್ಥಳಾಂತರದ ದಿನಾಂಕದಿಂದ 1 ವರ್ಷದವರೆಗೆ | | | |
| ಪರಿಸರ ಮತ್ತು ಸಾಮಾಜಿಕ ಪರಿಶೋಧನೆ | ನಿಯಮಿತವಾಗಿ ಪ್ರತಿ ತ್ರೈಮಾಸಿಕದಲ್ಲಿ | | | |

ಕಾರಿಡಾರ್-ವಾರು ಆರ್‌ಎಪಿಗಳ ಅಭಿವೃದ್ಧಿಗೆ ಆಧಾರವಾಗಿರುವ ಮೂಲಭೂತ ಅಂದಾಜಿವು:

- ಸಾಮಾಜಿಕ ನಿರ್ವಹಣೆಗೆ ಸಂಬಂಧಿಸಿದ ಚಟುವಟಿಕೆಗಳು ಕರಡು ಮತ್ತು ಅಂತಿಮ ಪುನರ್ವಸತಿ ಕ್ರಿಯಾ ಯೋಜನೆಯ ತಯಾರಿಕೆ, ಸಾರ್ವಜನಿಕ ಸಮಾಲೋಚನೆಗಳು ಮತ್ತು ಮಾಹಿತಿ ಬಹಿರಂಗಪಡಿಸುವಿಕೆ, ಪುನರ್ವಸತಿ ಯೋಜನೆಗಳ ಬಹಿರಂಗಪಡಿಸುವಿಕೆ, ಭೂಸ್ವಾಧೀನ, ಪರಿಹಾರ ಪಾವತಿ ಮತ್ತು ಇತರ ನೆರವು, ಕುಂದುಕೊರತೆ ಪರಿಹಾರ ಇತ್ಯಾದಿಗಳನ್ನು ಒಳಗೊಂಡಿರುವ ವಿವಿಧ ಹಂತಗಳ ಮೂಲಕ ಸಾಗುತ್ತವೆ. ಪುನರ್ವಸತಿ-ಸಂಬಂಧಿತ ಚಟುವಟಿಕೆಗಳು, ನಿರ್ದಿಷ್ಟ ಪರಿಹಾರದ ಪಾವತಿ, ಸಿವಿಲ್ ಕಾಮಗಾರಿ ಪ್ರಾರಂಭವಾಗುವ ಮೊದಲು ಮತ್ತು ಆರ್‌ಎಪಿ ಪೂರ್ಣಗೊಂಡ ನಂತರ ಮತ್ತು ಅನುಮೋದನೆಯ ನಂತರ ಪೂರ್ಣಗೊಳ್ಳುತ್ತದೆ. ಯೋಜನಾ ಸ್ಥಳವನ್ನು ಗುತ್ತಿಗೆದಾರರಿಗೆ ಹಸ್ತಾಂತರಿಸುವ ಮೊದಲು ಮತ್ತು ಸಿವಿಲ್ ಕಾಮಗಾರಿಯ ನಿರ್ಮಾಣ ಪ್ರಾರಂಭವಾಗುವ ಮೊದಲು ನಷ್ಟದ ಮೌಲ್ಯಮಾಪನ ಮತ್ತು ಪರಿಹಾರ ಪಾವತಿಗೆ ಸಂಬಂಧಿಸಿದ ಎಲ್ಲಾ ಚಟುವಟಿಕೆಗಳನ್ನು ಪೂರ್ಣಗೊಳಿಸಲಾಗುತ್ತದೆ. ಸಂಪೂರ್ಣ ಪರಿಹಾರವನ್ನು ಬದಲಿ ವೆಚ್ಚದಲ್ಲಿ ಪಾವತಿಸುವವರೆಗೆ ಸಂತ್ರಸ್ತರು ಯಾವುದೇ ಭೌತಿಕ ಅಥವಾ ಆರ್ಥಿಕ ಸ್ಥಳಾಂತರವು ಸಂಭವಿಸುವುದಿಲ್ಲ ಮತ್ತು ಸಿವಿಲ್ ಕಾಮಗಾರಿಗಳು ಪ್ರಾರಂಭವಾಗುವ ಮೊದಲು ಪರಿಹಾರವನ್ನು ಪಾವತಿಸಲಾಗಿದೆ ಎಂದು ಕೆ-ರೈಡ್ ಖಚಿತಪಡಿಸುತ್ತದೆ.

- ಆರ್‌ಎಪಿ ತಯಾರಿಕೆ ಮತ್ತು ಅನುಷ್ಠಾನ ವೇಳಾಪಟ್ಟಿಯನ್ನು ಸಿವಿಲ್ ಕಾಮಗಾರಿಗಳ ಅನುಷ್ಠಾನ ವೇಳಾಪಟ್ಟಿಯೊಂದಿಗೆ ಮೇಳೈಸಲಾಗುತ್ತದೆ.

- ಗುತ್ತಿಗೆದಾರರು ಗುತ್ತಿಗೆಯನ್ನು ನೀಡಿದ ತಕ್ಷಣ, ಸರ್ಕಾರಿ ಭೂಮಿ

ಲಭ್ಯವಿರುವ ಪ್ರದೇಶ/ಸೈಟ್‌ಗಳಲ್ಲಿ ಕೆಲಸವನ್ನು ಪ್ರಾರಂಭಿಸಬೇಕಾಗುತ್ತದೆ. ಇದಕ್ಕಾಗಿ, ಕೆ-ರೈಡ್ ಯಾವುದೇ ಒತ್ತುವರಿಯಿಲ್ಲದೆ (ಸಾರ್ವಜನಿಕ ಅತಿಕ್ರಮಣ ಅಥವಾ ಯಾವುದೇ ಖಾಸಗಿ ಭೂಮಿ/ಕಟ್ಟಡಗಳು ಲಭ್ಯವಿಲ್ಲದ) ಸೈಟ್‌ಗಳು ಮತ್ತು ಸ್ಥಳಗಳ ವಿವರಗಳೊಂದಿಗೆ ಗುತ್ತಿಗೆದಾರರಿಗೆ ಸ್ಟ್ರಿಪ್ ಪ್ಲಾನ್ ಅನ್ನು ಒದಗಿಸುತ್ತದೆ.

- ಬಿಡ್ ದಾಖಲೆಗಳು ಕಾಮಗಾರಿಯ ಪ್ರಾರಂಭದ ಸಮಯದಲ್ಲಿ ಹಸ್ತಾಂತರಿಸಬೇಕಾದ ಅನಿಯಂತ್ರಿತ ಭೂಮಿಯ ಪ್ರಮಾಣವನ್ನು ಮತ್ತು ಸ್ವಾಧೀನಪಡಿಸಿಕೊಂಡ ಭೂಮಿಯನ್ನು ಹಸ್ತಾಂತರಿಸುವ ನಂತರದ ಮೈಲಿಗಲ್ಲುಗಳನ್ನು ನಿರ್ದಿಷ್ಟಪಡಿಸುತ್ತದೆ.

- ಕೆ-ರೈಡ್ ಈ ಭೂಮಿ ಹಸ್ತಾಂತರದ ವೇಳಾಪಟ್ಟಿಯನ್ನು ಕಟ್ಟುನಿಟ್ಟಾಗಿ ಅನುಸರಿಸುತ್ತದೆ ಮತ್ತು ಗುತ್ತಿಗೆದಾರರಿಗೆ ಸಕಾಲದಲ್ಲಿ ಭೂಮಿಯನ್ನು ಒದಗಿಸಲಾಗಿದೆ ಎಂಬುದನ್ನು ಖಾತ್ರಿಪಡಿಸಿಕೊಳ್ಳುತ್ತದೆ. ಕೆ-ರೈಡ್ ಸಹ ಸಂಗ್ರಹಣೆ ಮತ್ತು ಸಿವಿಲ್ ಕಾಮಗಾರಿ ವೇಳಾಪಟ್ಟಿಗೆ ಅನುಗುಣವಾಗಿ ಆರ್‌ಎಪಿಯನ್ನು ಅನುಷ್ಠಾನವನ್ನು ಯೋಜಿಸುತ್ತದೆ.
- ಜಿಎಸ್ ಮತ್ತು ಆಎಪಿ ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಸಲಹೆಗಾರರು ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವ ಮೊದಲು ಮತ್ತು ಗುತ್ತಿಗೆದಾರರಿಗೆ ಹಸ್ತಾಂತರಿಸುವ ಮೊದಲು ಪರಿಹಾರದ ಪಾವತಿಯ ಸ್ಥಿತಿಯನ್ನು ಪ್ರಮಾಣೀಕರಿಸುತ್ತಾರೆ.
- ಇಐಬಿ ಮತ್ತು ಕೆಎಫ್‌ಡಬ್ಲ್ಯೂನಿಂದ ಆರ್‌ಎಪಿಗಳನ್ನು ಅಭಿವೃದ್ಧಿಪಡಿಸುವ ಮತ್ತು ಅನುಮೋದಿಸುವವರೆಗೆ ಯಾವುದೇ ಪುನರ್ವಸತಿ ಅನುಷ್ಠಾನವು ನಡೆಯುವುದಿಲ್ಲ
- ಪರಿಹಾರ ಮತ್ತು ಪುನರ್‌ಸ್ಥಾಪನೆ ಮತ್ತು ಪುನರ್ವಸತಿ ನೆರವು ಮತ್ತು ಪೂರಕ ನಿಬಂಧನೆಗಳು ಮತ್ತು ಆರ್‌ಎಪಿಗಳನ್ನು ಅಳವಡಿಸುವ ಮೊದಲು ಯಾವುದೇ ನಿರ್ಮಾಣ ಚಟುವಟಿಕೆಗಳು ಮತ್ತು ಪಿಎಹೆಚ್‌ಗಳ ಸ್ಥಳಾಂತರವು ನಡೆಯುವುದಿಲ್ಲ..

## 1.14. ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ

ಮೇಲ್ವಿಚಾರಣೆ ಮತ್ತು ಮೌಲ್ಯಮಾಪನವು ಅನೈಚ್ಛಿಕ ಪುನರ್ವಸತಿಯಲ್ಲಿ ನಿರ್ಣಾಯಕ ಚಟುವಟಿಕೆಗಳಾಗಿವೆ. ಯೋಜನೆಯ ಕೊನೆಯಲ್ಲಿ ಯೋಜನಾ ಸಂತ್ರಸ್ತರ ಕಾರ್ಯಕ್ಷಮತೆಯನ್ನು ಮೌಲ್ಯಮಾಪನ ಮಾಡುವುದು ಮೂಲಭೂತವಾಗಿ ಮೌಲ್ಯಮಾಪನ ಮಾಡುವಾಗ ವೇಳಾಪಟ್ಟಿಯ ಪ್ರಕಾರ ಚಟುವಟಿಕೆಗಳು ಪ್ರಗತಿಯಲ್ಲಿದೆಯೇ ಎಂದು ಖಚಿತಪಡಿಸಿಕೊಳ್ಳಲು ಮೇಲ್ವಿಚಾರಣೆಯನ್ನು ಒಳಗೊಂಡಿರುತ್ತದೆ. ಈ ಉದ್ದೇಶಕ್ಕಾಗಿ, ಯೋಜನೆ ಕುರಿತು ಪ್ರತಿಕ್ರಿಯೆ ನೀಡಲು ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ (M&E) ಯೋಜನೆಯನ್ನು ಅಭಿವೃದ್ಧಿಪಡಿಸುವ ಅಗತ್ಯವಿದ್ದು,ಕಾರ್ಯಕ್ರಮಗಳನ್ನು ವೇಳಾಪಟ್ಟಿಯಲ್ಲಿ ಇರಿಸಿಕೊಳ್ಳಲು ಮತ್ತು ಅವುಗಳನ್ನು ಯಶಸ್ವಿಗೊಳಿಸಲು ಸಹಾಯ ಮಾಡುತ್ತದೆ. ಆರ್&ಆರ್‌ನ ಮೇಲ್ವಿಚಾರಣೆ ಮತ್ತು ಮೌಲ್ಯಮಾಪನವು ಆರ್&ಆರ್‌ನ ಮೂಲ ಉದ್ದೇಶಗಳು,

ಕಾರ್ಯತಂತ್ರಗಳು ಮತ್ತು ವಿಧಾನಗಳ ಯಶಸ್ಸಿನ ಮೇಲೆ ಅನುಷ್ಠಾನಕ್ಕೆ ಅವಕಾಶವನ್ನು ನೀಡುತ್ತದೆ. ಆದಾಗ್ಯೂ, ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ನಡೆಸುವ ಉದ್ದೇಶವು ಆರ್&ಆರ್‌ನ ಚಟುವಟಿಕೆಗಳ ಅನುಷ್ಠಾನದಲ್ಲಿ ದಕ್ಷತೆ ಮತ್ತು ಪರಿಣಾಮಕಾರಿತ್ವವನ್ನು ನಿರ್ಣಯಿಸುವುದು. ಭವಿಷ್ಯದ ಪುನರ್ವಸತಿ ಯೋಜನೆಗೆ ಮಾರ್ಗದರ್ಶಿಯಾಗಿರುವುದು.

ಪರಿಶಿಷ್ಟ ಜಾತಿ, ಅನುಸೂಚಿತ ಬುಡಕಟ್ಟು ಸಮುದಾಯ, ಬಿಪಿಎಲ್ ಕುಟುಂಬಗಳು, ಮಹಿಳಾ ಪ್ರಧಾನ ಕುಟುಂಬಗಳು, ವಿಧವೆಯರು, ವೃದ್ಧರು ಮತ್ತು ಅಂಗವಿಕಲರಂತಹ ಯೋಜನೆ-ಬಾಧಿತ ದುರ್ಬಲ ಗುಂಪುಗಳಿಗೆ ಮೇಲ್ವಿಚಾರಣೆಗೆ ನಿರ್ದಿಷ್ಟ ಆದ್ಯತೆ ನೀಡುತ್ತದೆ. ಆರ್‌ಎಪಿ ಅನುಷ್ಠಾನವನ್ನು ಆಂತರಿಕವಾಗಿ ಮತ್ತು ಬಾಹ್ಯವಾಗಿ ಮೇಲ್ವಿಚಾರಣೆ ಮಾಡಲಾಗುತ್ತದೆ. ಕೆ-ರೈಡ್ ಸಾಮಾಜಿಕ ನಿರ್ವಹಣಾ ಘಟಕದ ಕ್ಷೇತ್ರ ಮಟ್ಟದ ಅಧಿಕಾರಿಗಳ ಮೂಲಕ ಆಂತರಿಕ ಮೇಲ್ವಿಚಾರಣೆಗೆ ಜವಾಬ್ದಾರರಾಗಿರುತ್ತಾರೆ ಮತ್ತು ಆರ್‌ಎಪಿ ಅನುಷ್ಠಾನದ ಪ್ರಗತಿಯ ಕುರಿತು ತ್ರೈಮಾಸಿಕ ವರದಿಗಳನ್ನು ಸಿದ್ಧಪಡಿಸುತ್ತಾರೆ. ನಿಯಮಿತ ತ್ರೈಮಾಸಿಕ ಮೇಲ್ವಿಚಾರಣೆ ಮತ್ತು ಮೌಲ್ಯಮಾಪನಕ್ಕಾಗಿ ಕೆ-ರೈಡ್ ಬಾಹ್ಯ ಆರ್‌ಎಪಿ ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಸಲಹೆಗಾರರನ್ನು ನೇಮಿಸಿಕೊಳ್ಳುತ್ತದೆ. ಆರ್‌ಎಪಿ ಅನುಷ್ಠಾನದ ಮಧ್ಯ-ಅವಧಿಯ ಮತ್ತು ಅಂತಿಮ-ಅವಧಿಯ ಅಂತಿಮ ಆಡಿಟ್‌ಗಾಗಿ ಕೆ-ರೈಡ್ ನಿಂದ ಸ್ವತಂತ್ರ ಆರ್‌ಎಪಿ ಲೆಕ್ಕ ಪರಿಶೋಧಕ ಸಲಹೆಗಾರರನ್ನು ನೇಮಿಸಿಕೊಳ್ಳಲಾಗುತ್ತದೆ.

### **1.14.1.** ವರದಿ

ಆರ್‌ಎಪಿ ಮೇಲ್ವಿಚಾರಣೆ ಮತ್ತು ಅನುಷ್ಠಾನಗೊಳಿಸುವುದು ಕೆ-ರೈಡ್ ಜವಾಬ್ದಾರಿ. ಕೆ-ರೈಡ್ ಪುನರ್ವಸತಿ ಚಟುವಟಿಕೆಗಳ ಕುರಿತು ತ್ರೈಮಾಸಿಕ ಪ್ರಗತಿ ವರದಿಗಳನ್ನು ಸಿದ್ಧಪಡಿಸುತ್ತದೆ ಮತ್ತು ಸಂಬಂಧಪಟ್ಟವರಿಗೆ ಪ್ರತಿಯನ್ನು ಸಲ್ಲಿಸುತ್ತದೆ. ಸ್ವತಂತ್ರ ಆರ್‌ಎಪಿ ಆಡಿಟ್ ಕನ್ಸಲ್ಟೆಂಟ್‌ಗಳು ಪ್ರತಿ ಆಡಿಟ್‌ನ ನಂತರ ಕರಡು ಮತ್ತು ಅಂತಿಮ ವರದಿಗಳನ್ನು ಕೆ-ರೈಡ್ ಮತ್ತು ಸಂಬಂಧಪಟ್ಟವರಿಗೆ ಸಲ್ಲಿಸುತ್ತಾರೆ ಮತ್ತು ಅರ್ಹ ಸಂತ್ರಸ್ತರಿಗೆ ಪರಿಹಾರವನ್ನು ಸರಿಯಾಗಿ ಒದಗಿಸಲಾಗಿದೆಯೇ ಮತ್ತು ಪುನರ್ ಸ್ಥಾಪನೆ ಮತ್ತು ಪುನರ್ವಸತಿ ಗುರಿಗಳನ್ನು ಸಾಧಿಸಲಾಗಿದೆಯೇ ಮತ್ತು ಮುಖ್ಯವಾಗಿ ಜೀವನೋಪಾಯಗಳು ಮತ್ತು ಜೀವನಮಟ್ಟವನ್ನು ಮರು-ಸಂಗ್ರಹಿಸಲಾಗಿದೆಯೇ/ ವರ್ಧಿತ ಮತ್ತು ಸುಧಾರಣೆಗೆ ಸೂಕ್ತ ಶಿಫಾರಸುಗಳನ್ನು ಸೂಚಿಸಲಾಗುತ್ತದೆ. ನಿಯೋಜನೆ ಪೂರ್ಣಗೊಂಡ ನಂತರ ಕರಡು ವರದಿಯ ಸಲ್ಲಿಕೆಯನ್ನು ಕೈಗೊಳ್ಳಲಾಗುವುದು ಮತ್ತು ಕೆ-ರೈಡ್ ಮತ್ತು ಸಂಬಂಧಪಟ್ಟವರಿಂದ ಪ್ರತಿಕ್ರಿಯೆಯನ್ನು ಸ್ವೀಕರಿಸಿದ ನಂತರ ಅಂತಿಮ ವರದಿಯನ್ನು ಸಲ್ಲಿಸಬೇಕು.